ಬೆಲೆ: ಎರಡು ಆಣೆ

ಕರ್ಮವೀರ

KARMAVEER WEEKLY, HUBLI

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ, ಎಂ.ಎ.

Editor:
H. R. PUROHIT, M. A.

—[ಸಂಪುಟ ೧೯]— ಹುಬ್ಬಳ್ಳಿ ಸೋಮವಾರ ತಾರೀಖು ೧೫--೧೨--೧೯೪೭ —[ಸಂಚಿಕೆ ೪೯]—

ಪಾಶ್ಚಾತ್ಯ ನಾಗರಿಕತೆ ಪಾಶ್ಚಾತ್ಯರಿಗೇ ಕಂಟಕಪ್ರಾಯ ?

ಸ್ತ್ರೀಯರ ಸ್ವಾತಂತ್ರ್ಯಮೋಹ-ಗೃಹತ್ಯಾಗ-ಕಾರಖಾನೆಗಳಲ್ಲಿಯ ದಾಸ್ಯ ಜೀವನ-ಗೃಹಸುಖದನಾಶ-ಜನಾಂಗದ ಸಂಸ್ಕೃತಿಯ ಅಧಃಪಾತ

ಮಾನಸಿಕ ವ್ಯಗ್ರತೆ, ಆದರಿಂದ ಸ್ತ್ರೀ ಪುರುಷರಿಬ್ಬರಿಗೂ ಉಂಟಾಗುವ ಭಯಂಕರ ಅತೃಪ್ತಿ, ಮುಂದಿನ ಪೀಳಿಗೆಯ ಮೇಲಾಗುವ ದುಷ್ಪರಿಣಾಮ ಇತ್ಯಾದಿಗಳಿಂದ ಆಧುನಿಕ ಪಾಶ್ಚಾತ್ಯ ಸಮಾಜವನ್ನು ಉಳಿಸಬೇಕಾದರೆ, ಅದರ ನೀತಿ, ನಡತೆ, ಆರ್ಥಿಕಸ್ಥಿರತೆ, ಗೃಹಸುಖ ಇವುಗಳನ್ನು ಪುನರ್ರಚಿಸಬೇಕಾದರೆ ಗೃಹಸ್ಥಧರ್ಮವನ್ನು ಜನತೆಗೆ ಬೋಧಿಸಲು ಸರಕಾರಗಳಿಂದು ಗಂಭೀರವಾದ ಶಾಸ್ತ್ರೀಯ ಉಪಾಯಗಳನ್ನು ಯೋಜಿಸದಿದ್ದರೆ ಗತ್ಯಂತರವಿಲ್ಲವೆಂದು "ಆಧುನಿಕ ಸ್ತ್ರೀಯರು" ಎಂಬ ಪ್ರಬಂಧದಲ್ಲಿ ನ್ಯೂಯಾರ್ಕಿನ ಸುಪ್ರಸಿದ್ಧ ಮನಃಶಾಸ್ತ್ರವಿದ್ವಾಂಸರಾದ ಡಾ. ಮ್ಯಾರೀನಿಯಾ ಎಫ್. ಫಾರ್ನ್‌ಹ್ಯಾಮರು ವೈಜ್ಞಾನಿಕವಾಗಿ ಪ್ರತಿಪಾದಿಸಿದ್ದಾರೆ. ಅವರ ಪ್ರತಿಪಾದನೆಯ ಸಾರವನ್ನು ಕೆಳಗೆ ಕೊಡಲಾಗಿದೆ.

ಮನೆ ಹಾಳಾಯಿತು !

ನಮಗಿಂದು ಪಾಶ್ಚಾತ್ಯರೇ ಹೊಸ ನಾಗರಿಕತೆಯನ್ನು ತಿಳಿಸಿಕೊಟ್ಟವರೆಂದು ಅನೇಕರ ತಿಳಿವಳಿಕೆಯಿದೆ. ಅದು ತಕ್ಕಮಟ್ಟಿಗೆ ನಿಜ. ಹಿಂದಿನವರಿಗಿಂತ ನಾವಿಂದು ಹೆಚ್ಚು ಸಂಸ್ಕೃತರೂ ಸುಖಿಗಳೂ ಆಗಿದ್ದೇವೆಂದು ಕೆಲವರ ಮತ. ಅದೊಂದು ಪಾಕ್ಷಿಕ ಸತ್ಯ. ಕಾರಣವೇನೆಂದರೆ, ಈ ಸಂಸ್ಕೃತನೆಂದು ಕರೆದುಕೊಳ್ಳುವ ಜಗತ್ತಿಂದು ಹಿಂದಿನವರಿಗಿದ್ದಷ್ಟು ತೃಪ್ತಿಯೂ ಇಲ್ಲದೆ ಮಾನಸಿಕ ರೋಗಿಯಂತೆ ಜೀವನದ ನಾನಾ ಕ್ಷೇತ್ರಗಳಲ್ಲಿ ಉದ್ವಿಗ್ನ ಮನಸ್ಕತೆಯಿಂದ ಅವಿಶ್ರಾಂತವಾಗಿ ದಿಕ್ಕುಗಾಣದೆ ಚಂಚಲಿಸುತ್ತಿದೆ. ಇದರ ಮೂಲವೇನೆಂಬುದನ್ನು ಹುಡುಕಲು ಅನೇಕ ವಿದ್ವನ್ಮಣಿಗಳು ತಲೆಕೆರೆದುಕೊಳ್ಳಹತ್ತಿದ್ದಾರೆ. ಆರ್ಥಿಕ ಸುರಕ್ಷಿತತೆಯಿಲ್ಲ, ಸಾಮಾಜಿಕ ಸೌಖ್ಯವಿಲ್ಲ ಎಂದು ಮುಂತಾಗಿ ಹೆಂಗಸರು, ಬಡವರು, ಮತ್ತು ಗುರಿಯಿಲ್ಲದೆ ಅಂಡಲೆವ ಯುವ ಜನರು ಹಳ್ಳಿಯಿಂದ ದಿಲ್ಲಿಯವರೆಗೂ ಹೂಲಿಯೆಬ್ಬಿಸಿ ಗಡಬಡಿಸಹತ್ತಿದ್ದಾರೆ. ಈ ಸಮಸ್ಯೆಯನ್ನು ಮನಃಶಾಸ್ತ್ರ ರೀತ್ಯಾ ಅಭ್ಯಸಿಸಿ ಶಾಸ್ತ್ರೋಕ್ತ ಮಾರ್ಗದರ್ಶನವನ್ನು ಮಾಡಲು ನ್ಯೂಯಾರ್ಕಿನ ಡಾ. ಮ್ಯಾರೀನಿಯಾ ಫಾರ್ನಹ್ಯಾಂರವರು ಇಂದು ಪ್ರಯತ್ನ ಮಾಡಿ ಸಾಫಲ್ಯ ಹೊಂದಿದ್ದು ಜಗತ್ತಿನ ಪುಣ್ಯವೆಂದೇ ಹೇಳಬೇಕು.

ನಾಗರಿಕತೆಯ ಇತಿಹಾಸವನ್ನು ಅವಲೋಕಿಸಿದರೆ ಸಮಜ (ಪ್ರಾಣಿಗಳ ಕೂಟ) ದಿಂದ ಭಿನ್ನವಾಗಿ ಮಾನವನು ಸಮಾಜವನ್ನು ತನಗಾಗಿ ರಚಿಸಿಕೊಂಡುದು ಎದ್ದುಕಾಣುತ್ತದೆ. ಮೃಗಪಕ್ಷಿಗಳು ತಮ್ಮ ಮರಿ ಮೊಟ್ಟೆಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗುವ ವರೆಗೆ, ಅಂದರೆ ಅಲ್ಪ ಕಾಲಿಕವಾದ ಅವುಗಳ ಬಾಲ್ಯದಶೆಯಲ್ಲಿ, ಅವುಗಳೊಡನೆ ಗೂಡುಗವಿಗಳಲ್ಲಿ ವಾಸಿಸಿ ಅನಂತರ ಸ್ವಚ್ಛಂದವಾಗಿ ತಿರುಗುವುವು; ಸಿಟ್ಟಿ ಇಳಿದಲ್ಲೇ ಪಟ್ಟಣ, ಸಂಕ ಮುರಿದಲ್ಲೇ ಸ್ನಾನ ಎನ್ನುವುವು. ಆದರೆ ಮಾನವನ ಕವಿಭಾವಸಹಜವಾದ ಸಮಾಜ ರಚನೆಯೇ ಬೇರೆಯ ವಿಧದ್ದಾಯಿತು. ಅವನು ಸಮಾಜಕ್ಕೆ ತಳಹದಿಯಾದ 'ಮನೆ' ಎಂಬುದನ್ನು ರಚಿಸಿಕೊಂಡನು ! ಆ 'ಮನೆ' ಎಂಬುದು ಕೇವಲ ಆರ್ಥಿಕ ಮೂಲ ಪ್ರಮಾಣವಾಗಿರದೆ ಮಾನವನ ಪಕ್ವಭಾವದ ರಸದೃಷ್ಟಿಯಿಂದ ವ್ಯಾಪ್ತವಾದದ್ದಾಗಿದೆ. ಆದರಿಂದಲೇ 'ಮನೇ, ಮನೇ, ಮುದ್ದುಮನೆ' ಎಂದು ಮಹಾಕವಿಗಳು ಹಾಡಿ ನಲಿದರು. ಗೃಹಸ್ಥ ಧರ್ಮವನ್ನು ಧರ್ಮಶಾಸ್ತ್ರಕಾರರು ಸಮಾಜದ ಮೂಲಾಧಾರವೆಂದು ಎತ್ತಿ ಹಿಡಿದರು. ಸರ್ವಜ್ಞನಂತಹ ಮಹಾಕವಿ— 'ಬೆಚ್ಚನೆಯ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ। ಇಚ್ಛೆಯಾನರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ"— ಎಂದು ಗೃಹಜೀವನವನ್ನು ಕೊಂಡಾಡಿ ತಣಿದ.

ಆದರಿಂದು ಪಾಶ್ಚಾತ್ಯ ನವನಾಗರಿಕತೆ ತಲೆಹಾಕಿ ತನ್ನ ಪ್ರಭಾವದಿಂದ ಬಾಹ್ಯಸುಖಕ್ಕೆ ಹೆಚ್ಚು ಬೆಲೆಕೊಟ್ಟು ಗೃಹಸುಖವನ್ನು ಸಂಪೂರ್ಣವಾಗಿ ನಾಶಮಾಡಿಬಿಟ್ಟಿದೆ ಎಂದು ಪಾಶ್ಚಾತ್ಯರೇ ಗೊಣಗುಟ್ಟುತ್ತಿರುವುದು ಪೌರಸ್ತ್ಯ ರಾಷ್ಟ್ರಗಳಿಗೊಂದು ಎಚ್ಚರಿಕೆಯಾಗಿದೆ. ಪಾಶ್ಚಾತ್ಯ ಸ್ತ್ರೀಯರೂ ಸ್ತ್ರೀಪಕ್ಷಪಾತಿಗಳೆಂದು ಹೇಳಿಕೊಳ್ಳುವವರೂ ಸ್ತ್ರೀಸ್ವಾತಂತ್ರ್ಯದ ಹೆಸರಿನಲ್ಲಿ ಕೂಗೆಬ್ಬಿಸಿ ಅವಳನ್ನು ಮನೆಬಿಟ್ಟು ಹೊರಡಿಸಿದ್ದರಿಂದ ಸಮಾಜದಲ್ಲಿ ಎಂತಹ ಅವ್ಯವಸ್ಥೆಯುಂಟಾಗಿದೆಯೆಂಬುದು ಡಾ. ಮ್ಯಾರಿನೀಯಾರವರ ಅಭಿಪ್ರಾಯದಿಂದ ತಿಳಿಯಬಹುದಾಗಿದೆ.

ಪಾಶ್ಚಾತ್ಯ ಆಧುನಿಕತೆಗೆ ಫ್ರಾನ್ಸಿನ ಮಹಾಕ್ರಾಂತಿ ಮತ್ತು ಇಂಗ್ಲಂಡಿನ ಔದ್ಯೋಗಿಕ ಕ್ರಾಂತಿಗಳೇ ಆಧಾರವಾಗಿವೆ. ಹಳ್ಳಿಗಳೇ ಕೇಂದ್ರವಾಗಿದ್ದ ಹಳೆಯ ಜೀವನಕ್ರಮವನ್ನು ಒಂದೇಬಾರಿಗೆ ಉರುಳಿಸಿ ನಗರಜೀವನದ ತಳಹದಿಯ ಮೇಲೆ ಕಟ್ಟಲಾರಂಭಿಸಿದ ನಾಗರಿಕತೆಯಿಂದು ಸ್ತ್ರೀ ಪುರುಷರ ಜೀವನದಲ್ಲೇ ಒಂದು ಕ್ರಾಂತಿಯನ್ನುಂಟು ಮಾಡಿ ಅವರನ್ನು ಸದಾ ಅತೃಪ್ತರನ್ನಾಗಿಟ್ಟು ದಿಕ್ಕೆಡಿಸಿದೆ.

ಹೊಸ ದೃಷ್ಟಿ

ಫ್ರಾನ್ಸಿನ ಕ್ರಾಂತಿಯಿಂದ Equality-ಸಮಾನತೆಯ ಕೂಗು ಸ್ತ್ರೀಯರ ತಲೆಯಲ್ಲಿ ಹೊಕ್ಕಿತು. ಸಮಾನತೆಯೆಂದರೆ ಔದ್ಯೋಗಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪುರುಷರೊಡನೆ ಸ್ಪರ್ಧಿಸಿ ಅವರು ಯಾವ ಯಾವ ಕಾರ್ಯಪಟುತ್ವಗಳಿಂದ ಗೌರವ ಸಂಪಾದಿಸುವರೋ ಅವುಗಳಲ್ಲಿ ಅವರನ್ನು ಸರಿಗಟ್ಟಬೇಕೆಂಬ ಹುಚ್ಚು ಸ್ತ್ರೀಯರಲ್ಲಿ ಅತೃಪ್ತರನ್ನೂ ಆಶಾಭಂಗಹೊಂದಿದವರನ್ನೂ ಹೊಡೆದೆಬ್ಬಿಸಿತು. ಪುರುಷರಾದರೂ ಮೊದಲಿನಂತೆ ಗೃಹವನ್ನೇ ಕೇಂದ್ರವಾಗಿ ತೆಗೆದುಕೊಂಡು ತಮ್ಮ ದೈನಂದಿನ ಚಟುವಟಿಕೆಗಳನ್ನು ಸಾಗಿಸುವದನ್ನು ಬಿಟ್ಟು ಔದ್ಯೋಗಿಕ ಕ್ರಾಂತಿಯಿಂದ ಹೊರಟು ಕಾರಖಾನೆ, ಗಣಿ, ಗಿರಣಿಗಳಲ್ಲಿ ಕೆಲಸ ಮಾಡಿ ಅಧಿಕಾರ ಮತ್ತು ವಿಶೇಷ ಧನ ಇವನ್ನು ಪಡೆಯಲು ಹೆಣಗತೊಡಗಿ ಮನೆ ಮಠ ಹೆಂಡತಿ ಮಕ್ಕಳತ್ತ ಕೊಡಬೇಕಾದಷ್ಟು ಲಕ್ಷ್ಯವನ್ನು ಕೊಡದಾದರು. ಇದರಿಂದ ಗೃಹಿಣಿಯರಿಗೆ ತಮ್ಮ ಸ್ಥಾನಮಾನಗಳಲ್ಲಿ ನ್ಯೂನತೆಯುಂಟಾದಂತೆ ತೋರಿ ಅವರೂ ಕೆಲ ದುಟ್ಟಿಗೆ ಆಕಾಂಕ್ಷೆಗಳುಳ್ಳವರಾಗತೊಡಗಿದರು. ಈ ಕಾರಣಗಳಿಂದ ಜೀವನದ ಹೊರಬಿದ್ದು, [illegible] ಕ್ಷೇತ್ರದಲ್ಲಿ ತನಗಿಂತ ಪ್ರಬಲನಾದ ಧನ, ಸ್ಥಾನ, ಮಾನಾದಿಗಳನ್ನು ಗಂಡಸು ಗಳಿಸುವುದಕ್ಕೆ ಮನೆ ನೋಡು ಹೆಂಗಸೂ ಅವನಂತೆಯೇ ಅವನ ರೀತಿಯಿಂದಲೇ ಕೆಲಸ ಮಾಡಬಯಸಿದಳು. ಎಲ್ಲಾ ಕ್ಷೇತ್ರಗಳಲ್ಲೂ ಅವಳು ಅವನ ಸರಿಸಮನಾಗಿ ಮೆರೆಯಬೇಕೆಂಬ ಅಸೂಯಾ ಭಾವಪರವಶಳಾಗಿ ಪೈಪೋಟಿಗೆ ನಿಲ್ಲುವಂತೆ ವಿದ್ಯಾವತಿಯರು ಪ್ರಚಾರ ನಡೆಸತೊಡಗಿದುದರಿಂದಲೆ ಇಂದು ಎಲ್ಲೆಲ್ಲಿ ನೋಡಿದರೂ ಕಾಯಿದೆಯ ಮೂಲಕ ಆಸ್ತಿ, ವಿವಾಹ, ಜೀವನ ಉದ್ಯೋಗ ಈ ಎಲ್ಲದರಲ್ಲೂ ಗಂಡಸಿನೊಡನೆ ಸಮಪಾಲು ಬೇಡುವ ಹವ್ಯಾಸ ಕಂಡುಬರುತ್ತಿದೆ. ಎಲ್ಲೆಲ್ಲಿ ನೋಡಿದರೂ ಪಾಶ್ಚಾತ್ಯ ದೇಶಗಳಲ್ಲಿ ಕಾರಖಾನೆ ಮುಂತಾದವುಗಳಲ್ಲಿ ಹುಡುಗಿಯರು ದುಡಿಯಲುತೊಡಗಿ ಹೊರ ತೃಪ್ತಿಗೆ ಕಾರಣವಾದ ಒಂದು ವಿಧದ "ಗಂಡುರಾಮಿ"ಯರಾಗಿ ಬಾಳುತ್ತಿರುವುದು ಈ ಹೊಸ ದೃಷ್ಟಿಯ ಹೊಡೆತದಿಂದಲೇ.

ಪರಿಣಾಮ

ಮೇಲೆ ಹೇಳಿದ ಹೊಸ ಹುಚ್ಚಿನ ಪರಿಣಾಮವಿಂದು ಗೃಹನಾಶಕ್ಕೆ ಎಡೆಗೊಟ್ಟಿತು. ಮನೆಯಲ್ಲಿ ಕುಟುಂಬ ಜೀವನದ ಶಾಂತಿ ತೃಪ್ತಿಗಳು ಇಲ್ಲದಂತಾದವು. ಎಷ್ಟೇ ಪ್ರಯತ್ನಿಸಿದರೂ ಅತ್ಯಲ್ಪಸಂಖ್ಯಾಕ ಹೆಂಗಸರು ಮಾತ್ರ ಉದ್ಯೋಗಾದಿಗಳಿಂದ ಹಣಗಳಿಸಿ ತಕ್ಕಮಟ್ಟಿಗೆ ಭೌತಿಕ ಅನುಕೂಲತೆಗಳನ್ನು ಕಲ್ಪಿಸಿಕೊಳ್ಳುವ ಶಕ್ತಿಯನ್ನು ಸಂಪಾದಿಸಿರುವರಲ್ಲದೆ ಬಹುಸಂಖ್ಯಾಕರು ಅಲ್ಪವೇತನ, ಅರಕ್ಷಿತತೆ, ಅನಿರ್ವಚನೀಯವಾದ ಅತೃಪ್ತಿ ಇವುಗಳಿಗೆ ಬಲಿಯಾಗಿ ಅನೇಕ ತರಹದ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ಅವರಿಗಿಂದು ಮನೆ ಮೊದಲಿಲ್ಲ, ದುಡಿತ ಅಷ್ಟಕ್ಕಷ್ಟೇ, ಅವರ ಸ್ವಾತಂತ್ರ್ಯದ ಫಲವಾಗಿ ವಿವಾಹಜೀವನದಲ್ಲಿ ಯಾವಾಗಲೂ ಅನಿಶ್ಚಿತ ಭವಿಷ್ಯ; ಕೆಲವರಿಗಂತೂ ವಿವಾಹದ ಪರಿಣಾಮಗಳನ್ನು ಸಹಿಸುವಷ್ಟು ಆರ್ಥಿಕ ಶಕ್ತಿಯಿಲ್ಲದೆ ಅನಾಗರಿಕ ಕ್ರಮದಿಂದ ಅರ್ಧತೃಪ್ತಿ, ಅಲ್ಪ ತೃಪ್ತಿಯ 'ವಿವಾಹ' ಜೀವನ ನಡೆಸಿ ಮುಂದಿನ ಪೀಳಿಗೆಯ ನಾಶಕ್ಕೆ ಇಲ್ಲವೆ ದೌರ್ಬಲ್ಯಕ್ಕೆ ಕಾರಣರಾಗುವರು ಎಂಬೂ ಶಕ್ತಿ ಪ್ರಶ್ನೆ ಎಂಬಂತಾಗಿದೆ. ಹಿಂದೆ ಮನೆಯೆಂದರೆ ಮನುಷ್ಯಪ್ರಕೃತಿಗೆ ಉಚಿತವಾಗಿ ಸಹಜವೆನಿಸುವ ಭಾವನೆಗಳ ಆಗರವಾಗಿತ್ತಲ್ಲದೆ ನಾನಾ ವಿಧದ ಮನೆ ಕೈಗಾರಿಕೆಗಳ ತವರಾಗಿ ಗಂಡಸಿನ ಆದಾಯವನ್ನು ನೂರಕ್ಕೆ ೩೦—೪೦ ರಷ್ಟು ಹೆಚ್ಚಿಸಲು ಕಲಾದಾಲೆಯೆನಿಸಿತ್ತು. ಆ ಮನೆಯು ಈ ಪಾಶವಿಂದೀಚೆಗೆ ಹೊಸ ಕ್ರಾಂತಿಯು ಬೀಸಿದಂದಿನಿಂದ ಈ ಸ್ವರ್ಗವು ಸ್ತ್ರೀ ಪುರುಷರಲ್ಲಿಯ ಪ್ರೀತಿ, ಸಂಕೋಚಗಳನ್ನು ಇಂಗಿಸಿ ಮಕ್ಕಳು ಮರಿಗಳ ಮನಸ್ಸನ್ನು ಕೇವಲ ರಾತ್ರಿಗೆಯ ಕೊಠಡಿ ಇಲ್ಲವೆ ಛತ್ರವಾಗಿ ಪರಿಣಮಿಸಿ ಮಾನವನ ಜಾತೀಕ ಆರೋಗ್ಯವನ್ನು ಹಾಳು ಮಾಡಿ, ನೈತಿಕ ಅಧಃಪತನಕ್ಕೆ ಕಾರಣವಾಗಿ, ಅತೃಪ್ತಿಯ ಆಸ್ಪತ್ರೆಯಾಗಿ ಮಾರ್ಪಟ್ಟಿತು. ಭಾವನೆಯ ಕೋಮಲ ಆಕರವೆನಿಸಿದ ಮನೆಯಲ್ಲಿ ಸ್ಥಾನ ಭದ್ರತೆ, ಸ್ವಾಯತ್ತ, ಸ್ಥಳ ವೈಶಾಲ್ಯ, ಈ ಎಲ್ಲ ಗುಣಗಳಿದ್ದು ಹೆಂಗಸಿನ ಅಹಂತ್ವಕ್ಕೆ ತೃಪ್ತಿಯನ್ನೂ ಗಂಡಸಿನ ಆಶಕ್ತೆ ಶಾಂತಿಯನ್ನೂ ಕೊಡುವಂತಿತ್ತು. ಮನೆಯೆಂದರೆ ಮಾತೃತ್ವದ ವಿಸ್ತೃತ ರೂಪವೆಂದೇ ಮನಃಶಾಸ್ತ್ರಿಗಳ ಅಭಿಪ್ರಾಯ. ಅಲ್ಲಿ ಸಂರಕ್ಷಣೆ, ಹಿತಕರ ವಾತಾವರಣ, ನೋಡಿದರೆ ಸಿಗುತ್ತಿತ್ತು; ಅದು ಪ್ರೀತಿ ವಿಶ್ವಾಸಗಳ ಆಕ್ಷಯ ಪಾತ್ರವೆನಿಸಿತ್ತು. ಅಂತಹ ಮನೆಗಿಂದು ಕರ್ತವ್ಯವೇ ಇಲ್ಲವಾಗಿದೆ. ಈ ಮನೆಯು ಬಗೆಗಿರುವ ಮಾನವನ ಬಾಂಧವ್ಯವು ಅತಿ ಆಳವಾದ ಸುಪ್ತಚೇತನದಲ್ಲಿ ಬೇರುಬಿಟ್ಟಿರುವಂಥದು. ಇದರ ನಾಶದಿಂದಲೇ ಇಂದು ಸ್ತ್ರೀಯರ (Inner balance) ಒಳಗಿನ ಸಮತೋಲವು ಕೆಟ್ಟು, ಅರಕ್ಷಿತತೆ, ಸಂಶಯ, ಮತ್ಸರ, ಪುರುಷ ದ್ವೇಷ, ಅಪತ್ಯದ್ವೇಷ, ಅನೈಸರ್ಗಿಕ ವಾಂಛಿತ್ವ ಇವುಗಳಿಗೆ ಅವರು ಗುರಿಯಾಗುವಂತಾಗಿದ್ದಾರೆ. ಇದರಿಂದ ಹೊರಗೆ ಅಂತಹ ಸ್ತ್ರೀಯರು ಎಷ್ಟೇ ದರ್ಪ, ಸ್ವಾತಂತ್ರ್ಯ, ಇಲ್ಲವೆ ಸ್ವಾಚ್ಛಂದ್ಯ, ಅಧಿಕಾರ ಅತೃಪ್ತಿಗಳನ್ನು ಅನುಭವಿಸಲು ಶಕ್ತರಾದರೂ ಒಳಗೊಳಗೆ ಕೆಲವೊಮ್ಮೆ ತಿಳಿವಂತೆ ಮತ್ತೆ ಕೆಲವೊಮ್ಮೆ ತಿಳಿಯದಂತೆ ಯಾವಾಗಲೂ ಒಂದು ವಿಧದ ಅವರ್ಣನೀಯವಾದ ಭಯಗ್ರಸ್ತತೆಯಲ್ಲಿ ನರಳಬೇಕಾಗಿ ಬಂದಿದೆಯೆಂಬುದನ್ನು ಮನಃಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಗಂಡಸಿನಂತಾಗಲು ಪ್ರಯತ್ನಿಸಿ ತಮ್ಮ ಹೆಂಗಸುತನವನ್ನು ಕಳೆದುಕೊಂಡು ಅತ್ತ ಹೆಂಗಸೂ ಅಲ್ಲ, ಇತ್ತ ಗಂಡಸೂ ಅಲ್ಲ ಎನಿಸಿ, ತಮಗೂ ಪುರುಷರಿಗೂ ಮುಂದಿನ ಪ್ರಜೆಗಳೆನಿಸುವ ಮಕ್ಕಳಿಗೂ ಸಮಾಜಕ್ಕೂ ಅನರ್ಥಕಾರಿಗಳೆನಿಸಿ ಈ ಹೊಸ ಹುಚ್ಚಿನ ಹುಡುಗಿಯರು ಬಾಳ್ವೆಯ ದುಃಖಗಳಿಗೆ ಸೋಮಾರಿಗಳೂ ಪರರುಪ್ರದರೂ [illegible] ಸ್ವಾಪಹಾರಚಿಂತನಪರರೂ ಆಗಿ ಮಾನವಕುಲವನ್ನೇ ಅಧೋಗತಿಗಿಳಿಸುವರೆತ್ತ ಸಾಗಿದ್ದಾರೆ. ಈ ಸ್ತ್ರೀಯರಿಗೆ ಹುಟ್ಟಿದ ಮಕ್ಕಳ ದೃಷ್ಟಿಚಕ್ರವಾಗಿ, ಅವರ ಸಹಜ ಬೆಳವಣಿಗೆಗೆ ಪ್ರತಿಬಂಧಕವುಂಟಾಗಿ, ಯಾಂತ್ರಿಕತೆಗೆ ಒಳಪಟ್ಟು ಅವನ್ನು ಒಂದು ವಿಧದ ಮನೋರೋಗಿಗಳನ್ನಾಗಿ ಮಾರ್ಪಡಿಸುವ ಈ ಗೃಹನಾಶಕ್ಕೆ ಭಯೋತ್ಪತ್ತಿಯ ಸಮಾಜ ಭಾಗಶಃವೆನಿಸಿದೆ. ಇದಕ್ಕೆ ನಿಂದರೆ ಅಂತಹ ಹೊಸ ಹುಚ್ಚಿನ ಹುಡುಗಿಯರು ಆಕರ್ಷಕ್ಕೆ ಕಲೋಪ್ರತ್ಯಕ್ಷವಾಗಿ ನರಳುವರೆ ದೂರ ದೃಷ್ಟಿಯ ಶಕ್ತಿಯ ಜೀವನ ಚರಿತ್ರೆಯನ್ನೋದಿದರೆ ಉತ್ತಮ ಉದಾಹರಣೆ ದೊರೆಯುತ್ತದೆ. ಅವಳ ದುರುಪಯೋಗವನ್ನು ತಿಳಿಸುತ್ತದೆ [illegible] ವ್ಯಾಪಿಸುತ್ತದೆ.

(ಇನ್ನೂ ಇದೆ)

ಸುಂದರ ಪ್ಯಾರೀಸಿನಲ್ಲಿ ಕನ್ನಡಿಗ ವಿದ್ಯಾರ್ಥಿ

ನಗರದ ಅಪೂರ್ವಶೋಭೆ—ಭಾರತೀಯ ವಿದ್ಯಾರ್ಥಿಗಳಿಗೆ ಮಾತ್ರ ಸ್ವಂತ ಭವನವಿಲ್ಲ

[ಲೇ. ಶ್ರೀ ಮಹೇಶ ಘಟರಡ್ಡ್ಯಾಳ]

(ಶ್ರೀ ಘಟರಡ್ಡ್ಯಾಳರು ಪ್ಯಾರೀಸಿನಲ್ಲಿ ನಡೆದ ಅಂತರ್‌ರಾಷ್ಟ್ರೀಯ ಪಂದ್ಯಾಟಗಳಲ್ಲಿ ಭಾಗವಹಿಸಲು ಹೋದ ಧಾರವಾಡ ಕರ್ನಾಟಕ ಕಾಲೇಜಿನ ವಿದ್ಯಾರ್ಥಿ. ಈ ಲೇಖದಲ್ಲಿ ಅವರು ಹಿಂದೀಯರ ದೃಷ್ಟಿಯಿಂದ ಪ್ಯಾರೀಸನ್ನು ಕಂಡಿದ್ದಾರೆ. ತಮ್ಮ ಅನುಭವಗಳನ್ನು ಕುರಿತು ಅವರು ಇನ್ನೂ ಕೆಲ ಲೇಖಗಳನ್ನು "ಕರ್ಮವೀರ" ಕ್ಕಾಗಿ ಬರೆಯುವದಾಗಿ ಮಾತು ಕೊಟ್ಟಿದ್ದಾರೆ.)

ಸೌಂದರ್ಯದಲ್ಲಿ ಶ್ರೇಷ್ಠವಾದ ಪ್ಯಾರಿಸ್ ನಗರದಲ್ಲಿ ಇಂದಿಗೆ ತಿಂಗಳ ೨-೧೫ ದಿವಸ ಪೂರ್ಣ ಮಾಡಿದ್ದೇನೆ. ಈ ರಮಣೀಯ ನಗರದಿಂದ ಕನ್ನಡನಾಡಿಗೇನು ಕಳಿಸಬೇಕೆಂದು ವಿಚಾರ ಮಾಡುವಾಗ ಸರಕಾರದ ನಿರ್ಬಂಧ ನೆನಪಾಯಿತು. ಏನೂ ಕಳಿಸಲು ಬಾರದು. ಆದರೆ ಎಂದಿನಿಂದಲೂ ತನ್ನ ಸೌಂದರ್ಯವನ್ನು ಅಚ್ಚಳಿಯದೆ ಕಾಯ್ದುಕೊಂಡು ಬಂದ "ಪ್ಯಾರಿಸ್" ನಗರದ ಪರಿಚಯವನ್ನು ತಿಳಿಸಲು ಯಾವ ಸರಕಾರದ ನಿರ್ಬಂಧವೂ ಇಲ್ಲ, ಕಂಟ್ರೋಲೂ ಇಲ್ಲ ಅದಕ್ಕಾಗಿ ನಾನು ನೋಡಿದ ಮತ್ತು ಕೇಳಿದ ಸಂಗತಿಗಳನ್ನು ಬರೆಯಬೇಕೆನ್ನುವೆ.

ಜಗತ್ತಿನ ದೊಡ್ಡ ಪಟ್ಟಣಗಳಲ್ಲೊಂದಾದ ಮತ್ತು ಸೌಂದರ್ಯದಲ್ಲಿ ಎಲ್ಲ ನವನಗರಗಳನ್ನು ಮೀರಿದ "ಪ್ಯಾರಿಸ್" ನಗರವು ಕಾಲಗಳು ಬದಲಾದರೂ ಋತುಮಾನಗಳುರುಳಿದರೂ ತನ್ನ ರಮಣೀಯತೆಯನ್ನು ಹಾಗೆಯೆ ಕಾಯ್ದುಕೊಂಡು ಬಂದಿದೆ. ಎರಡನೆಯ ಮಹಾಯುದ್ಧದಿಂದಲೂ ಇದರ ಒಂದು ಕಲ್ಲು ಕೂಡ ಕದಲಿಲ್ಲ. ಹಿಟ್ಲರನ ಬಾಂಬುಗಳು "ಪ್ಯಾರಿಸ್" ನಗರಕ್ಕೆ ಯಾವ ಊನವನ್ನೂ ತಂದೊಡ್ಡಿಲ್ಲ. ಆದರೆ ಜನರು ಯುದ್ಧಪೂರ್ವದಲ್ಲಿದ್ದಂತೆ ಇಲ್ಲ ಮತ್ತು ಆ ಜನಸಂಖ್ಯೆಯೂ ಉಳಿದಿಲ್ಲ. ಸಧ್ಯದ "ಪ್ಯಾರಿಸ್" ನಗರದ ಜನಸಂಖ್ಯೆ ೪೦ ಲಕ್ಷ. ಒಟ್ಟು ಫ್ರಾನ್ಸದ ಜನಸಂಖ್ಯೆ ೪ ಕೋಟಿ. "ಪ್ಯಾರಿಸ್" ಪಟ್ಟಣವು ಆಡಳಿತೆಗಾಗಿ ೨೦ ಭಾಗವಾಗಿ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ಕಾರ್ಪೋರೇಶನ್ ತನ್ನ ತನ್ನ ಆಡಳಿತೆಯನ್ನು ಬೇರೆ ಬೇರೆಯಾಗಿ ನಡೆಸುತ್ತದೆ. Hotel de ville (ಹೋಟೆಲ ದಿ ವಿಲೆ) ಇದು ಎಲ್ಲವುಗಳಿಗಿಂತಲೂ ಮೊದಲನೆಯದು. ಇದು ಪ್ಯಾರಿಸ್ ನಗರಕ್ಕೆ ಪ್ರಮುಖವಾದದ್ದು. ಇದರ ಶ್ರೀಯೇ ಇದರ ಮೇಯರರು ಅಂತರರಾಷ್ಟ್ರೀಯ ಪಂದ್ಯಾಟದ ಪ್ರತಿನಿಧಿಗಳಿಗೆ ಚಹಾಪಾನ ಮಾಡಿಸಿದ್ದು. ಅಂದೇ ಅವರ ಮತ್ತು ನನ್ನ ಪರಿಚಯವಾದದ್ದು.

ಹಂಪೆಯ ಜಾತ್ರೆ

ನಗರ ಮಧ್ಯದಲ್ಲಿಯೇ "ಸೇನ್" ನದಿಯು ಹರಿದಿದೆ. ಇದರಲ್ಲಿ ಸಣ್ಣ ಸಣ್ಣ ಉಗಿಹಡಗಗಳು ಸರಕಿನೊಡನೆ ಅತ್ತಿಂದಿತ್ತ ಅಲೆದಾಡುತ್ತವೆ. ನದಿಯ ಕೆಲಕೆಲವು ಪ್ರಮುಖ ಭಾಗಗಳಲ್ಲಿ ಹೊಸ ಮಾದರಿಯ ಈಜುವ ವ್ಯವಸ್ಥೆಯನ್ನು ಸರಕಾರದವರು ಮಾಡಿದ್ದಾರೆ. ಬೇಸಿಗೆಯ ದಿನಗಳಲ್ಲಿ ಈ ನದಿಯ ತೀರವು ಲಕ್ಷಾಂತರ ಜನರಿಂದ ತುಂಬಿ ತುಳುಕುತ್ತದೆ. ನದಿಯ ತೀರದಲ್ಲಿ ಪುಸ್ತಕ ಭಾಂಡಾರಗಳಿಗೆಂತೂ ಲೆಕ್ಕವೇ ಇಲ್ಲ. ಕುಣಿಯುವ ಮತ್ತು ಹಾಡುವ ಮಂದಿರಗಳೂ ಹೇರಳವಾಗಿವೆ. ಒಟ್ಟಿನಲ್ಲಿ ಈ ನದಿಯ ತೀರವು ವಸಂತ ಋತುವಿನಲ್ಲಿ ಹಂಪೆಯ ಜಾತ್ರೆ ಇದ್ದ ಹಾಗೆ.

ಈ ನಗರದಲ್ಲಿ ಟ್ರಾಮ್ ಗಾಡಿಗಳಿಲ್ಲ. ಆದರೆ ಸುರಂಗ ಮಾರ್ಗದಿಂದ ೩ ಮಿನಿಟಿಗೊಂದು ಗಾಡಿಯು ತಪ್ಪದೇ ಹಗಲು ರಾತ್ರಿ ಅಲೆದಾಡುತ್ತದೆ. ೨ ಆಣೆ (೮ ಫ್ರಾಂಕ್ಸ್) ಕೊಟ್ಟರೆ ಪಟ್ಟಣದ ಬೇಕಾದ ಭಾಗಕ್ಕೆ ಹೋಗಬಹುದು.

"ಸೇನ್" ನದಿಯ ತೀರದ ಒಂದು ಭಾಗದಲ್ಲಿ (Tour Eiffel) "ಟಾವರ್ ಯಫಿಲ್" ೩೧೦ ಮೀಟರ ಎತ್ತರವಾದದ್ದು ಜಗತ್ತಿನ ಎತ್ತರದ ಕಟ್ಟಡದಲ್ಲಿ ೨ ನೆಯ ಸ್ಥಾನವನ್ನು ಹಿಡಿದಿದೆ. ೧೮೮೯ ರಲ್ಲಿ ಅಂತರರಾಷ್ಟ್ರೀಯ ಪ್ರದರ್ಶನವು "ಪ್ಯಾರಿಸ್" ನಗರದಲ್ಲಿ ನಡೆದಾಗ "ಯಫಿಲ್" ಎಂಬ ಫ್ರೆಂಚ್ ಇಂಜನಿಯರರಿಂದ ಇದು ಕಟ್ಟಲ್ಪಟ್ಟಿತು. ಇದರ ಮೇಲೆ ಹೋದರೆ "ಇಡೀ ಪ್ಯಾರಿಸ್" ನಗರವೇ ಒಂದು ರಮಣೀಯ ಉದ್ಯಾನದಂತೆ ಕಾಣಿಸುತ್ತದೆ. "ಪ್ಯಾರಿಸ್" ನಗರದ ಸೌಂದರ್ಯಕ್ಕೆ ಐದರಿಯ ರಸ್ತೆಯಾದ ಕ್ವಾರ್ಟಿಯ ಎರಡೂ ಭಾಗದಲ್ಲಿ ಎರಡೆರಡು ಸಾಲುಗಳಾಗಿ ಹಬ್ಬಿದ ಹಚ್ಚಗಿನ ಗಿಡಗಳು ಹೆಚ್ಚಾಗಿ ಕಳೆಯನ್ನು ತಂದೊಡ್ಡಿವೆ,

ಆರ್ಕ ಡಿ ಟ್ರೊಂಫ್

೧೯೩೭ ರಲ್ಲಿ ಅದೇ ಅಂತರರಾಷ್ಟ್ರೀಯ ಪ್ರದರ್ಶನ ಮತ್ತೊಮ್ಮೆ ಪ್ಯಾರೀಸದಲ್ಲಿ ನಡೆದಾಗ "ಪ್ಯಾಲೇಸ್ ರಿ ಶ್ಯಾಯೋ" ಎಂಬ ಸುಂದರವಾದ ಮತ್ತು ವಿಶಾಲವಾದ ಭವ್ಯ ಕಟ್ಟಡವೊಂದು ಪ್ರದರ್ಶನಕ್ಕಾಗಿ ಕಟ್ಟಲ್ಪಟ್ಟಿತು. ಈ ಭವ್ಯ ಮಂದಿರದಲ್ಲಿ "ಪ್ಯಾರಿಸ್"ದಲ್ಲಿಯೇ ಅತಿ ದೊಡ್ಡ ಥೇಟರ, ಗಾಯನ ಮಂದಿರ ಮತ್ತು ರೆಸ್ಟೊರಂಟುಗಳಿವೆ. ಇದರ ಮುಂಭಾಗದಲ್ಲಿಯೇ ನಾನಾ ಬಣ್ಣಗಳಿಂದ ರಂಜಿಸುವ, ನೋಡುವವರ ಕಂಗಳಿಗೆ ಆನಂದವನುಂಟು ಮಾಡುವ ಹೂದೋಟವೊಂದಿದೆ. ವಸಂತಋತುವಿನಲ್ಲಿ ಈ ಉದ್ಯಾನವು ಪ್ರೀತಿಯ ಮಿಥುನಗಳಿಂದ ನಲಿಯುತಿದೆ. ಇಲ್ಲಿಂದ ಸ್ವಲ್ಪೇ ದೂರದಲ್ಲಿ "ಆರ್ಕ ದಿ ಟ್ರಿಂಫ್" ಎಂಬ ಹೆಬ್ಬಾಗಿಲವೊಂದಿದೆ ಇದನ್ನು "ನೆಪೋಲಿಯನ್ ಬೋನಾಪಾರ್ಟ" ತನ್ನ ಮೊದಲನೆಯ ಯುದ್ಧದ ವಿಜಯಕ್ಕಾಗಿ ಕಟ್ಟಿಸಿದನು. ಈ ಗೇಟಿನ ಕಟ್ಟಡದ ಮಧ್ಯಭಾಗದಲ್ಲಿ ಅವನು ತನ್ನ ವಿಜಯದ ವರ್ಣನೆಯನ್ನು ಕಲ್ಲಿನಲ್ಲಿ ಕೆತ್ತಿಸಿದ್ದಾನೆ. ಅಲ್ಲದೆ ತನ್ನ ಸೈನಿಕರು ಕುದುರೆಯನ್ನೇರಿದ ಕೆಲವು ಚಿತ್ರಗಳನ್ನೂ ಅದೇ ಕಟ್ಟಡದಲ್ಲಿ ಕೆತ್ತಿಸಿದ್ದಾನೆ. ಈ ಗೇಟಿನ ಮುಂಭಾಗದಲ್ಲಿಯ ರಾಜಮಾರ್ಗವು ನೆಪೋಲಿಯನ್ನನ ಕಾಲದ್ದು. ಅಂದಿಗೂ ಇಂದಿಗೂ ಪ್ಯಾರಿಸ್‌ದಲ್ಲಿ ಹಿರಿದಾದ ಹೆದ್ದಾರಿ. ಈ ರಸ್ತೆಯ ಒಂದು ಚೌಕು "ಬ್ಲೂರ್" ಮತ್ತು "ಆರ್ಕ ಡಿ ಟ್ರೊಂಫ್" ಇವುಗಳ ಮಧ್ಯದಲ್ಲಿದೆ. ಈ ಚೌಕು ಪ್ಯಾರಿಸ್‌ದ ಶ್ರೀಯೇ ದೊಡ್ಡದು. ನಗರದ ಪ್ರತಿಯೊಂದು ಮಾರ್ಗವೂ ಇಲ್ಲಿ ಬಂದು ಕೂಡಿದೆ. "ಪ್ಲಾಸ್ ಡಿ ಲಾ ಕಾಂಕರ್" ಈ ಚೌಕು ೧೦೦ ಫೂಟು ಉದ್ದ ೭೦೦ ಫೂಟು ಅಗಲವಿದೆ. ಈ ಚೌಕಿಯ ಮಧ್ಯದಲ್ಲಿ ನೆಪೋಲಿಯನ್ನನು ಈಜಿಪ್ತದಿಂದ ತಂದ ತನ್ನ ಗೆಲವಿನ "ಓಬಿಲಸ್ಕ ದಿ ಲೂಕ್ಸರ್" (Obelisque de Louqsor) ಎಂಬ ವಿಜಯಸ್ತಂಭವನ್ನು ನಿಲ್ಲಿಸಿದ್ದಾನೆ. ಅದರಲ್ಲಿ ಅವನ ವಿಜಯದ ವರ್ಣನೆಯಿದೆ.

"ಲ್ಯೂರ್" ಪ್ಯಾರಿಸ್ ಮ್ಯೂಜಿಯಮ್‌ಗಳಲ್ಲಿಯೇ ದೊಡ್ಡದು. ಇಲ್ಲಿ ಮೊದಲಿನ ಕಾಲದ ಫ್ರೆಂಚ ಅರಸರ ಕೈಯಿಂದ ತೆಗೆದ ಬಣ್ಣದ ಚಿತ್ರಗಳು ಇಂದಿಗೂ ಅಚ್ಚಳಿಯದೆ, ಈಗ ತೆಗೆದಿವೆಯೇನೋ ಎನ್ನುವಂತಿವೆ.

ಅಳಿದ ಅರಸುಕುಲದ ಚಿತ್ರಗಳು

ಇದರಂತೆಯೇ "ವರ್ಸಲೀಸ್" ದಲ್ಲಿಯ ಫ್ರಾನ್ಸದೇಶದ ಹಿಂದಿನ ಅರಸರ ಅರಮನೆಯಲ್ಲಿ ಉತ್ತಮವಾದ ಚಿತ್ರಗಳಿವೆ. ಅರಸರು ಮಾಡಿದ ಕೆಲವು ಕೃತಿಗಳೂ ಅವರ ಲಗ್ನದ ಮಂಟಪವೂ ಲುಯಿ XV ಅರಸನ ಹೆಂಡರು ಮಕ್ಕಳು ಸಹಿತ ತೆಗೆದ ಚಿತ್ರಗಳೂ ಇವೆ. ಅಂತರ್‌ರಾಷ್ಟ್ರೀಯ ಪಂದ್ಯಾಟಗಳು ಮುಗಿದ ಮೇಲೆ "ವರ್ಸಲಿಸ್" ದ ಮೇಯರರಾದ "ಜಾರ್ಜ ವಿಲ್ಸನ್"ರು ಎಲ್ಲ ಪ್ರತಿನಿಧಿಗಳನ್ನು ಆಮಂತ್ರಿಸಿದಾಗ ನನಗೂ ಕರೆ ಬಂದಿತ್ತು. ಆಗ್ಯೆ ಅವರ ಮತ್ತು ನನ್ನ ಪರಿಚಯವಾಯಿತು. ನನ್ನ ಗಾಂಧಿ ಟೊಪ್ಪಿಗೆಯನ್ನು ನೋಡಿ "ತಾವು ಗಾಂಧಿ ದೇಶದವರೋ ?" ಎಂದು ಕೇಳಿ ತಮ್ಮ ಸಂತೋಷ ವ್ಯಕ್ತ ಮಾಡಿದರು. ಅವರೇ ವರ್ಸಲೀಸದ ಸ್ವಲ್ಪ ವಿಷಯ ಹೇಳಿ ೧೯೧೮ ರಲ್ಲಾದ ಒಪ್ಪಂದದ ಕರಾರುಗಳನ್ನು ಬರೆದು ಸಹಿ ಹಾಕಿದ "ಟೇಬಲ್" ತೋರಿಸಿದರು. ಫ್ರಾನ್ಸ ದೇಶದ ಎಲ್ಲ ಅರಸರೂ ಅದೇ ಅರಮನೆಯಲ್ಲಿ ವಾಸಿಸಿದ್ದರು. ಅವರ ಎಲ್ಲ ಚಿತ್ರಗಳು ಗೋಡೆಯ ಮೇಲೆ ಕೈಯಿಂದ ತೆಗೆಯಲ್ಪಟ್ಟಿವೆ.

"ನೋತರ್ ಡ್ಯಾಮ್" (Notre Dame) ಇದು ಯುರೋಪದಲ್ಲಿಯೇ ಪುರಾತನವಾದದ್ದೂ ಎತ್ತರವಾದದ್ದೂ ರಮಣೀಯವಾದದ್ದಾಗಿದೆ. ಇದರ ಮುಂಭಾಗದ ಪ್ರತಿಯೊಂದು ಕಲ್ಲಿನಲ್ಲಿ ೧೫-೨೦ ಫೂಟು ಎತ್ತರವಾದ ಕ್ರಿಸ್ತನ ಭಾವ ಚಿತ್ರಗಳನ್ನು ಕೆತ್ತಿದ್ದಾರೆ. ಇದರಿಂದ ೨೦೦-೩೦೦ ಫೂಟಿನಂತರದಲ್ಲಿಯೇ "ಪ್ಯಾಲೇಸ್ ದಿ ಜಸ್ಟಿಸ್" (Palace de Justice) ಕಟ್ಟಡವಿದೆ, ಇದರಲ್ಲಿ ೧೭೦೦ ರಿಂದ ಇಲ್ಲಿಯವರೆಗೆ ಆಗಿ ಹೋದ ಪ್ರಸಿದ್ಧ ನ್ಯಾಯಾಧೀಶರ ಭಾವಚಿತ್ರಗಳನ್ನು ಸಂಗಮರವರಿಕಲ್ಲಿನಲ್ಲಿ ಕಡೆದಿರಿಸಿದ್ದಾರೆ. ಇಂದಿಗೂ ಫ್ರಾನ್ಸದೇಶದ ಸುಪ್ರೀಮ ಕೋರ್ಟ ಇದರಲ್ಲಿಯೇ ನಡೆಯುತ್ತಿದೆ.

ವಿಶ್ವವಿದ್ಯಾಲಯ ನಗರ

"ಸಿತೆ ಯುನಿವ್ಹರ್ಸಿತೇರಿಯೂ" (Cite Universitaire) ಇಲ್ಲಿ ಎಲ್ಲ ದೇಶದ ಎಲ್ಲ ಜನಾಂಗದ ವಿದ್ಯಾರ್ಥಿಗಳು ವಾಸಿಸುತ್ತಾರೆ. ಪ್ರತಿಯೊಂದು ರಾಷ್ಟ್ರದವರು ತಮ್ಮ ತಮ್ಮ ವಿದ್ಯಾರ್ಥಿಗಳಿಗಾಗಿ ಒಂದೊಂದು ಪ್ರತ್ಯೇಕ ಹಾಸ್ಟೆಲ್ ಕಟ್ಟಿಸಿದ್ದಾರೆ. ಆದರೆ ಹಿಂದುಸ್ತಾನದ ವಿದ್ಯಾರ್ಥಿಗಳಿಗಾಗಿ ಒಂದೂ ಅಂಥ ಮನೆ ಇಲ್ಲ. ವಾಸಿಸಲು ಸ್ಥಳವೂ ಇಲ್ಲ. ಆಕ್ಟೋಬರ ಮೊದಲನೆ ವಾರದಲ್ಲಿ ಲಂಡನ್ನದಲ್ಲಿ ಹಾಯಕಮಿಶನರರಾದ ಕೃಷ್ಣ ಮೆನನ್ನರು ಇಲ್ಲಿಗೆ ಬಂದಾಗ ಈ ವಿಚಾರವಾಗಿ ಕೇಳಲು, ಅವರು ಈ ವಿಷಯವನ್ನು ಹಿಂದುಸ್ತಾನ ಸರಕಾರಕ್ಕರುಹಿ ಸ್ವಲ್ಪೇ ದಿನಗಳಲ್ಲಿ ಭಾರತಭವನ ಒಂದನ್ನು ಅದೇ ಸ್ಥಳದಲ್ಲಿ ಕಟ್ಟಲು ಪ್ರಯತ್ನಿಸುವ ಆಶ್ವಾಸನ ಕೊಟ್ಟರು. ಸಿತೆ ಯುನಿವರ್ಸಿತೆರಿಯ ವಿದ್ಯಾರ್ಥಿಗಳೆಲ್ಲರೂ ಒಂದೇ ಮನೆಯಲ್ಲಿ ಊಟ ಮಾಡುತ್ತಾರೆ. "Maison Internationale" ಇದು ಅಮೇರಿಕದ ಓರ್ವ ಶ್ರೀಮಂತನಿಂದ ಕಟ್ಟಿಸಲ್ಪಟ್ಟಿದೆ. ಜಗತ್ತಿನ ವಿದ್ಯಾರ್ಥಿಗಳು ಇಲ್ಲಿ ವರ್ಣಭೇದವಿಲ್ಲದೆ ಜಗತ್ತಿನ ಜ್ಞಾನ ಪಡೆಯಲೆಂಬ ಉದ್ದೇಶದಿಂದ ಈ ಮನೆಯನ್ನು ಇಲ್ಲಿ ಕಟ್ಟಿಸಲಾಗಿದೆ.

ಈ ನಗರದಲ್ಲಿ ಒಟ್ಟಿಗೆ ೨೫ ಹಿಂದುಸ್ತಾನದ ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ಓರ್ವ ಬಂಗಾಲದ ತರುಣಿಯರೂ ಇದ್ದಾರೆ. ಹೆಚ್ಚು ವಿದ್ಯಾರ್ಥಿಗಳು ಪಾಂಡಿಚೇರಿಯಿಂದ ಬಂದವರಿದ್ದಾರೆ. ಈ ನಗರದಲ್ಲಿ ಹಿಂದೀಯರ ಊಟದ ಮನೆ ಅಥವಾ ತಿಂಡಿಯ ಮನೆ ಇಲ್ಲ.

ಇಂಡಿಯಾ ಲೀಗ್ ಆಫ್ ಫ್ರಾನ್ಸ, ಇದು ಹಿಂದುಸ್ತಾನದ ವಿದ್ಯಾರ್ಥಿಗಳಿಗಾಗಿ ಮತ್ತು ಹಿಂದುಸ್ತಾನದ ಪರವಾಗಿ ಚಟುವಟಿಕೆ ನಡೆಸಿದೆ. ಇದರ ಸಧ್ಯದ ಅಧ್ಯಕ್ಷರು "ಡಾ. ಸಂಭೊ" ಎಂಬವರಿದ್ದಾರೆ.

ಪಾಶ್ಚಾತ್ಯ ನಾಗರಿಕತೆ ಪಾಶ್ಚಾತ್ಯರಿಗೇ ಕಂಟಕಪ್ರಾಯ

[೧ ನೇ ಪುಟದಿಂದ]

ಅವಳ ಆತ್ಮಕ್ಕಾದ ಚಿತ್ರಹಿಂಸೆಯನ್ನು ಬಣ್ಣಿಸಲು ಆದಿಶೇಷನಿಗೂ ಅಸಾಧ್ಯವೆಂದು ಬಲ್ಲವರ ಮತ.

ಸ್ತ್ರೀ ಪುರುಷರ ಭಿನ್ನತೆ

ಹೆಂಗಸೂ ಗಂಡಸೂ ಪ್ರಾಕೃತಿಕವಾಗಿ ಏಕರೂಪರಲ್ಲವೆಂಬುದನ್ನು ಶರೀರಶಾಸ್ತ್ರ ಮನಃಶಾಸ್ತ್ರಗಳು ಘಂಟಾಘೋಷವಾಗಿ ಸಾರುತ್ತವೆ. ಅವರು ಕಾಲದಲ್ಲಿ ಬಂದರೆ, ವ್ಯಕ್ತಿಶಃ ಬೇರೆ ಮತ್ತು ಯಾವಾಗಲೂ ಪರಸ್ಪರ ಪೂರಕರು, ಅವರ ಪರಸ್ಪರ ಸಂಬಂಧದಲ್ಲಿ ಅವರಲ್ಲಿರುವ ಸಾಮ್ಯವಲ್ಲ—ಭೇದವೇ ಪ್ರಧಾನ ಪಾತ್ರವಹಿಸಿ ಅವರಿಬ್ಬರಿಗೂ ಹಿತವಾಗುವಂತೆ ನಡೆಸಿಕೊಡುತ್ತದೆ. ಆಧುನಿಕ ಸ್ತ್ರೀಪಕ್ಷಪಾತಿತ್ವ (feminism) ಎಂಬುದು ಕೇವಲ ಸ್ತ್ರೀತ್ವಾಭಾವವೇ ಸರಿ. ಇದರಿಂದ ಸಾಮಾಜಿಕವಾಗಿ ಸ್ತ್ರೀಪುರುಷರಿಗಲ್ಲದೆ ಅವರ ಸಂತತಿಗೂ ಬೆಲೆಯಿಲ್ಲದಂತಾಗಿ ಹೋಗಿದೆ; ವ್ಯಕ್ತಿತ್ವಕ್ಕೆ ಪೋಷಣೆ ದೊರೆಯದಂತಾಗಿದೆ. ಗಂಡಸು ವೈವಾಹಿಕ ಜೀವನದಲ್ಲಿ ಯಾಜಮಾನ್ಯ ವಹಿಸುವ ಮತ್ತು ಹೆಂಗಸು ಅವನ ಛಂದಾನುವರ್ತಿಯಾಗಿರುವುದು ಪ್ರಕೃತಿಸಿದ್ಧವು. ಅದರಿಂದಲೇ ಇಬ್ಬರಿಗೂ ಆತ್ಮತೃಪ್ತಿ ಮತ್ತು ಸಾಮಾಜಿಕ ಬೆಲೆ ದೊರೆಯುತ್ತದೆ. ಸ್ತ್ರೀತ್ವವನ್ನು ಅಂದರೆ ಪ್ರೀತಿ ಮತ್ತು ಮಾರ್ದವವನ್ನು ಬೆಳೆಸಿಕೊಂಡು ಮಾತೃತ್ವವನ್ನು ಬಯಸಿ ವಿವಾಹ ಜೀವನ ನಡೆಸುವ ಸ್ತ್ರೀಯು ಮನಃಶಾಸ್ತ್ರದ ಪ್ರಕಾರ ತನಗೂ ಗಂಡನಿಗೂ ಮಕ್ಕಳಿಗೂ ಸಮಾಜಕ್ಕೂ ತೃಪ್ತಿ ಕೊಡಬಲ್ಲಳು. ಆಗಲೇ ಅವಳು "ಸಾ ಭಾರ್ಯಾ ಯಾ ಗೃಹೇ ದಕ್ಷಾ" ಎನಿಸಿಕೊಳ್ಳಬಲ್ಲಳು.

ತರಣೋಪಾಯ

ಮೇಲೆ ಕೊಟ್ಟ ಸ್ವಾತಂತ್ರ್ಯವೆಂದು ತಿಳಿದುಕೊಂಡ ಹುಚ್ಚು ಬೇಕೆಂಬ ಇಂದಿನ ವಿದ್ಯಾವಂತ ಸ್ತ್ರೀಯರ ಅನೈಸರ್ಗಿಕ ಮತ್ತು ಸ್ವಪರದ್ರೋಹ ಬುದ್ಧಿಯನ್ನು ಸ್ವಚ್ಛಪಡಿಸಲು ಸರಕಾರ ತಕ್ಕ ಕ್ರಮವನ್ನು ಕೈಕೊಳ್ಳಬೇಕು. ೧೮ ವರ್ಷಗಳಾಗುವವರೆಗೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದನ್ನು ಹೆಂಗಸರಿಗೆ ವಹಿಸಿದರೆ, (ಆ ಪ್ರಕಾರ ಅವರಿಗೆ ಮೊದಲು ಶಿಕ್ಷಣ ದೊರೆತರೆ) ವಿದ್ಯಾಭ್ಯಾಸಕ್ಕಾಗಿ ಸರಕಾರ ಮತ್ತು ಸಮಾಜವಿಂದು ಮಾಡುತ್ತಿರುವ ಮತ್ತು ಮಾಡಿ ಪೂರಯಿಸಲಾಗದಿರುವ ಖರ್ಚನ್ನು ಉಳಿಸಬರುವುದಲ್ಲದೆ ಸರ್ವ ಮಾನವ ಜೀವಿಗಳಿಗೂ ಅಪ್ಯಾಯಮಾನವಾದ ಗಾರ್ಹಸ್ಥ ಪ್ರೇಮಧಾರೆಯಿಂದ ಹೃದಯಶುದ್ಧಿಯುಂಟಾಗುವದು. ಮಕ್ಕಳ ವ್ಯಕ್ತಿತ್ವ ಸಂಪೂರ್ಣ ಸ್ವಾಭಾವಿಕವಾಗಿ ಬೆಳೆಯುವುದು ಮತ್ತು ಹೆಂಗಸಿನ ಸಾಮಾಜಿಕ ಸ್ಥಾನಮಾನಗಳು ಏರುವವು. ೩೦ ವರ್ಷದೊಳಗೆ ಸ್ತ್ರೀಪುರುಷರು ವಿವಾಹಿತರಾಗದಿದ್ದಲ್ಲಿ ಸರಕಾರವು ಅವರ ಮೇಲೆ ಕರಿಗೆ ಹೇರಬೇಕು. ಇದರಿಂದ ಸಾಮಾಜಿಕ ಅನೀತಿ ತೊಲಗಿ ಸಂಸ್ಕೃತ ಆಚಾರ ವಿಚಾರಗಳು ಬೇರೂರುವವು. ಇದಲ್ಲದೆ ಪ್ರತಿ ದಿನ ದೇಹ ಮತ್ತು ಮನಃಶಾಸ್ತ್ರತತ್ವಗಳನ್ನು ಆಕಾಶವಾಣಿಯ ಮೂಲಕ ಜನಗಳಿಗೆ ಅದರ ವಿವಿಧ ಮಟ್ಟದ ಬೆಳವಣಿಗೆಗೆ ಪೋಷಕವಾಗುವಂತೆ ತಿಳಿಸಿ ಹೇಳಬೇಕು. ಜೀವನ, ಆರೋಗ್ಯ (ದೈಹಿಕ ಮತ್ತು ಮಾನಸಿಕ) ಮತ್ತು ಉದ್ಯೋಗಗಳು ಸ್ತ್ರೀಪುರುಷರಲ್ಲಿ ಸ್ಪರ್ಧೆ ತಪ್ಪಿದಲ್ಲಿ ಸುಗಮವಾಗುವವು ಹೀಗೆ ಗೃಹ ಪುನರ್ರಚನೆಗಾಗಿಯೇ ಒಂದು ವಿಶೇಷ ಶಾಖೆಯನ್ನು ಸರಕಾರ ಏರ್ಪಡಿಸಿ ಮನಃಶಾಸ್ತ್ರಜ್ಞರ ಸಹಾಯದಿಂದ ನಿರ್ವಹಿಸಬೇಕೆಂದು ಒತ್ತಿ ಹೇಳಬೇಕಾಗಿದೆ. ಈ ಮಾತುಗಳಲ್ಲಿ ಹಿಂದೀಯರು ಕಲಿಯಬೇಕಾದ ಅಂಶಗಳು ಬಹಳವೆಯೆನ್ನಬಹುದಲ್ಲವೆ ?

ಮುಂಬಯಿ ಪ್ರಾಂತದ ಗೃಹಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯರು ಇದೇ ೨೧ ಕ್ಕೆ ಬೆಳಗಾವಿಗೆ ಬರತಕ್ಕವರಿರುವರು.

ಫ್ರಾನ್ಸಿನಲ್ಲಿ ಶಕ್ತಿಪರೀಕ್ಷೆ


ಕೆಲಸ ಮಾಡದೆ ಹೊರ ನಿಂತಿರುವ ೨೦ ಲಕ್ಷ ಫ್ರೆಂಚ ಕೂಲಿಕಾರರು ಈಗ ಮೂರು ವಾರಗಳಿಂದ ಸರಕಾರದೊಡನೆ ನಡೆಸಿರುವ ಶಕ್ತಿ ಪರೀಕ್ಷೆಯಲ್ಲಿ ಎರಡೂ ಪಕ್ಷಗಳು ಅಷ್ಟೇ ಹಟ ತೊಟ್ಟು ನಿಂತಿವೆ. ಕೂಲಿಕಾರರಲ್ಲಿ ಅಧಿಕಾಂಶ ಜನರನ್ನು ಕೈಯೊಳಗಿಟ್ಟುಕೊಂಡಿರುವ ಕಮ್ಯೂನಿಸ್ಟರು ದೇಶದ ಅತಿ ದೊಡ್ಡ ರಾಜಕೀಯ ಪಕ್ಷವಾದ ತಮ್ಮನ್ನು ಮಂತ್ರಿಮಂಡಲದಿಂದ ಹೊರಗಿಟ್ಟು ಶೂಮನ್ನರು ಹೇಗೆ ಆಳುವರೋ ನೋಡುವೆನೆಂದು ಛಲ ತೊಟ್ಟದ್ದರಿ ಕಮ್ಯೂನಿಸ್ಟರ ಸೊಕ್ಕು ಮುರಿಯುವ ಕೆಚ್ಚಿನಿಂದ ಶೂಮನ್ನರು ಸಂಪು ಹೂಡಲು ಉತ್ತೇಜನಕೊಡುವವರಿಗೂ ವಿನಾಶಕ ಚಟುವಟಿಕೆಗಳನ್ನು ನಡೆಸುವವರಿಗೂ ೫ ಲಕ್ಷ ಮತ್ತು ೧೦ ಲಕ್ಷ ಫ್ರಾಂಕ್ ದಂಡ ಹಾಗು ೫ ಮತ್ತು ೧೦ ವರ್ಷ ಶಿಕ್ಷೆ ಕೊಡುವ ಕಾಯದೆಯನ್ನು ಪಾಸುಮಾಡಿಸಿಕೊಂಡರು. ಈ ಮಸೂದೆ ಶಾಸನ ಸಭೆಯಲ್ಲಿ ಕಮ್ಯೂನಿಸ್ಟರ ಪ್ರಚಂಡ ವಿರೋಧವನ್ನು ಲೆಕ್ಕಿಸದೆ ಚರ್ಚಿಸಲ್ಪಡುತ್ತಿದ್ದಾಗ ಒಬ್ಬ ಕಮ್ಯೂನಿಸ್ಟ ಸದಸ್ಯನಿಗೂ ಇನ್ನೊಬ್ಬ ಸಾಮ್ಯವಾದಿಗೂ ಕೈ ಕೈ ಹತ್ತಿದ್ದರ ಪರಿಣಾಮವಾಗಿ ಇಡೀ ಸಭೆಯಲ್ಲೆದ್ದ ಕೋಲಾಹಲವನ್ನು ಶಮಿಸಲು ಪೋಲೀಸರು ಬರಬೇಕಾಯಿತು. ಮುಖ್ಯ ಮಂತ್ರಿ ಶೂಮನ್ನರು ಈ ಹೊಸ ಅಧಿಕಾರಗಳಿಂದ ಸಜ್ಜಿತರಾಗಿ ಸಂಪು ಹೂಡಿ ಗಲಭೆ ಹಾಕುತ್ತಿದ್ದ ಕೂಲೀಕಾರರನ್ನು ಹಣಿಯಲು ೮೦,೦೦೦ ಜನರನ್ನು ಸೈನ್ಯ ಸೇವೆಗೆ ಭರತಿ ಮಾಡಿಕೊಂಡಿದ್ದಾರೆ.

ಹೀಗೆ ಕೂಲಿಕಾರರು ಅಸಾಧಾರಣ ಉದ್ರೇಕದಿಂದ ನಡೆದುಕೊಳ್ಳುತ್ತಿದ್ದಾರೆ. ಪ್ಯಾರಿಸಿನ ಆಕಾಶವಾಣಿ ಕೇಂದ್ರವನ್ನು ಅವರು ವಶಪಡಿಸಿಕೊಳ್ಳದಂತೆ ಸರಕಾರಿ ಸೈನಿಕರು ಅದನ್ನು ಆಕ್ರಮಿಸಿದರು. ಅನೇಕ ರೇಲ್ವೆ ಅಪಘಾತಗಳು ಸಂಭವಿಸಿವೆ. ಎಷ್ಟೋ ಕಡೆ ಪೋಲೀಸರಿಗೂ ಸಂಪುಗಾರರಿಗೂ ಹೊಡೆದಾಟವೇ ನಡೆಯಿತು. ಸಂಧಾನದ ಕೊನೆಯ ಪ್ರಯತ್ನವೊಂದು ನಡೆದು ವಿಫಲವಾಯಿತು. ಕೂಲಿಕಾರರಿಗೆ ಕೆಲಸಕ್ಕೆ ಮರಳಲು ಒಂದು ಅವಧಿ ಹಾಕಿ, ಅದರ ನಂತರ ಹೊಸ ಕಾಯಿದೆಯಂತೆ ಕ್ರಮತೆಗೆದುಕೊಳ್ಳುವದಾಗಿ ಸರಕಾರ ಬೆದರಿಸಿದೆ.

ತೋರಿಕೆಗೆ ಒಳಜಗಳದಂತೆ ಕಾಣುವ ಈ ಅಧಿಕಾರ ಲಾಲಸೆಯ ತಿಕ್ಕಾಟದಲ್ಲಿ ಹೊರಗಿನ ಪ್ರಬಲ ಶಕ್ತಿಗಳ ಕಾಣದ ಕೈ ಸುಳಿಯುತ್ತಿದೆ. ಮಾರ್ಶಲ್ಲರ ಯುರೋಪನ್ನು ಉಳಿಸುವ ಯೋಜನೆಯ ಯಶ ಅಪಯಶದ ನಿರ್ಣಯ ಭೂಮಿ ಫ್ರಾನ್ಸೇ ಆಗಲಿದೆ ಅದರಿಂದ ಈ ಸತ್ವಪರೀಕ್ಷೆಯಲ್ಲಿ ಅಮೇರಿಕೆಯೂ ರಶಿಯವೂ ತೀವ್ರವಾದ ಆಸಕ್ತಿಯಿಟ್ಟಿರುವದು ವಿಚಿತ್ರವಲ್ಲ. ಫ್ರಾನ್ಸಿನಲ್ಲಿ ಮಾರ್ಶಲ್ ಯೋಜನೆ ವಿಫಲವಾದರೆ ಯುರೋಪನ್ನು ಹಿಡಿತದಲ್ಲಿಟ್ಟುಕೊಳ್ಳುವ ಅಮೇರಿಕೆಯ ಸಂಚು ಮಣ್ಣುಪಾಲಾಗದಿರದು. ಅದನ್ನರಿತೇ ಅಮೇರಿಕೆಯ ಉಪ ವಿದೇಶ ಮಂತ್ರಿ "ಫ್ರಾನ್ಸಿನಲ್ಲಿ ಕಮ್ಯೂನಿಸ್ಟಪಕ್ಷ ಅಧಿಕಾರಕ್ಕೆ ಬಂದರೆ ಅಮೇರಿಕೆ ಅದಕ್ಕೆ ಸಹಾಯ ನಿರಾಕರಿಸುವದು" ಎಂದರು. ಇದನ್ನೇ ಈಗ ಅಮೇರಿಕೆಯ ಆರ್ಥಿಕ ಸಾಮ್ರಾಜ್ಯತೃಷ್ಣೆಯೆಂದು ಕಮ್ಯುನಿಸ್ಟರು ಹೇಳುತ್ತಿರುವದು. ಹೀಗೆ ಫ್ರೆಂಚ ಕೂಲಿಕಾರರ ನಾಯಕರು ಮಾಸ್ಕೋದತ್ತ ಆವರನ್ನೆಳೆಯುತ್ತಿದ್ದರೆ ಸಾಮ್ಯವಾದಿಗಳೂ ಕೆಥೋಲಿಕ ಪಕ್ಷದವರೂ ಅಮೇರಿಕೆಯತ್ತ ಎಳೆಯುತ್ತಿದ್ದಾರೆ. ಎರಡೂ ಕಡೆಯವರು ವಿದೇಶೀಯರ ಸಹಾಯದಿಂದ ತಂತಮ್ಮ ಅಧಿಕಾರ ಸ್ಥಾಪಿಸಲು ಹವಣಿಸುವದೇನೋ ನಿಜ.

"ಛೊಟಾ" ಸೋವಿಯೆಟ್?

ಹೀಗೆ ಫ್ರೆಂಚ ಕಮ್ಯುನಿಸ್ಟರು ಶೂಮನ್ನರ ಸಾಮ್ಯವಾದಿಗಳೊಡನೆ ಭಯಂಕರ ತಿಕ್ಕಾಟದಲ್ಲಿ ಮಗ್ನರಾಗಿ ಅಲ್ಲಿ ಅಮೇರಿಕೆಯ ಆಸೆಗೆ ಕಲ್ಲುಹಾಕಿ ಮಾಸ್ಕೋದ ದಾರಿಯನ್ನು ಸ್ವಚ್ಛಗೊಳಿಸುವದರಲ್ಲಿ ಪ್ರಸಕ್ತರಾಗಿರುವಾಗ ಇತ್ತ ಇಟಲಿಯ ಕಮ್ಯೂನಿಸ್ಟ ನಿಯಂತ್ರಿತ ಕೂಲಿಕಾರರು ಸರಕಾರಕ್ಕೆ ಕಠಿನ ನೋಟೀಸು ಕೊಟ್ಟರುವಾಗ ಅತ್ತ ಸೋವಿಯಟ್ ರಶಿಯಾಕ್ಕೆ ಸಮೀಪವಾಗಿರುವ ರಾಜ್ಯಗಳಲ್ಲಿ ರಶಿಯಾದ ಸ್ಥಾನವನ್ನು ಭದ್ರಗೊಳಿಸಿ ಕಮ್ಯುನಿಸ್ಟ ಪ್ರಭುತ್ವಕ್ಕೆ ಶಾಶ್ವತ ಪಟ್ಟ ಕಟ್ಟುವ ಯೋಜನೆಗಳು ಒಂದೊಂದಾಗಿ ಕೈಗೂಡುತ್ತಿವೆ. ಬಾಲ್ಕನ್ ಭೂಮಿಯ ಹೆಚ್ಚುಕಡಿಮೆ ಕಮ್ಯುನಿಸ್ಟ ಅಂಕೆಯಲ್ಲಿರುವ ಯುಗೋಸ್ಲಾ



ವಿಯಾ, ಬಲ್ಗೇರಿಯಾ, ಹಂಗೇರಿ, ರುಮೇನಿಯಾ ಮೊದಲಾದ ದೇಶಗಳನ್ನು ಒಂದೇ ಒಕ್ಕೂಟದಲ್ಲಿ ತಂದು ಅಲ್ಲಿ ಸೋವಿಯಟ್ ಪದ್ಧತಿಯ ರಾಜ್ಯಘಟನೆಯನ್ನು ಸ್ಥಾಪಿಸುವ ಪ್ರಯತ್ನ ಬಹಳ ದೂರ ಮುನ್ನಡೆದಿದೆಯೆಂದು ನಂಬಲಾಗಿದೆ. ಕಳೆದ ವಾರ ಯುಗೊಸ್ಲಾವಿಯಾ—ಬಲ್ಗೇರಿಯಾಗಳ ನಡುವೆ ಆದ ಒಪ್ಪಂದದನ್ವಯ ಆ ಎರಡು ರಾಜ್ಯಗಳ ನಡುವಣ ಸಾಧಾರಣ ಗಡಿನಿಯಮಗಳನ್ನು ರದ್ದುಗೊಳಿಸಲಾದದ್ದು ಮತ್ತು ಹಂಗೆರಿಗೂ ಯುಗೋಸ್ಲಾವಿಯಕ್ಕೂ ಆಂಥದೇ ಪರಸ್ಪರ ಸಹಾಯ ಒಪ್ಪಂದವಾದುದು ಇಂಥ "ಛೋಟಾ" ಸೋವಿಯಟ್ ರಾಜ್ಯಸ್ಥಾಪನೆಯ ಪೀಠಿಕೆಯೆಂದು ಬಲ್ಲವರು ತರ್ಕಿಸುತ್ತಾರೆ.

ಅಮೇರಿಕೆಯ ಮಾರ್ಶಲ್ ಯೋಜನೆಯು ಸ್ವಯ ಪಶ್ಚಿಮ ಯುರೋಪಿನ ಬಣಕಟ್ಟುವ ಪ್ರಯತ್ನಕ್ಕೆ ಉತ್ತರರೂಪವಾಗಿ ಪೂರ್ವ ಯುರೋಪಿನಲ್ಲಿ ರಶಿಯನ್ ಯೋಜನೆಯು ಆಂಗವಿದು. ಈ ಯೋಜನೆಯನ್ನು ಸಫಲಗೊಳಿಸಲು ರಶಿಯನ್ ನಾಯಕರು ತಮ್ಮಲ್ಲಿರುವ ಚಿನ್ನದ ಸಂಗ್ರಹವನ್ನು ಸೂರೆಗೊಳಿಸಲು ಸಿದ್ಧರಿದ್ದಾರಂತೆ. ರಶಿಯಾದಲ್ಲಿ ಎಷ್ಟು ಚಿನ್ನದ ಸಂಗ್ರಹವಿದೆಯೆಂದು ರಶಿಯನ್ನರಿಗೇ ಗೊತ್ತು. ಅದು "ಅಪಾರ"ವಿದೆಯೆಂದಷ್ಟೇ ಹೇಳಲಾಗಿದೆ. ಅವರು ಈ ಚಿನ್ನದ ಹೊಳೆಯನ್ನು ಪೂರ್ವ ಯುರೋಪಿನತ್ತ ಹರಿಸಿದರೆ ಪಶ್ಚಿಮ ಯುರೋಪಿನಲ್ಲಿ ಮಾರ್ಶಲ್‌ರ ಯೋಜನೆ ಧೂಳಿದ್ದು ಹೋಗುವದು ಖಂಡಿತವೆಂಬ ಭೀತಿಯನ್ನು ಅಮೇರಿಕನ್ ತಜ್ಞರೇ ವ್ಯಕ್ತಗೊಳಿಸಿದ್ದಾರೆ.

ವಿಭಜನೆಯ ಬೆಲೆ

ಯುಕ್ತರಾಷ್ಟ್ರ ಸಂಘದವರು ಪಾಲಿಸ್ತಾನದ ವಿಭಜನೆಯ ನಿರ್ಣಯವನ್ನು ಮಾಡಿದ್ದೇ ತಡ, ಮಧ್ಯಪೂರ್ವದಲ್ಲಿ ವಿಸ್ತೃತ ಗಲಭೆಗಳಿಗೆ ಸಂಕೇತ ಕೊಟ್ಟಂತಾಯಿತು. ಈ ನಿರ್ಣಯವನ್ನು ಪ್ರತಿಭಟಿಸಲು ಪಾಲಿಸ್ತಾನ ಅರಬರು ಮೂರುದಿನದ ಸಾರ್ವತ್ರಿಕ ಸಂಪು ಹೂಡಿದರು. ಟೆಲ್ ಅವೀವ (ಪಾಲಿಸ್ತಾನ)ದ ಸಮೀಪದಲ್ಲಿ ಅರಬರಿಗೂ ಯಹೂದ್ಯರಿಗೂ ಕೈ ಕೈ ಕಾಳಗವೇ ನಡೆದು ಅನೇಕ ಸಾವು ನೋವುಗಳಾದವು. ಪಾಲಿಸ್ತಾನದ ಅರಬ ಪಟ್ಟಣಗಳಲ್ಲಿ ಅಲ್ಪ ಸಂಖ್ಯಾತ ಯಹೂದ್ಯರನ್ನು ಬಲಿ ಹಾಕುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಬೆಲೆಯ ಯಹೂದ್ಯರ ಆಸ್ತಿಗಳು ನಾಶಗೊಳಿಸಲ್ಪಟ್ಟಿವೆ. ಫಲಿತಾಂಶವಾಗಿ ಯಹೂದ್ಯರ ಬ್ರಿಟಿಶ ವಿರೋಧಿ ಗುಪ್ತ ಸಂಸ್ಥೆಯಾದ "ಹಗನಾ" ಕೂಡ ಯಹೂದ್ಯರ ಪ್ರಾಣರಕ್ಷಣೆಗಾಗಿ ಬ್ರಿಟಿಶ ಸೈನಿಕರೊಡನೆ ಹೆಗಲಿಗೆ ಹೆಗಲು ಕೊಡಬೇಕಾಗಿ ಬಂತು. ೧೯೪೮ ಆಗಸ್ಟ ೧ಕ್ಕೆ ಪಾಲಿಸ್ತಾನದಿಂದ ಹೊರಟು ಹೋಗುವವರೆಗೂ ಅಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡುವದಾಗಿ ಬ್ರಿಟಿಶರು ಜಂಬ ಕೊಚ್ಚುತ್ತಿದ್ದರೂ ಅದು ಕೃತಿಯಲ್ಲಿ ಕಠಿಣಹೋಗತೊಡಗಿದೆ. ಕೆಲವು ಆಯಕಟ್ಟಿನ ಸ್ಥಳಗಳಿಂದ ಅವರು ತಮ್ಮ ಸೈನ್ಯಗಳನ್ನು ಹಿಂತೆಗೆದುಕೊಂಡಿರುವರಲ್ಲದೆ, ಕೆಲವು ಯಹೂದ್ಯ ನಗರಗಳಲ್ಲಿನ ಶಾಂತಿ ಸುವ್ಯವಸ್ಥೆಗೆ ಯಹೂದ್ಯರನ್ನೇ ಹೊಣೆ ಮಾಡಿ ಸರಿದುಕೊಂಡಿದ್ದಾರೆ. ಹೊರಗೆ ಕೈರೋದಲ್ಲಿಯೂ ಏಡನ್ನಿನಲ್ಲಿಯೂ ಯಹೂದ್ಯ ವಿರೋಧಿ ಪ್ರದರ್ಶನಗಳಲ್ಲಿ ಅನೇಕರು ಸತ್ತರು, ನೊಂದರು. ಏಡನ್ನಿನಲ್ಲಿಯಂತೂ ಇಬ್ಬರು ಹಿಂದೀಯರು ಕೂಡ ಇಬ್ಬಣಗಳ ನಡುವೆ ಸಿಕ್ಕು ಪ್ರಾಣ ಕಳೆದುಕೊಂಡರು.

ಯುಕ್ತ ರಾಷ್ಟ್ರಸಂಘದ ನಿರ್ಣಯವನ್ನು ನಿಷ್ಫಲಗೊಳಿಸುವೆವೆಂದು ಪಣತೊಟ್ಟ ಅರಬ ರಾಷ್ಟ್ರಗಳು ಜಯಸಲೀಮಿನ ಮುಫ್ತಿ ಹೇಳಿದಂತೆ "ಮಾಡು ಇಲ್ಲವೆ ಮಡಿ" [illegible] ಎಂದು ಸಜ್ಜಾಗುತ್ತಿವೆ. "ಪುಣ್ಯಭೂಮಿ"ಯ ರಕ್ಷಣೆಗಾಗಿ ಹೂಡಲಿರುವ "ಜೆಹಾದ" (ಧರ್ಮ ಯುದ್ಧ)ದಲ್ಲಿ ಪ್ರತಿಯೊಬ್ಬ ಮುಸ್ಲಿಮನು ಸಮಸ್ತವನ್ನು ಅರ್ಪಿಸಿದ್ದರೆ ದೈವೀ ಪ್ರತೀಕಕ್ಕೆ ಪಾತ್ರನಾಗುವ

ನೆಂದು ಕೈರೋ (ಈಜಿಪ್ತ)ದ ಉಲೇಮಾ ಸಂಘದವರು ಧಾರ್ಮಿಕ ಆಜ್ಞೆ ಹೊರಡಿಸಿದ್ದಾರೆ. ಅತಿ ದೊಡ್ಡ ಮುಸ್ಲಿಂ ರಾಜ್ಯವಾದ ಪಾಕಿಸ್ತಾನ ಈ [illegible] ಎಂದು [illegible] ಪಾಕಿಸ್ತಾನ [illegible] ಈ "ಜೆಹಾದ" [illegible] ಸಂಘದ [illegible]. ಅರಬ ರಾಷ್ಟ್ರ [illegible]. ಇರಾಕ, [illegible] ಈ [illegible] "ಜೆಹಾದ" [illegible] ಸೈನ್ಯ [illegible] ಸ್ಥಾಪಿಸಲ್ಪಟ್ಟಿವೆ. ಅರಬ ಲೀಗಿನ ಸಭೆ ಕಾಯರೋದಲ್ಲಿ ಸೇರಿ ಪಾಲಿಸ್ತಾನದ ವಿಭಜನೆಯ ಯೋಜನೆಯನ್ನು ಮುರಿಯುವ ಉಪಾಯಗಳನ್ನು ವಿಚಾರಿಸಿತು. [illegible] ಒಂದು, "ಪಾಲಿಸ್ತಾನ ಸ್ವತಂತ್ರ ಸರಕಾರ" ಸ್ಥಾಪಿಸಲ್ಪಟ್ಟದ್ದು, ಅದು ಬ್ರಿಟಿಶರು ಹಿಂದೆಗೆದೊಡನೆ ಪಾಲಿಸ್ತಾನವನ್ನು ಆಕ್ರಮಿಸುವದು.

ಆದರೆ ಈ "ಜೆಹಾದ" [illegible] ಟಕವಾಗುವದೆಂದು ಹೇಳುವಂತಿಲ್ಲ. ಅಮೇರಿಕೆಯ ಪ್ರಬಲ ಬೆಂಬಲ [illegible] ಯಹೂದ್ಯರ ಸಂಸ್ಥೆಯಲ್ಲಿ [illegible], ಧನಬಲ, ಬುದ್ಧಿಬಲ, ತಂತ್ರಬಲದಲ್ಲಿ [illegible]. ಯಹೂದ್ಯ ಸಂಸ್ಥೆ [illegible] ಕಾರದಿಂದ [illegible] ಕೋಟಿ ಡಾಲರ [illegible]. ಯಹೂದ್ಯ ಸಂಸ್ಥೆಯ ಅಧ್ಯಕ್ಷ [illegible] "[illegible]" [illegible] ದೇವಂದು [illegible] ಹೇಳಿದರು. ಯಂತ್ರತಂತ್ರಗಳಲ್ಲಿ [illegible] ಕಾಪಾಡದೆ ಹೋಗಲಾರದು.

ಪಾಲಿಸ್ತಾನದ ಬಗ್ಗೆ [illegible] ಹರಿಯ ತೊಡಗಿರುವಾಗಲು [illegible] ವಿಭಜನೆ ನಿರ್ಣಯವನ್ನು ಕಾರ್ಯಗೊಳಿಸುವಗೋಸುಗ ಆರಿಸಲ್ಪಟ್ಟ ಬೋಲಿವಿಯಾ, ಝೆಕೋಸ್ಲೊವಾಕಿಯಾ, ಡೆನ್ಮಾರ್ಕ, ಪನಾಮಾ, ಫಿಲಿಪ್ಪೈನ್ ರಾಷ್ಟ್ರಗಳ ಪ್ರತಿನಿಧಿಗಳು ಪಾಲಿಸ್ತಾನಕ್ಕೆ ಹೋಗುವ ಏರ್ಪಾಡಿನಲ್ಲಿದ್ದಾರೆ.

ಚುಟುಕು ಸುದ್ದಿ

ಬೇಗನೆ ಸ್ವತಂತ್ರವಾಗಲಿರುವ ಸಿಂಹಳ ದ್ವೀಪಕ್ಕೂ ಹಿಂದುಸ್ತಾನಕ್ಕೂ ನಡುವೆ ಸಿಂಹಳದಲ್ಲಿರುವ ಹಿಂದೀಯರ ಸ್ಥಾನಮಾನ, ಉಭಯ ರಾಷ್ಟ್ರಗಳ ಸಂರಕ್ಷಣ, ವ್ಯಾಪಾರ, ಸುಂಕ ಮೊದಲಾದ ವಿಚಾರ ದಿಲ್ಲಿಯಲ್ಲಿ ಮಾತುಕತೆ ನಡೆಯಲಿದೆ. ಈ ಮಾತುಕತೆಗಳು ಯಶಸ್ವಿಯಾಗಬಹುದೆಂದು ಸಿಂಹಳ ಮುಖ್ಯ ಮಂತ್ರಿ ಸೆನಾನಾಯಕೆಯವರು ವಿಶ್ವಾಸ ವ್ಯಕ್ತಗೊಳಿಸಿದ್ದಾರೆ.

ಹಿಂದೀ—ಬ್ರಹ್ಮದೇಶ ಸಂಬಂಧದ ಮಾತುಕತೆಗಳೂ ಬ್ರಹ್ಮದೇಶದ ಮುಖ್ಯಮಂತ್ರಿ ಥಾಕಿನ್‌ನು ಅವರು ಹಿಂದುಸ್ತಾನಕ್ಕೆ ಕಳೆದ ವಾರ ಬಂದಾಗ ಪ್ರಾರಂಭವಾದವು

x x x

ಬ್ರಹ್ಮದೇಶ ಸ್ವತಂತ್ರ [illegible] ಪಾರ್ಲಮೆಂಟಿನಲ್ಲಿ [illegible]

[illegible] ಈ [illegible] ಮಾಡಿಲ್ಲ [illegible]

ಬ್ರಹ್ಮದೇಶದಲ್ಲಿ ಹಿಂದುಸ್ತಾನದ [illegible]

x x x

ದಕ್ಷಿಣ ಆಫ್ರಿಕೆಯ [illegible] ಗುರಿಯಾದ [illegible] ದಕ್ಷಿಣ ಆಫ್ರಿಕೆಯ ಮುಖ್ಯ ಮಂತ್ರಿ [illegible]

x x x

[illegible]

x x x

[illegible]

x x x


ಲಂಡನ್ನಿನಲ್ಲಿ ಈಗ ಕೆಲ ದಿನಗಳಿಂದ ನಡೆಯುತ್ತಿರುವ [illegible] ವಿದೇಶ ಮಂತ್ರಿ [illegible] ಜರ್ಮನಿ ಮತ್ತು ಆಸ್ಟ್ರಿಯಾಗಳ [illegible] ಯಾವುದೇ [illegible]

x x x

ಚೀನದಲ್ಲಿ ಕಳೆದ ವಾರ [illegible] ಕೆಲ ವಿಜಯಗಳು [illegible]

ಅಮೇರಿಕೆಯ [illegible] ಭಾರತೀಯ ಮತ್ತು [illegible] ೩ ವರ್ಷಗಳಿಗಾಗಿ [illegible] ಸಾಮಾಜಿಕ, [illegible] ಗಳಿಗಾಗಿ [illegible]





ನೇತಾಜಿ

ಬರೆದವರು: ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿ. ಪ್ರಕಾಶಕರು: ವಿಚಾರಸಾಹಿತ್ಯ ಲಿಮಿಟೆಡ್, ಬಳೇಪೇಟೆ ಬೆಂಗಳೂರು. ಪುಟ ೨೬೦ ಬೆಲೆ ಸಾದಾಪ್ರತಿಗೆ ರೂ ೩।, ಉತ್ತಮ ಪ್ರತಿಗೆ ರೂ ೩।।.

ಸುಭಾಷಚಂದ್ರ ಬೋಸರ ಹೆಸರೆತ್ತಿದರೆ ಇಂದಿನ ತರುಣ ಜನಾಂಗ ಹುರುಪುದುಂಬಿ ಕುಣಿದಾಡದಿರದು. ಇಂತಹ ನಾಡಿನ ಕಂಗೊಳ್ಳಿಂಬೆಯಾದವರ ಸಾಹಸಮಯ ಜೀವನದ ಇತಿಹಾಸವನ್ನು ಶ್ರೀ ವೀರಕೇಸರಿಯವರು ತಮ್ಮ ವೀರಶೈಲಿಯಿಂದ ಚಿತ್ರಿಸಿ ಓದುಗರ ಮುಂದಿಟ್ಟಿದ್ದಾರೆ. ಹಿಂದುಸ್ಥಾನದ ಗಂಡಸುತನದ ಏಕಮೇವ ಪ್ರತೀಕವೆನಿಸಿದ ಈ ಅದ್ಭುತ ಸಾಹಸಿಗಳ ಜೀವನವಿಲ್ಲಿ ಅದ್ಭುತ ರಮ್ಯವಾಗಿ, ರುದ್ರಮನೋಹರವಾಗಿ ಕೆಚ್ಚು ನುಚ್ಚಳಿಸುವ ಪುರಂತ ಗಾಂಭೀರ್ಯದಿಂದ ನಿರೂಪಿಸಲ್ಪಟ್ಟಿದೆ. ಇಂತಹ ರಾಷ್ಟ್ರವೀರರ ಚರಿತ್ರೆಯಿಂದ ಕನ್ನಡ ತರುಣ ಜನಾಂಗ ಸ್ಫೂರ್ತಿ ಪಡೆದು ತಮ್ಮ ಬಾಳಿನಲ್ಲಿ ಬೆಳಕು ಕಾಣಲಿ.

ನಾಲ್ಕನೆಯ ಮನೆ

ಬರೆದವರು: ಶ್ರೀ ಎಂ ನರೇಂದ್ರಬಾಬು ಪ್ರಕಾಶಕರು ಉಷಾ ಸಾಹಿತ್ಯಮಾಲೆ, ಮೈಸೂರು. ಪುಟ ೧೬೮. ಬೆಲೆ ರೂ. ೨.

ಈ ಕಾದಂಬರಿಯಲ್ಲಿ ನಾಗುವಿನ ದುರಂತಚಿತ್ರವನ್ನು ಕೊಡಲಾಗಿದೆ. ಪಾತ್ರಪೋಷಣೆ ಚೆನ್ನಾಗಿದೆ. ಈ ಸಂಸಾರ ಚಿತ್ರದಲ್ಲಿ ಹತ್ತು ಜನ ಬಾಂಧವರು ಮತ್ತೆ ಮತ್ತೆ ಕೊಡುವ ಕಾಟ ಹೃದಯವನ್ನು ತಳಮಳಗೊಳಿಸುವಂಥದು. ಕರುಣರಸ ನಿರೂಪಣೆಯೇ ಈ ಕಾದಂಬರಿಯ ಜೀವಾಳ. ಈ ಪ್ರಯತ್ನದಲ್ಲಿ ಗ್ರಂಥಕರ್ತರು ತಕ್ಕಮಟ್ಟಿಗೆ ಯಶಸ್ವಿಗಳಾಗಿದ್ದಾರೆನ್ನಬಹುದು. ಇಂದು ಹೆಂಗಸರು ಬರೆದ ಹೆಣ್ಣುಬಾಳ ಚಿತ್ರದ ಅಸಮಗ್ರತೆಯನ್ನು ಕಂಡು ಬೇಸತ್ತವರು ಇಲ್ಲಿ ವರ್ಣಿಸಲಾದ ನಾಗುವಿನ ಪಾತ್ರರಚನೆಯನ್ನು ನೋಡಿ ಆನಂದ ಪಡೆದಿರರು. ಇಂತಹ ಕಾದಂಬರಿಯನ್ನು ಕನ್ನಡಕ್ಕೆ ಕೊಟ್ಟ ಶ್ರೀ ನರೇಂದ್ರಬಾಬುಗಳು ಅಭಿನಂದನೀಯರೇ ಸರಿ. ಕನ್ನಡಿಗರು ಇದಕ್ಕೆ ಪ್ರೋತ್ಸಾಹ ಕೊಡದಿರರು.

ಹಾಲಾಹಲ

ಬರೆದವರು: ಶ್ರೀ ಹಿರೇಮಲ್ಲೂರು ಈಶ್ವರನ್, ಪ್ರಕಾಶಕರು ಕಲ್ಪನಾ ಪ್ರಕಾಶನ ಮಂದಿರ, ಹಿರೇಮಲ್ಲೂರು. ಪುಟ ೧೫೪, ಬೆಲೆ ಕೊಟ್ಟಿಲ್ಲ.

'ಹಾಲಾಹಲ' ಒಂದು ಕಥಾಸಂಗ್ರಹ. ಇದರಲ್ಲಿ ೧೨ ಕಥೆಗಳಿವೆ. ಮೊದಲನೆಯದಾದ 'ಕೊರಳಹಾರ' ಚೆನ್ನಾಗಿದೆ. 'ಬಂಜೆಗನಸು' ರಸಾವಹವಿದೆ. 'ಕಲ್ಲುದೇವರಮುಂದೆ' ಎಂಬುದರಲ್ಲಿ ಬಡತನದ ಕಷ್ಟ ವರ್ಣಿತವಾಗಿದೆ. 'ಗಿರಿಜೆಯ ಬಾಣಂತಿತನ'ದಲ್ಲಿ ಪೋಲೀಸರ ಅತ್ಯಾಚಾರ ಮತ್ತು ಮಾತಾಪಿತೃಗಳ ಮಮತೆ ಚೆನ್ನಾಗಿ ಚಿತ್ರಿತವಾಗಿವೆ. 'ಸೈರಂಧ್ರಿ'ಯಲ್ಲಿ ಹಳ್ಳಿಯ ರಸಿಕತೆ ಬಣ್ಣಿಸಲ್ಪಟ್ಟಿದೆ. ಮಿಕ್ಕ ಕಥೆಗಳೂ ಓದಬಹುದೆನಿಸುತ್ತವೆ. ಈ ಮಿಕ್ಕವುಗಳ ದೃಷ್ಟಿಯಿಂದ ಮುನ್ನುಡಿಯಲ್ಲಿ ಶ್ರೀ ಪರಮೇಶ್ವರಭಟ್ಟರು ಹೇಳಿದ "ಇನ್ನು ಕಥೆಯ ಆರಂಭ ಬೆಳವಣಿಗೆ ಮುಕ್ತಾಯಗಳ ದೃಷ್ಟಿಯಿಂದಲೂ ಈ ಕಥೆಯಲ್ಲಿ ತಮ್ಮದೇ ಆದ ಒಂದು ಸೊಗಸಿದೆ" ಎಂಬ ಮಾತು ಸ್ವಸ್ತಿಕೆಯ ಸಕ್ಕವಾದ ವಿಡಂಬನ. ಆದರೆ ಭಟ್ಟರ ಪಾಕ್ಷೀವೆಯಲ್ಲಿಯ ಅಮೃತಧಾರೆ "ಹಾಲಾಹಲ" ದ ಕೆಲ ಪಂಕ್ತಿಗಳ ಬಗ್ಗೆ ಸರಿಯಾದ ಅಭಿಪ್ರಾಯಕೊಟ್ಟಿದೆ ಯೆಂಬುದನ್ನು ಅಲ್ಲಗಳೆಯಲಾಗದು. ಹೀಗೆ ಹಳ್ಳಿಯ ಹೆಂಗಳೆಯರ ಬಾಳ ಸಾರವನು ಕಂಡು ಬರೆದ ಶ್ರೀ ಈಶ್ವರನ್ನರ ಪ್ರಯತ್ನ ಸ್ತುತ್ಯವಾದುದೆಂದು ಇಲ್ಲಿ ಹೇಳದಿರಲಾರೆವು.

ಮುಗಿಲು ಮಂಟಪ

ಬರೆದವರು: ಶ್ರೀ ಎಸ್. ಅನಂತನಾರಾಯಣ. ಪ್ರಕಾಶಕರು ಲಲಿತ ಸಾಹಿತ್ಯಮಾಲೆ ಧಾರವಾಡ ಪುಟ ೧೪೦, ಬೆಲೆ ರೂ ೧।।

ಮನೋವಿಶ್ಲೇಷಣಾತ್ಮಕವೆಂದು ಕರೆಯಬಹುದಾದ ಈ ಕಾದಂಬರಿಯಲ್ಲಿ ಅನಂತನೆಂಬವನು ಕಥಾನಾಯಕ. ಇವನೊಬ್ಬ ವಿಕ್ಷಿಪ್ತ, ಗುರಿಯಿಲ್ಲದ ಗೆಂಡು. ಒಂದನ್ನು ಪಾಡುಕೊಳಗಿ ಹುಚ್ಚತನ್ನನ್ನು ನ್ಯ ಮೇಲೆ ಕೆಡಹಿಕೊಂಡಂಥ ಮನುಷ್ಯ. ಈ ಸಾಮಾನ್ಯನೂ ಚಂಚಲನೂ ಅಜ್ಞಾನಿಯೂ ಆದ ಭಾವಜೀವಿಯೆಂದು ಕರೆಯಲಾದ ವ್ಯಕ್ತಿ ಇಂದಿನ ಕೆಲವು ಪ್ರಪಂಚಜ್ಞಾನವಿಲ್ಲದ ಕಾಲೇಜು ತರುಣರ ಪ್ರತೀಕವಾಗಬಲ್ಲನೆಂದಿಟ್ಟುಕೊಂಡರೂ ಇವನ ಜೀವನದಲ್ಲಿ ರಸೋದ್ರೇಕವಾದ ಒಂದು ಸನ್ನಿವೇಶವೂ ಚಿತ್ರಿಸಲ್ಪಟ್ಟಿಲ್ಲ. ಬೌದ್ಧಿಕ ವಿಚಾರವನ್ನೊಳಗೊಂಡ ಕಥಾನಾಯಕನ ಸ್ವಗತ ಭಾಷಣ ಕೇವಲ ಕಟ್ಟುಕತೆಯಾಗಿ ಓದುಗರಿಗೆ ತೋರುವುದಲ್ಲದೆ ಸ್ವಾಭಾವಿಕವೆನಿಸುವದಿಲ್ಲ. ಇದೇ ಇಲ್ಲಿಯ ದೊಡ್ಡ ದೋಷ. ಇದು ಮನೋವಿಶ್ಲೇಷಣಾತ್ಮಕವೂ ಅಲ್ಲ ಅವರ ಕಥಾನಾಯಕ ಭಾವಜೀವಿಯೂ ಅಲ್ಲ; ಕೇವಲ ಅಸಂಬದ್ಧ ಪ್ರತಿಕ್ರಿಯೆಯನ್ನು ಮಾಡುವ ಮನೋಭೂಮಿಕೆಯುಳ್ಳ ಅಶಕ್ತಮತಿ. ವಾಸ್ತವ ಜೀವನದ "ರಿಪೋರ್ಟ್" ಮಾಡಹೋದುದರಿಂದ ಇದು ಅವಾಸ್ತವವೂ ನೀರಸವೂ ಆದ ಕಾದಂಬರಿಯೆನಿಸಿದೆ. ಹೊಸ ಲೇಖಕರು ಇಂತು ಹೀಗೆ ದಾರಿತಪ್ಪುವದು ಅನೇಕ ಕಡೆ ಕಂಡುಬರುತ್ತದೆ. Art lies in concealing art—ಕಲೆಯನ್ನು ಕಣ್ಮರೆಗೊಳಿಸುವುದೇ ಕಲೆ ಎಂಬುದನ್ನು ಇಂಥವರು ಅರಿತು ಬರೆಯತೊಡಗುವುದು ಅಗತ್ಯ.

ಧರ್ಮ ದುರಂತ

ಬರೆದವರು:- ಶ್ರೀ ಎಂ.ಆರ್. ಶ್ರೀ.ಪ್ರಕಾಶಕರು ಸತ್ಯ ಶೋಧನ ಪ್ರಕಟನ ಮಂದಿರ, ಬೆಂಗಳೂರು ನಗರ. ಪುಟ ೧೫೯, ಬೆಲೆ ಸಾದಾ ಪ್ರತಿಗೆ ರೂ, ೨ ಕ್ಯಾಲಿಕೋ ಪ್ರತಿಗೆ ರೂ. ೩.

ಇದೊಂದು ಧರ್ಮಾಂತರ ಹೊಂದಿ ಮುಸಲ್ಮಾನನಾಗಿ ಪುನಃ ಬ್ರಾಹ್ಮಣನಾಗಬಯಸಿ ಸಾಧ್ಯವಾಗದೆ ಮುಸಲ್ಮಾನ ವೀರನಾಗಿಯೇ ಉಳಿದ ಬ್ರಾಹ್ಮಣ ಪತ್ನಿ ಮತ್ತು ಮುಸಲ್ಮಾನ ಬೀಬಿಯವರ ಪ್ರೇಮಕ್ಕೆ ಪಾತ್ರನಾಗಿ ದುರಂತ ಮರಣಕ್ಕೆ ಗುರಿಯಾದ ಖಾನ್ ಜಹಾನ್ ಖಾನನ ಸರಳ ರಗಳೆಯಲ್ಲಿ ಬರೆದ ನಾಟಕ. ಚಾರಿತ್ರಿಕ ಸಂಗತಿಗಳನ್ನು ಬೇಕಾದಂತೆ ಪರಿವರ್ತಿಸಿಕೊಂಡು ಇದನ್ನು ರಚಿಸಲಾಗಿದೆ. ಇದರಲ್ಲಿ ಗ್ರಂಥಕರ್ತರ ಉದ್ದೇಶ ಅಷ್ಟು ಸಫಲವಾದಂತೆ ತೋರುವುದಿಲ್ಲ. ಆದರೂ ಬರವಣಿಗೆ ಚೆನ್ನಾಗಿದೆ, ಶುದ್ಧವಾಗಿದೆ. ರಸ ಸನ್ನಿವೇಶ ಚಿತ್ರಣ ಆಗಬೇಕಾದಷ್ಟು ಪರಿಣಾಮಕಾರಿಯಾಗಿಲ್ಲ. ಧರ್ಮ ಸಮಸ್ಯೆಯ ವಿವರಣ ಚೆನ್ನಾಗಿದ್ದರೂ ಅದರಲ್ಲಿ ರಸಪೋಷಕತೆ ಕಡಿಮೆಯಾಗಿದೆ. ಇದೇ ಮುಖ್ಯವಾಗಿ ನಾಟಕದ ನೀರಸತೆಗೆ ಕಾರಣ. ಶೈಲಿಯಲ್ಲಿ ಭಾವತೀವ್ರತೆಗೆ ಬೇಕಾದ ವೀರ್ಯವಿಲ್ಲದೆ ಇರುವುದೊಂದನ್ನು ಬಿಟ್ಟರೆ ಮಿಕ್ಕದೆಲ್ಲ ಚೆನ್ನು.

Ten Upanishads

By Swami Sivananda Saraswati, "Ananda Kutir", Calcutta. Published by The Sivanand Publication League, Calcutta. Pages 277; Price Rs. 2-8-0.

ಅಷ್ಟೋತ್ತರ ಶತೋಪನಿಷತ್ತುಗಳಲ್ಲಿ ಈಶ ಕೇನಾದಿ ದಶೋಪನಿಷತ್ತುಗಳು ಸುಪ್ರಸಿದ್ಧವಾದುವು. ಆದರೆ ಈ ಸಂಗ್ರಹದಲ್ಲಿ ಉತ್ತಮ ತತ್ವಸಾರವುಳ್ಳ ಬೋಧಸಾರ, ವೇದಾಂತಸಾರ ಮುಂತಾದ ಇತರ ದಶೋಪನಿಷತ್ತುಗಳ ಮೂಲ-ಅಂಗ್ಲಾನುವಾದ ಮತ್ತು ಅಂಗ್ಲ ಟೀಕೆಗಳನ್ನು ಕೊಡಲಾಗಿದೆ. ಮಾನವ ಕುಲದ ಶಾಂತಿಗೆ ಅತ್ಯಗತ್ಯವಾದ ಏಕೀಭವನ ದೃಷ್ಟಿಯನ್ನು ಅದ್ವೈತಾಮೃತೋಪನಿಷತ್ತು ಪ್ರತಿಪಾದಿಸಿದೆ. ಸ್ವರೂಪ ಬೋಧೋಪನಿಷತ್ತಿನಲ್ಲಿ ಆತ್ಮ ಸ್ವರೂಪದ ವಿವರಣವಿದೆ. ಹೆಸರಿಗನ್ವರ್ಥವಾಗಿ ಬ್ರಹ್ಮಾನುಭಾವೋಪನಿಷತ್ತಿನಲ್ಲಿ ಬ್ರಹ್ಮಾನಂದದ ಪರಿಚಯವನ್ನು ಚಿತ್ರಿಸಲಾಗಿದೆ. ಆನಂದದಿಂದೂಪನಿಷತ್ತಿನಲ್ಲಿ ಸರ್ವೋಪನಿಷತ್ಸಾರವಾದ ಮತ್ತು ವಿಶ್ವಸೌಂದರ್ಯದ ಸರ್ವಸ್ವವಾದ ಆತ್ಮನ ಆನಂದ ಮಯತೆಯ ನಿರೂಪಣವಿದೆ. ಸ್ವಾಮಿಗಳ ಸರಳ ವ್ಯಾಖ್ಯೆಯ ಶೈಲಿ ಹೃದಯಂಗಮವಾಗಿದೆ. ಪರಿಶಿಷ್ಟದಲ್ಲಿ ಉಪನಿಷದ್ರಹಸ್ಯಗಳ ಮಹಾವಾಕ್ಯಗಳ ಹಾಗೂ ಮೂಲಭೂತ ತತ್ವಗಳ ಪರಿಚಯ ಪಡೆಸಿಕೊಡುವ ಮೋಕ್ಷಗೀತೆ, ಸಾಮ, ಅಷ್ಟ, ವೇದಾಂತ ವಿಚಾರ ಎಂಬ ಲಘುಗಳು ಸಂಗ್ರಹಕ್ಕೆ ಭೂಷಣಪ್ರಾಯವಾಗಿವೆ. ಆಧುನಿಕ ಜ್ಞಾನಯುಗಕ್ಕೆ ಹೊಂದುವಂತೆ ಬರೆದ ಸ್ವಾಮಿಗಳ ಸರಳಶೈಲಿಯ ತತ್ವವಿಮರ್ಶೆಯೇ ಈ ಸಂಗ್ರಹದಲ್ಲಿ ಬಹು ಮುಖ್ಯವಾದ ಭಾಗ ತತ್ವಜ್ಞರ ಜನಾಂಗವೆಂದು ಹೆಸರಾದ ಭಾರತೀಯರ ಪೂರ್ವಜರ ತತ್ವಸಾಹಿತ್ಯದ ಶಿರೋಮಣಿಗಳೆನಿಸಿರುವ ಉಪನಿಷತ್ತುಗಳ ಅಧುನಿಕ ವಿವರಣಗಳು ಎಷ್ಟು ಭಾಷೆಗಳಲ್ಲಿ ಎಷ್ಟು ಪ್ರಾಂತಗಳಲ್ಲಿ ಪ್ರಕಟವಾದರೂ ಸಾಲದು. ಹೀಗಿರುವಲ್ಲಿ ತತ್ವವೇತ್ತರಾದ ಶ್ರೀ ಶಿವಾನಂದ ಸ್ವಾಮಿಗಳ ಮೂಲಕ ಇಂತಹ ಅಮೂಲ್ಯ ಗ್ರಂಥವನ್ನು ಪ್ರಕಾಶ ಪಡಿಸಿದ ಮೇಲೆ ಹೇಳಿದ ಪ್ರಚಾರಕ ಸಂಘದವರ ಕಾರ್ಯ ಅತ್ಯಂತ ಪ್ರಶಂಸನಾರ್ಹವಾದುದು. ತಮ್ಮ ಜೀವನದ ದೃಷ್ಟಿಯನ್ನು ವೈಜ್ಞಾನಿಕವಾಗಿ ತಿದ್ದಿ ರೂಪಿಸಿಕೊಂಡು ಶಾಂತಿಯನ್ನು ಕಾಣಬಯಸುವ ವಿಚಾರಪರ ತರುಣರು ತಪ್ಪದೆ ಈ ಗ್ರಂಥವನ್ನು ಅನುಶೀಲನ ಮಾಡದಿರರೆಂದು ನಮ್ಮ ನಂಬಿಗೆ.

ಅಮೇರಿಕದಲ್ಲಿ ಸ್ತ್ರೀ ಸಮಾನತೆ ಮತ್ತು ಆತ್ಮಗೌರವ

ಲೇ:— ಶ್ರೀ ನಾಡಿಗ ಕೃಷ್ಣಮೂರ್ತಿ

ವಿಶೇಷ ಲೇಖನ

ಸ್ತ್ರೀ ಸಮಾನತೆ

ಕಳೆದ ಮೂವತ್ತು ವರ್ಷಗಳಿಂದೀಚೆಗೆ ಅಮೇರಿಕೆಯ ಸಮಾಜ ಜೀವನದಲ್ಲಿ ಸ್ತ್ರೀಸಮಾನತೆಯ ವಿಷಯದಲ್ಲಿ ಅದಷ್ಟು ಪ್ರಗತಿ ಇನ್ನಾವ ದೇಶದಲ್ಲೂ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ೩೦ ವರ್ಷಗಳ ಹಿಂದೆ ಈ ವಿಷಯದಲ್ಲಿ ಒಂದು ಸಂಪ್ರದಾಯ ಬೆಳೆದು ಬಂದಿತ್ತು. ಅನೇಕ ಕಾರಣಗಳಿಗಾಗಿ ಈ ಸಂಪ್ರದಾಯಗಳು ಮುರಿದುಬಿದ್ದು ಸ್ತ್ರೀಯರಿಗೆ ಪುರುಷರ ಜೊತೆ ಸಮಾನವಾದ ಹಕ್ಕುಗಳೂ ಸ್ವಾತಂತ್ರ್ಯವೂ ಲಭಿಸಿವೆ. ಈ ಬದಲಾವಣೆಗಳು ಸಾಮಾಜಿಕ ಜೀವನಕ್ಕೆ ಒಳ್ಳೆಯದೋ, ಕೆಟ್ಟದೋ, ಅಂತೂ ಬದಲಾವಣೆ ಬಂದು ಹೋಗಿದೆ. ಬೇರೆ ದೇಶಗಳಿಂದ ಬರುವವರು ಈ ಬದಲಾವಣೆಗಳನ್ನು ತಿಳಿದುಕೊಂಡಿರಬೇಕು. ಪುರುಷರಿಗಿರುವಂತೆ ಈ ಸ್ತ್ರೀಸ್ವಾತಂತ್ರ್ಯ ಮೊದಲಿನಿಂದಲೂ ಬೆಳೆದು ಬಂದಿದೆ. ಹೊಸಬರು ಜಾಗ್ರತೆಯಾಗಿ ಹೊಂದಿಕೊಳ್ಳಲು ಕಷ್ಟ. ಈ ಸ್ವಾತಂತ್ರ್ಯವನ್ನು ತಪ್ಪು ತಿಳಿದುಕೊಳ್ಳಬಾರದು. ಉದಾಹರಣೆಗಾಗಿ ಒಬ್ಬ ಯುವಕ ಯುವತಿ ಜೊತೆಯಾಗಿ ರೈಲಿನಲ್ಲಾಗಲೀ, ಬಸ್ಸಿನಲ್ಲಾಗಲೀ, ಕುಳಿತುಕೊಂಡು ಮಾತನಾಡಿದರೆ ಅದನ್ನು ತಪ್ಪು ತಿಳಿಯಲಾಗದು. ಹಾಗೆಯೇ ಆ ಸಂಧಿಯನ್ನು ದೊಡ್ಡದುಮಾಡಿ ಹತ್ತಿರ ಸಂಬಂಧ ಬೆಳೆಯಿಸುವ ದುರಾಲೋಚನೆ ಮಾಡಲಾಗದು. ಹಾಗೇ ಮಾತನಾಡಿ ಜೊತೆ ಕೊಡುವುದು (ಹೊಸಬರಾದರೂ) ಅಮೇರಿಕನ್ನರ ಗುಣಗಳಲ್ಲೊಂದು.

ಪುರುಷರಿಗೂ ಸ್ತ್ರೀಯರಿಗೂ ಸಮಾನವಾದ ಹಕ್ಕು ಬಾಧ್ಯತೆಗಳಿರುವುವೆಂದು ಅಮೇರಿಕನ್ನರ ಮತ. ಅದನ್ನು ಗಳಿಸಲು ಅವರು ಪ್ರಯತ್ನಪಡುತ್ತಾರೆ. ಸ್ತ್ರೀಯರಿಗೆ ಯಾವಾಗಲೂ ಅಗ್ರ ಪೂಜೆ ಇಲ್ಲ. ಹಿಂದಿನಿಂದಲೂ ನಡೆದುಬಂದ ಪದ್ಧತಿ ಬಾಗಿಲು ತೆರೆದಾಗ, ಮೊದಲು ಸ್ತ್ರೀಗೆ ಪ್ರವೇಶ ಆ ಮೇಲೆ ಗಂಡಸಿಗೆ. ಬಸ್ಸು, ರೈಲು, ಹಡಗುಗಳೂ ಹಾಗೆಯೇ.

ಸ್ತ್ರೀಯನ್ನು ಗಂಡಸಿಗೆ ಮೊದಲು ಭೆಟ್ಟಿಮಾಡಿಸಿದಾಗ ಇಬ್ಬರೂ ಕೈ ಕೈ ಕುಲುಕುವುದು ಆ ಸ್ತ್ರೀಯ ಅಭೀಷ್ಟದ ಮೇಲೆ ಹೋಗುತ್ತದೆ. ಆಕೆಯೇ ಕೈ ಚಾಚಿದರೆ, ಗಂಡಸು ಕೈ ಕುಲುಕಬಹುದು. ಆದರೆ ಇತ್ತೀಚಿಗೆ ಅನೇಕ ಹೆಂಗಸರು ವ್ಯಾಪಾರ, ಕೈಗಾರಿಕೆ ಮತ್ತು ಸಾರ್ವಜನಿಕ ಜೀವನಗಳಲ್ಲಿ ಬಂದಿರುವುದರಿಂದ ಹಿಂದಿನ ಸಾಂಪ್ರದಾಯಿಕ ಪದ್ಧತಿಗಳು ಕಡಿಮೆಯಾಗುತ್ತ ಬಂದಿವೆ.

ಆತ್ಮ ಗೌರವ

"ರೋಮಿನಲ್ಲಿರುವಾಗ ರೋಮನ್ನರಂತೆ ವರ್ತಿಸಬೇಕೆಂ"ಬ ನಾಣ್ಣುಡಿಯು ಇರುವುದಾದರೂ ಇದು ಸತ್ಯ. ಆಯಾ ದೇಶದ ಅರ್ಥ ಸಂಸ್ಕೃತಿ ನಾಗರಿಕತೆ ಮತ್ತು ಸಾಮಾಜಿಕ ನಡೆನುಡಿಗಳನ್ನು ತಿಳಿದುಕೊಳ್ಳಬೇಕಾದುದೇನೋ ಅವಶ್ಯಕ. ಆದರೆ ನಮ್ಮ ಆತ್ಮಗೌರವಕ್ಕೆ ಧಕ್ಕೆ ಬರುವಂತಹ ಆಚಾರಗಳನ್ನು ಮಾಡಬಾರದು. ನಮ್ಮ ನಡೆಎಲ್ಲಿ ಅವಶ್ಯಕವೊ ಅಲ್ಲಿ ತೋರಿಸಲೇಬೇಕು. ಅದಕ್ಕೊಂದು ವೈವಿಧ್ಯ ಇದೆ. ಬೆಲೆ ಇದೆ. ಸಮಾಜದ ಬೆಳವಣಿಗೆಗೆ ಈ ತೆರನಾದ ಪರಕೀಯ ನಡೆನುಡಿಗಳೂ ಅವಶ್ಯಕ. ಉದಾಹರಣೆಗೆ ಸಂತೋಷ ಕೂಟಗಳಲ್ಲಿ ಮದ್ಯಪಾನ ಮಾಡುವದೊಂದು ಮೊದಲಿನಿಂದ ಬಂದಪದ್ಧತಿ. ಇದು ಇತ್ತೀಚಿಗೆ ಜಾಸ್ತಿಯಾಗಿದೆ. ಆದರೆ ಮದ್ಯಪಾನ ಮಾಡದಿರುವವರು ಅನೇಕರಿದ್ದಾರೆ. ಹಾಗೆ ಮಾಡುವುದಿಲ್ಲವೆಂದು ನಯವಾಗಿ ನಿರಾಕರಿಸುವುದು ತಪ್ಪೇನಲ್ಲ. ವೈಯಕ್ತಿಕ ನೀತಿ ನಿಯಮಗಳಿಗೆ ಯಾವಾಗಲೂ ಬೆಲೆ ಇದ್ದೇ ಇರುವುದು. ಅಮೇರಿಕಾ ಇಂಗ್ಲೆಂಡುಗಳಿಗೆ ಬಂದಾಗ ಫರಂಗಿಯರಂತೆ ನಡೆದರೇನೆ ಜೀವನ ಇಲ್ಲದಿದ್ದರೆ ಇಲ್ಲ ಎಂಬ ಭಾವನೆ ಶುದ್ಧ ತಪ್ಪು. ಹೆಚ್ಚಾಗಿ ನಮ್ಮ ಜೀವನ, ನಡೆನುಡಿಗಳನ್ನು ತೋರಿಸಿದರೆ ಈ ಜನ ಹೆಚ್ಚು ಆಸಕ್ತಿಯಿಂದ ಬರಮಾಡಿಕೊಳ್ಳುತ್ತಾರೆ. ನೋಡಿ, ಕೇಳಿ, ಕೆಲವು ಸಲ ಅನುಭವಿಸಿ ಆನಂದಿಸುತ್ತಾರೆ.

ಭಾರತೀಯರಿನ್ನು ಪರದೇಶದ ವಿದ್ಯಾಭ್ಯಾಸದ ಮೋಹ ಬಿಡಬೇಕು. ಇಲ್ಲಿ ಹೇಳಿಕೊಡುವ ವಿಷಯಗಳೆಲ್ಲವನ್ನೂ ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಇದಕ್ಕೂ ಚೆನ್ನಾಗಿ ಅಭ್ಯಾಸ ಮಾಡಬಹುದು. ವೃತ್ತಪತ್ರಿಕೋದ್ಯಮ, ಅರ್ಥಶಾಸ್ತ್ರ, ಚರಿತ್ರೆ ಮುಂತಾದ ಶಾಸ್ತ್ರಗಳನ್ನು ಓದಲು ಈ ದೇಶಕ್ಕೆ ಬರುವ ಅವಶ್ಯಕತೆ ಏನೂ ಇಲ್ಲ. ಪರದೇಶದ ಡಿಗ್ರಿ ಮೋಹಕ್ಕಾಗಿ ಬರಬೇಕೆ ವಿನಾ ಇನ್ನೇತಕ್ಕೂ ಇಲ್ಲ. ಇನ್ನು ವೈಜ್ಞಾನಿಕ ವಿಷಯಗಳಲ್ಲಿ ಪ್ರಾಯೋಗಿಕವಾಗಿ ಈ ದೇಶದಲ್ಲಿ ಹೆಚ್ಚು ಜ್ಞಾನ ಸಂಪಾದಿಸಬಹುದು. ಆದರೆ ವೇದಾಂತ ಭೂಮಿ ಮತ್ತು ವ್ಯವಸಾಯ ಭೂಮಿಯಾದ ಭಾರತಕ್ಕೆ ಈ ತೆರನಾದ ಯಂತ್ರಜೀವನ ಎಷ್ಟೂ ಒಗ್ಗಲಾರದು. ಒಂದು ವೇಳೆ ಒಗ್ಗಿದರೂ ಇಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಸರಿಯಾದ ಯಂತ್ರ ಸಾಮಗ್ರಿಗಳು ಸಿಕ್ಕದೆ ಬರೀ ತತ್ವ ಬೋಧನೆಯಾಗುವುದು. ಭಾರತ ಸರ್ಕಾರದಿಂದ ವೇತನ ಪಡೆದು ಬಂತಿರುವ ನೂರಾರು ವಿದ್ಯಾರ್ಥಿಗಳು ಇಲ್ಲಿ ಇದೇ ತೆರನಾದ ಅಭಿಪ್ರಾಯ ಪಡುತ್ತಿದ್ದಾರೆ.

ಸಾಮಾನ್ಯವಾಗಿ ಪರದೇಶಗಳಿಗೆ ಬರುವವರು ಇಡೀ ಭಾರತ ಸುತ್ತಿ ಭಾರತದ ಬಗ್ಗೆ ಸಾಮಾನ್ಯ ಜ್ಞಾನ ಸಂಪಾದಿಸಿಕೊಂಡು ಬರಬೇಕು. ಕಾಲೇಜಿನಲ್ಲಿ ಕಲಿಯಲಿಕ್ಕಲ್ಲದೆ ಬರೀ ಸಾಂಸ್ಕೃತಿಕ ಪ್ರತಿನಿಧಿಗಳಾಗಿ ಬಂದರೂ ಪರವಾಯಿಲ್ಲ. ಅದೇ ಉಪಯೋಗ ಹೆಚ್ಚು.

ಎಳೆಹರೆಯದ ಯುವಕರು ಬರುವುದಕ್ಕಿಂತ ಬಲಿತ ಜ್ಞಾನದ ಚಾಳೀಸದ ಮಂದಿ ಬಂದರೆ ದೇಶದ ಉತ್ತಮ ಪ್ರದರ್ಶನವಾದೀತು. ಅವರಿಗೆ ಯಾವ ಚಿಂತೆಯೂ ಭಾರತದ ಬಗ್ಗೆ ಇರುವದಿಲ್ಲ. ಪ್ರಚಾರ ಮಾಡಿ, ಅಮೇರಿಕದ ಜೀವನ ತಿಳಿದುಕೊಂಡು ಹೋಗಬಹುದು. ಹೊಸ ದೇಶ ನೋಡುವದು ಒಳ್ಳೆಯದು ಮುಂದಿನ ಕೆಲವು ಲೇಖನಗಳಲ್ಲಿ ಅಮೇರಿಕದ ವಿದ್ಯಾಭ್ಯಾಸದ ಬಗ್ಗೆ ಬರೆಯುವವನಿದ್ದೇನೆ. ಅಲ್ಲಿ ವಿದ್ಯಾಭ್ಯಾಸ ಹೇಗೆ ನಡೆಯುತ್ತಿದೆ ಮತ್ತು ಭಾರತಕ್ಕೆ ಯಾವ ರೀತಿ ಸಹಾಯವಾಗಬಹುದೆಂದು ತಿಳಿಯುವಿರಿ. ಡಿಗ್ರಿ ಮೋಹಕ್ಕಾಗಿ ಇಲ್ಲಿಗೆ ಓದಲು ಬರದೆ ಹೊಸ ದೇಶ ಹೊಸ ಪ್ರಪಂಚ, ಹೊಸ ಸಂಸ್ಕೃತಿ, ನಡೆನುಡಿ, ನಾಗರಿಕತೆ ತಿಳಿದುಕೊಂಡು ಹೋಗಲು ಬಂದರೆ ನಮ್ಮ ದೇಶಕ್ಕೂ ಉಪಕಾರವಾದೀತು. ಇಲ್ಲಿಗೆ ಬಂದ ಸಾರ್ಥಕ್ಯವೂ ಆದೀತು.

ಈ ಕೆಲ ಲೇಖನಗಳಲ್ಲಿ ನನಗೆ ತಿಳಿದ ಮಟ್ಟಿಗೆ ನಾನು ಕಂಡು, ಕೇಳಿ, ಅನುಭವಿಸಿದ ಅಂಶಗಳ ಆಧಾರದ ಮೇರೆಗೆ ಕೆಲವು ಸೂಚನೆಗಳನ್ನು ಕೊಡಲು ಪ್ರಯತ್ನ ಮಾಡಿದ್ದೇನೆ. ಅಮೇರಿಕೆಯ ಜೀವನದಲ್ಲಿ ಇನ್ನೂ ಉತ್ತಮವಾದ ಅಂಶಗಳಿರಬಹುದು. ಕೆಟ್ಟವೂ ಇರಬಹುದು. ನಾನು ಅವನ್ನು ಅನುಭವಿಸಿದಾಗ ಇನ್ನೊಂದು ಸಂದರ್ಭದಲ್ಲಿ ಬರೆಯುವೆ. ಅಮೇರಿಕೆಯ ಬಗ್ಗೆ ಈ ಲೇಖನದಿಂದ ಕೆಲವಾದರೂ ಅಂಶಗಳು ಕನ್ನಡಿಗರಿಗೆ ತಿಳಿಯುವಂತಾಗಿದ್ದರೆ ನಾನು ಇಲ್ಲಿ ಹಲವಾರು ಘಂಟೆಗಳು ಶ್ರಮಪಟ್ಟು ಬರೆದ ವೇಳೆಗೆ ಬೆಲೆ ಬಂದೀತು.

ಕನ್ನಡಿಗರಿಗೆ ಶ್ರೀ ಕರಮರಕರರ ಸಂದೇಶ

ಶ್ರೀ ದತ್ತಾತ್ರೇಯ ಕರಮರಕರರು ಹವಾನಾ ವಾಣಿಜ್ಯ ಪರಿಷತ್ತಿಗೆ ಹೊರಡುವ ಮೊದಲು ಮುಂಬಯಿಯಿಂದ ಕನ್ನಡಿಗರಿಗೆ ಕೆಳಗಿನ ಸಂದೇಶವನ್ನು ಕೊಟ್ಟಿದ್ದಾರೆ.

ಹವಾನಾ ಪರಿಷತ್ತಿನಲ್ಲಿ ಮತ್ತೆ ಆ ನಿಮಿತ್ತವಾಗಿ ನನ್ನ ಮಾತೃಭೂಮಿಗೆ ಸಾಧ್ಯವಾದ ನನ್ನ ಸೇವೆಯನ್ನು ಸಲ್ಲಿಸಬೇಕೆಂದೂ ಹೊಸ ಸಂಗತಿಗಳನ್ನು ಕಲಿತುಕೊಳ್ಳಬೇಕೆಂದೂ ನನ್ನ ಹಂಬಲವೇ ಹೊರತು ಇತರರಿಗೆ ಸಂದೇಶ ಕೊಡಬೇಕೆಂಬ ಮನೋವೃತ್ತಿಯು ಈ ಕ್ಷಣಕ್ಕೆ ನನ್ನಲ್ಲಿಲ್ಲ. ಹೋಳಮನ್ವಂತರದಲ್ಲಿ ಪ್ರಸನ್ನತೆಯಿಂದ ದುಡಿದರೆ ಕನ್ನಡನಾಡನ್ನು ಹೆಮ್ಮೆಯ ನಾಡನ್ನಾಗಿ ಮಾಡಬಹುದು; ಭಾರತಕ್ಕೆ ಆದರ್ಶವಾಗುವಂತೆ ಮಾಡಬಹುದು. ನಮ್ಮನಮ್ಮಲ್ಲಿಯ ಚಿಕ್ಕಪುಟ್ಟ ಭೇದಗಳನ್ನಳಿಸಿ ನಾಡಿನ ಏಳ್ಗೆಗಾಗಿ ನಿರ್ಮಲ ಬುದ್ಧಿಯಿಂದ ದುಡಿಯುವ ಮನಸ್ಸನ್ನು ಎಲ್ಲರಿಗೂ ದೇವರು ನಮಗೆ ದಯಪಾಲಿಸಲಿ ಎಂಬುದಿಷ್ಟೆ ನನ್ನ ನಮ್ರ ಹಾರೈಕೆ.

ಪಡಿತರ ವಿನಿಯಂತ್ರಣ

ಆಹಾರ ಧಾನ್ಯಗಳ ಮೇಲಿನ ನಿಯಂತ್ರಣದಿಂದ ಕಳ್ಳಪೇಟೆ, ಲಾಭಬಡುಕತನ ಮತ್ತು ಲಂಚಗುಳಿತನಕ್ಕೆ ಅವಕಾಶವುಂಟಾಗಿದೆಯೆಂದೂ ಅದನ್ನು ಕೂಡಲೆ ತೆಗೆದುಬಿಡಬೇಕೆಂದೂ ಹಿಂದುಸ್ತಾನದಲ್ಲಿಯ ಅನೇಕ ಧುರೀಣರೂ ಸಂಸ್ಥೆಗಳೂ ಅಭಿಪ್ರಾಯ ವ್ಯಕ್ತಪಡಿಸಿದವು. ಮಹಾತ್ಮಾ ಗಾಂಧಿಯವರೂ ಈ ಸಂಬಂಧದಲ್ಲಿ ತಮ್ಮ ಅಭಿಪ್ರಾಯವನ್ನು ಕೊಡುತ್ತ ನಿಯಂತ್ರಣಗಳನ್ನು ಕೂಡಲೆ ತೆಗೆದುಹಾಕಬೇಕೆಂದು ಸಲಹೆ ಇತ್ತರು. ಈ ಬಗ್ಗೆ ಇಡೀದೇಶದಲ್ಲಿ ಸಂಚರಿಸುವದಾಗಿಯೂ ಸಾರಿದರು. ಇವೆಲ್ಲದರ ಪರಿಣಾಮವಾಗಿ ಹಿಂದುಸ್ತಾನ ಸರಕಾರದವರು ಆಹಾರ ಧೋರಣದ ಪುನರ್ವಿಮರ್ಶೆ ಮಾಡಿ ಮೊನ್ನೆ ೧೦ ನೇ ತಾರೀಕಿಗೆ ಪ್ರಕಟನೆ ಹೊರಡಿಸಿರುವರು. ಕ್ರಮೇಣ ವಿನಿಯಂತ್ರಣವೆ ತಮ್ಮ ಧೋರಣವೆಂದೂ ಪ್ರಾಂತಿಕ ಸರಕಾರಗಳು ತಮ್ಮಲ್ಲಿನ ಪರಿಸ್ಥಿತಿಯನ್ನು ಲಕ್ಷಿಸಿ ಸೂಕ್ತವಾದ ಕ್ರಮಕೈಕೊಳ್ಳಬಹುದೆಂದೂ ಸಾರಿರುವರು. ಈ ಸಂಬಂಧದ ಅವರ ಪ್ರಕಟನೆಯ ಮುಖ್ಯಾಂಶವನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಕೊಟ್ಟಿದ್ದೇವೆ. ಮುಖ್ಯವಾದ ಆಹಾರ ಪದಾರ್ಥಗಳನ್ನು ಬಿಟ್ಟು ಉಳಿದೆಲ್ಲ ಆಹಾರ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ತೆಗೆದುಹಾಕಲಾಗಿದೆ. ಹಿಂದುಸ್ತಾನ ಸರಕಾರ ನಿರ್ಧರಿಸಿದೆ. ಆದರೆ ಯಾವದೇ ಕಾರಣದಿಂದ ಇದರ ದುರುಪಯೋಗವಾದರೆ ಮತ್ತಷ್ಟು ಬಿಗಿಯಾದ ನಿಯಂತ್ರಣವನ್ನು ಹಾಕುವದಾಗಿಯೂ ಮಂತ್ರಿಗಳು ಎಚ್ಚರಿಕೆ ಕೊಟ್ಟಿರುವರು. ಹಿಂದುಸ್ತಾನ ಸರಕಾರದ ಈ ಧೋರಣೆಗನುಸಾರವಾಗಿ ಮದ್ರಾಸ ಮುಂಬಯಿ ಮೊದಲಾದ ಪ್ರಾಂತಿಕ ಸರಕಾರಗಳೂ ತಮ್ಮ ಧೋರಣವನ್ನು ೧೦ ನೇ ತಾರೀಖಿಗೆ ಸಾರಿವೆ. ಮದ್ರಾಸ ಪ್ರಾಂತದಲ್ಲಿ ಆಹಾರ ವಿನಿಯಂತ್ರಣದ ಮೂರು ಮೆಟ್ಟಲುಗಳನ್ನು ಗೊತ್ತುಪಡಿಸಿ ಮೊದಲನೆಯ ಮೆಟ್ಟಲಾಗಿ ದತ್ತ ಮಂಡಳದಲ್ಲಿಯ ಗ್ರಾಮಾಂತರಗಳಲ್ಲಿದ್ದ ನಿಯಂತ್ರಣವನ್ನು ಕೂಡಲೆ ತೆಗೆದು ಹಾಕುವದಾಗಿ ಸಾರಿರುವರು. ಮುಂಬಯಿ ಪ್ರಾಂತದಲ್ಲಿ ಮುಂಬಯಿ, ಅಹಮದಾಬಾದ ಪುಣೆ ಮತ್ತು ಸೊಲ್ಲಾಪುರ ನಗರಗಳನ್ನು ಹೊರತುಪಡಿಸಿ ಉಳಿದೆಲ್ಲ ಕಡೆಯಲ್ಲಿದ್ದ ಸೀದಾ ಪದ್ಧತಿಯನ್ನು ಬರುವ ಜಾನೇವಾರಿ ೧ ನೇ ತಾರೀಖಿನಿಂದ ತೆಗೆದು ಹಾಕಲಾಗುವದು. ಅಲ್ಲದೆ ಕೆಲವು ಅಪವಾದಗಳನ್ನು ಮಾಡಿ ಇಡೀ ಪ್ರಾಂತದಲ್ಲಿಯ ಸಾಗಾಟದ ಮೇಲಿನ ನಿರ್ಬಂಧವನ್ನೂ ತೆಗೆದು ಹಾಕುವರು. ಕೇಂದ್ರ ಆಹಾರ ಧಾನ್ಯಗಳ ಹಾಗು ಕಡ್ಡಾಯ ಖರೇದಿಗಾಗಿ ಒತ್ತಾಯದ ಲೆವಿ ಹಾಗು ಸರಕಾರಿ ಗುತ್ತಿಗೆ ಬಿಟ್ಟು ಬಿಡಲು ನಿರ್ಧರಿಸಿರುವರು. ನಿಯಂತ್ರಣದ ಬಗ್ಗೆ ಜನತೆಯಲ್ಲಿ ಬಹಳ ದಿನಗಳಿಂದ ಒಂದು ಬಗೆಯ ಅಸಮಾಧಾನತೆ ಉಂಟಾದ್ದನ್ನು ಲಕ್ಷಿಸಿ ಅಯಾ ಸರಕಾರಗಳು ನಿರ್ಬಂಧಗಳನ್ನು ತೆಗೆದುಹಾಕಿರುವವು. ಸರಕಾರದವರು ಕೊಟ್ಟ ಈ ಸೌಕರ್ಯದ ದುರುಪಯೋಗವಾಗದಂತೆ ನೋಡಿಕೊಳ್ಳುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಉತ್ಪಾದಕರು ಹೆಚ್ಚು ಉತ್ಪಾದನೆಯಾಗುವಂತೆ ಸರ್ವವಿಧ ಪ್ರಯತ್ನ ಮಾಡಬೇಕು. ತಮಗೆ ಸಾಲುವಷ್ಟು ಕಾಳನ್ನು ಇಟ್ಟುಕೊಂಡು ಉಳಿದುದನ್ನೆಲ್ಲ ಮಾರಬೇಕು. ವ್ಯಾಪಾರಸ್ಥರು ದುಡ್ಡಿನ ಬಲುಮೆಯಿಂದ ಎಲ್ಲ ಕಾಳುಗಳನ್ನು ಕೊಂಡು ಮನಬಂದಂತೆ ಧಾರಣೆಗಳನ್ನು ಏರಿಸಿ ಬಿಡುವ ಹವ್ಯಾಸವನ್ನು ತಳೆಯಬಾರದು. ಹಿಂದಿನಂತೆ ಯೋಗ್ಯ ಲಾಭವನ್ನಷ್ಟೇ ತೆಗೆದುಕೊಂಡು ಅಯಾ ಕಾಳುಗಳನ್ನು ಮಾರುವ ಧೋರಣವನ್ನು ಸ್ವೀಕರಿಸಬೇಕು. ನಾಗರಿಕರಾದರೂ ಮುಂದೆ ಕಾಳು ಸಿಕ್ಕುವವೊ ಇಲ್ಲವೊ ಎಂಬ ಸಂಶಯಕ್ಕೊಳಗಾಗಿ ಹೆಚ್ಚು ಧಾನ್ಯಗಳನ್ನು ಸಂಗ್ರಹಿಸಿಕೊಳ್ಳುವ ಪ್ರವೃತ್ತಿಗೊಳಗಾಗಬಾರದು. ಕಾಳು ಕೆಟ್ಟುಹೋಗದಂತೆಯೂ ನೋಡಿಕೊಳ್ಳುವದು ಅವಶ್ಯವಾಗಿದೆ. ಈ ರೀತಿ ಎಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ಮಾಡಿ ಆಹಾರದ ಕೊರತೆ ಎಲ್ಲಿಯೂ ಆಗದಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಅಂದರೇನೇ ಸರಕಾರದವರು ಹೊಸದಾಗಿ ಕೈಕೊಂಡ ಈ ವಿನಿಯಂತ್ರಣ ಧೋರಣವು ಯಶಸ್ವಿಯಾಗಿ ಸದ್ಯದ ಆಹಾರ ಕೊರತೆ ಹಿಂಗುವದು. ಸರಕಾರದವರೂ ಈ ಬಗ್ಗೆ ಜಾಗ್ರತರಾಗಿದ್ದು ಪರಿಸ್ಥಿತಿ ಹದಗೆಡದಂತೆ ನೋಡಿಕೊಳ್ಳಬೇಕೆಂದು ಸೂಚಿಸಬಯಸುತ್ತೇವೆ.

ಅಸಮಾಧಾನಕರ

ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಭಾಷಾನ್ವಯ ಪ್ರಾಂತರಚನೆಯ ಬಗೆಗೆ ಹಿರಿಯೋಲಗದಲ್ಲಿ ಕೊಟ್ಟ ಹೇಳಿಕೆಯಿಂದ ಕನ್ನಡನಾಡಿನಲ್ಲೆಲ್ಲ ಅಸಮಾಧಾನವುಂಟಾಗಿದೆ. ಭಾರತೀಯ ಸ್ವಾತಂತ್ರ್ಯ

ಸಂಪಾದಕೀಯ ಟೀಕೆಟಿಪ್ಪಣಿಗಳು

ಸಮರದಲ್ಲಿ ಮಹತ್ವದ ಭಾಗ ವಹಿಸಿ ಕೀರ್ತಿಯನ್ನು ಪಡೆದ ಕರ್ನಾಟಕವಿಂದು ಸ್ವತಂತ್ರ ಪ್ರಾಂತವಾಗುವ ಸಮಯ ಬಂದಾಗ ಪಂಡಿತ ಜವಾಹರಲಾಲರಂಥ ಹೊಣೆಗಾರ ಮುಖಂಡರು ಅದನ್ನು ಮುಂದಕ್ಕೆ ಹಾಕಲು ಪ್ರಯತ್ನಿಸುವದು ತುಂಬ ಶೋಚನೀಯವಾಗಿದೆ. ಇದನ್ನು ಪ್ರತಿಭಟಿಸಬೇಕೆಂದೂ ಸರಕಾರದ ಗೂಢ ಅಸಹಕಾರ ಧೋರಣವನ್ನು ವಹಿಸಬೇಕೆಂದೂ ಕರ್ನಾಟಕದಲ್ಲಿ ಅಲ್ಲಲ್ಲಿ ಮಾತುಗಳು ಕೇಳಬರುತಿವೆ. ಆದರೆ ಈ ರೀತಿ ದುಡುಕಿ ಪ್ರಯೋಜನವಿಲ್ಲ. ಹಿಂದಿನ ಹಿರಿಮೆಗೆ ತಕ್ಕಂತೆ ಕರ್ನಾಟಕವು ಈಗಲೂ ವರ್ತಿಸುವದು ಅವಶ್ಯವಾಗಿದೆ, ಕಾಂಗ್ರೆಸ್ಸು ಭಾಷಾನ್ವಯ ಪ್ರಾಂತರಚನೆಯ ತತ್ವವನ್ನೊಪ್ಪಿಕೊಂಡು ತನ್ನ ಪ್ರಾಂತಗಳನ್ನು ರಚಿಸಿಕೊಂಡಿದೆ. ಕಳೆದ ೨೭ ವರುಷಗಳಲ್ಲಿ ಸ್ವತಂತ್ರ ಕರ್ನಾಟಕ ಪ್ರಾಂತವು ಬೇರೆ ಎಲ್ಲ ಪ್ರಾಂತಗಳಿಗೂ ಮಿಗಿಲಾಗಿ ಕಾರ್ಯ ಮಾಡಿದೆ. ಮಹಾತ್ಮರು ಕೂಡ ಈ ಸ್ವತಂತ್ರ ಪ್ರಾಂತವನ್ನು ಆಶೀರ್ವದಿಸಿ ಹೆಮ್ಮೆಯಿಂದ ಗೌರವಿಸಿದುಂಟು. ಸರ್ವಪಕ್ಷೀಯ ಪರಿಷತ್ತಿನಲ್ಲಿ ಕೂಡ ಕರ್ನಾಟಕ ಸ್ವತಂತ್ರ ಪ್ರಾಂತವಾಗಲು ಎಲ್ಲ ಬಗೆಯಿಂದ ತಕ್ಕುದಾಗಿದೆಯೆಂದು ಸಾರಲಾಗಿದೆ. ಪಂಡಿತ ಜವಾಹರಲಾಲರೆ ಆ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ಹೀಗಿದ್ದರೂ ಅವರು ಈಗ ಆಂಧ್ರ ಪ್ರಾಂತದ ಹೆಸರನ್ನು ಮುಂದೆ ಮಾಡಿ ಸ್ವತಂತ್ರ ಪ್ರಾಂತಗಳ ರಚನೆಯಲ್ಲಿ ಕರ್ನಾಟಕವನ್ನು ಹಿಂದೆ ದೂಡಿದ್ದು ಆಶ್ಚರ್ಯಕರ ಮತ್ತು ಅಸಮಾಧಾನಕರವಾಗಿದೆ. ಹಿಂದುಸ್ತಾನ ಸರಕಾರದವರು ತಮ್ಮ ಧೋರಣದ ಪುನರ್ವಿಮರ್ಶೆ ಮಾಡಿ ಕನ್ನಡಿಗರ ಬಹುದಿನದ ಬೇಡಿಕೆಯನ್ನು ಮನ್ನಿಸುವರೆಂದು ನಂಬುತ್ತೇವೆ. ಕಾಸರಗೋಡಿನಲ್ಲಿ ಬರುವ ೨೯ ನೇ ತಾರೀಕಿಗೆ ಏಕೀಕರಣ ಪರಿಷತ್ತು ಕೂಡಲಿದೆ. ಅಲ್ಲಿ ಈ ವಿಷಯವು ಕೂಲಂಕಷವಾಗಿ ಚರ್ಚಿಸಲ್ಪಟ್ಟು ಸೂಕ್ತವಾದ ಧೋರಣವನ್ನು ಸ್ವೀಕರಿಸುವದು ಅವಶ್ಯವಾಗಿದೆ. ಈಗಾಗಲೆ ಈ ಸಂಬಂಧದಲ್ಲಿ ಸೂಚನೆಗಳು ಪ್ರಕಟವಾಗಿವೆ. ಅವೆಲ್ಲವನ್ನು ಕ್ರೋಡೀಕರಿಸಿ ಕರ್ನಾಟಕದ ಉಜ್ವಲ ಪರಂಪರೆಯನ್ನು ನೆನೆದು ಸೂಕ್ತವಾದ ರೀತಿಯಲ್ಲಿ ಕನ್ನಡಿಗರು ಮುಂದಿನ ಮಾರ್ಗವನ್ನು ಗೊತ್ತುಪಡಿಸುವರೆಂದು ನಂಬುತ್ತೇವೆ.

ಕರ್ನಾಟಕದ ಕುರುಬರು

ಕರ್ನಾಟಕದಲ್ಲಿ ಕುರುಬರ ಸಂಖ್ಯೆ ಬಹಳ. ಇವರು ಸರಳ ವೃತ್ತಿಯವರು, ಉದ್ಯೋಗಪ್ರಿಯರು. ಆದರೆ ವಿದ್ಯೆಯಲ್ಲಿ ಇವರು ಬಹಳ ಮುಂದುವರೆದಿರುವುದಿಲ್ಲಾದ್ದರಿಂದ ಬೇರೆ ಪಂಗಡದವರು ಅದರ ದುರ್ಲಾಭ ಪಡೆದುದುಂಟು. ಆದರೀಗ ಇವರಲ್ಲಿಯೂ ಜಾಗ್ರತೆಯುಂಟಾಗಿ ಸ್ವಹಿತವನ್ನು ಸಾಧಿಸಿಕೊಳ್ಳುವ ಪ್ರವೃತ್ತಿಯುಂಟಾಗಿದೆ. ತತ್ಪರಿಣಾಮವಾಗಿಯೆ ಕುರುಬರ ಸಂಸ್ಥೆ ಸ್ಥಾಪಿತವಾಗಿ ಅದರ ೫ನೇ ಅಧಿವೇಶನವು ವಿಜಾಪುರದಲ್ಲಿಯೆ ಕಳೆದವಾರ ನಡೆಯಿತು. ಪ್ರಾಂತದ ಅರ್ಥಸಚಿವರಾದ ಮಾನ್ಯ ವೈಕುಂಠಲಾಲ ಮೆಹತಾ ಇವರು ಅದರ ಪ್ರಾರಂಭವನ್ನು ಮಾಡಿದರು. ಶಾಸನಸಭಾ ಸದಸ್ಯರಾದ ಶ್ರೀ ದಳವಾಯಿ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಹಳ್ಳಿಯವರು ಸ್ವಾಗತಾಧ್ಯಕ್ಷರಾಗಿ ಎಲ್ಲವನ್ನೂ ಚೊಕ್ಕಟರೀತಿಯಿಂದ ಸಾಗಿಸಿಕೊಂಡು ಹೋದರು. ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಪ್ರಗತಿಯನ್ನು ಸಾಧಿಸಿಕೊಳ್ಳುವದಕ್ಕಾಗಿ ಇಂಥ ಅಧಿವೇಶನಗಳು ನಡೆದು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದುಂಟು. ವಿಜಾಪುರ ಪರಿಷತ್ತು ಈ ದಿಸೆಯಲ್ಲಿ ಮುಂದಡಿಯಿಟ್ಟಿದೆಂದು ಹೇಳಬಹುದು. ಅಧಿವೇಶನದಲ್ಲಿ ೩೫ ರಷ್ಟು ಗೊತ್ತುವಳಿಗಳು ಸ್ವೀಕೃತವಾಗಿವೆ. ಕನ್ನಡಿಗರ ಜೀವಾಳವಾದ ಕರ್ನಾಟಕ ಏಕೀಕರಣಕ್ಕೆ ಕುರುಬರು ಹೃತ್ಪೂರ್ವಕ ಬೆಂಬಲವನ್ನು ಕೊಟ್ಟಿದ್ದಾರೆ. ತಮ್ಮ ಉದ್ಯೋಗವನ್ನು ಬೆಳೆಸಿಕೊಳ್ಳುವ ಸಂಬಂಧದಲ್ಲಿ ಮಹತ್ವದ ನಿರ್ಣಯಗಳನ್ನು ಸ್ವೀಕರಿಸಿದ್ದಾರೆ. ಕುರುಬರು ತಮ್ಮ ಉದ್ಯೋಗದಲ್ಲಿನ ದೀನತೆಯನ್ನು ಕಂಡುಕೊಂಡದ್ದಾದರೆ, ಆಧುನಿಕ ರೀತಿಯಲ್ಲಿ ಜನತೆಯ ಬೇಡಿಕೆಗಳನ್ನು ಪೂರೈಸುವಂಥ ಕಂಬಳಿ, ಶಾಲು, ವಗೈರೆ ಬೇಕಾದವುಗಳನ್ನು ಸಿದ್ಧಪಡಿಸಿದ್ದಾದರೆ ಅವರ ಭವಿತವ್ಯವು ಉಜ್ವಲವಾಗುವದೆಂಬಲ್ಲಿ ಸಂದೇಹವಿಲ್ಲ. ಈ ಸಂಬಂಧದಲ್ಲಿ ಸರಕಾರದ ಮತ್ತು ಸಾರ್ವಜನಿಕರ ಸಹಾಯ ಅವರಿಗೆ ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ. ಆದರೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದಾದರೆ ಅವರು ಬೇರೆ ಬಗೆಯಿಂದ ಪ್ರಗತಿಹೊಂದಲು ಸಮರ್ಥರಾಗಬಲ್ಲರು. ಕುರುಬರು ತಮ್ಮ ಪ್ರಗತಿಯನ್ನು ಬೇಗ ಸಾಧಿಸಿಕೊಂಡು ಕರ್ನಾಟಕದ ಸಾರ್ವಾಂಗಿಕ ಉನ್ನತಿಗೆ ಸಹಾಯಕರಾಗಲಿ.

ಒಡಂಬಡಿಕೆಯೆಂತು ಸಾಧ್ಯ?

ಹೈದರಾಬಾದ ಸರಕಾರವೇತಿಯೇ ಭಾರತ ಸರಕಾರದಗೊಡನೆ ಯಥಾಸ್ಥಿತಿ ಒಪ್ಪಂದವನ್ನು ಒಂದು ವರ್ಷದ ವರೆಗೆ ಮಾಡಿಕೊಂಡಿತು. ಆದರೆ ಪ್ರಜೆಗಳಿಗೆ ಹೊಣೆಗಾರವಾದ ಸರಕಾರವನ್ನು ಸ್ಥಾಪಿಸಲು ಇನ್ನೂ ಸಿದ್ಧವಾಗದ್ದರಿಂದ ಅಲ್ಲಿನ ಪರಿಸ್ಥಿತಿ ಸುಧಾರಿಸಲಿಕ್ಕಿಲ್ಲ. ಕಾಂಗ್ರೆಸ ಬಹಿಷ್ಕಾರ ಹಿಂದುಗಡೆ ಮಾಡಿದ್ದೇಕೋ? ಆದರೆ ನ್ಯಾಯ್ಯವಾದ ಧೋರಣೆಯನ್ನು ನಡುಗಾಲ ಸರಕಾರ ಸ್ಥಾಪನೆಯಲ್ಲಿ ಅನುಸರಿಸದೆ ಇದ್ದುದರಿಂದ ಕಾಂಗ್ರೆಸ್ಸಿಗರು ಅದರಲ್ಲಿ ಸೇರುವ ಸಂದರ್ಭ ಒದಗಲಿಲ್ಲದು. ನಾಗರಿಕ ಮೂಲಭೂತಹಕ್ಕುಗಳನ್ನು ದಯಪಾಲಿಸಲು ನಿಜಾಮ ಪ್ರಭುಗಳು ಸಿದ್ಧರಾದರೆ ಒಡಂಬಡಿಕೆ ಸಾಧ್ಯವೆಂದು ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರು ಸಾರಿರುವರು. ನಿಜಾಮ ಪ್ರಭುಗಳ ಕೃಪಾಛತ್ರದಲ್ಲಿಯೇ ಹೊಣೆಗಾರ ರಾಜ್ಯ ಸ್ಥಾಪಿಸಿಕೊಳ್ಳಬೇಕೆಂಬುದೆ ಸಂಸ್ಥಾನ ಕಾಂಗ್ರೆಸ್ಸಿನ ಧ್ಯೇಯವಾಗಿದೆ. ಅಂದಬಳಿಕ ನಿಜಾಮ ಪ್ರಭುಗಳ ಅಧಿಕಾರಕ್ಕೆ ಅದೆಂತು ಲೋಪ ಬರುವದು ? ಅವಾಸ್ತವವಾಗಿ ತನ್ನ ಪ್ರತಿಷ್ಠೆಯನ್ನು ಬೆಳೆಸಿದ ಇತ್ತೆಹಾದ ಮುಸಲ್ಮೀನ ಸಂಸ್ಥೆಗೆ ಮಾತ್ರ ತನ್ನ ಪಾಶವೀ ಕೃತ್ಯಗಳನ್ನು ನಡೆಸಲು ಬರಲಾರದು. ಆದರೆ ಬಹುಸಂಖ್ಯ ಪ್ರಜೆಗಳ ಮನಸ್ಸಿನ ವಿರುದ್ಧ ನಿಜಾಮ ಪ್ರಭುಗಳಾಗಲಿ ಅವರ ಈ ಪ್ರತಿಗಾಮಿ ಸಂಸ್ಥೆಯಾಗಲಿ ಬಹಳ ದಿವಸ ಕಾಯಕವನ್ನು ನಡೆಸದೆಂಬದು ಸಿದ್ಧಾಂತ. ಅಲ್ಲದೆ ಸಂಸ್ಥಾನದಲ್ಲಿನ ದಬ್ಬಾಳಿಕೆ, ಕೊಲೆ, ಸುಲಿಗೆ, ಛಲನೆಯೂ ಇನ್ನು ಮುಂದೆ ಹೀಗೆಯೆ ಅನಿರ್ಬಂಧ ಸಾಗದು. ಈ ಮಾತನ್ನು ನೆನೆದು ನಿಜಾಮ ಪ್ರಭುಗಳು ತಮ್ಮ ಕರ್ತವ್ಯವನ್ನು ತಿಳಿದುಕೊಂಡು ಪ್ರಜೆಗಳಿಗೆ ಹೊಣೆಗಾರವಾದ ರಾಜ್ಯವನ್ನು ಸ್ಥಾಪಿಸಿಕೊಳ್ಳಲು ಪ್ರವೃತ್ತರಾಗಬೇಕು. ಅದರಿಂದ ಅವರಿಗೂ ಹಿತ ಅವರ ಸಂಸ್ಥಾನಕ್ಕೂ ಪ್ರಜೆಗಳಿಗೂ ಹಿತ. ಇಲ್ಲದಿದ್ದರೆ ಸಂಸ್ಥಾನದಲ್ಲಿ ಶಾಂತಿಯೆಂದೂ ನೆಲೆಸದು.

ಹಿಂದುಸ್ತಾನ ಪಾಕಿಸ್ತಾನ ಮೈತ್ರಿಕ್ಯ

ಸಾವಿರಾರು ವರ್ಷಗಳಿಂದ ಅಖಂಡವಾಗಿದ್ದ ಹಿಂದುಸ್ತಾನವಿಂದು ಖಂಡವಾಗಿ ಹಿಂದುಸ್ತಾನ ಪಾಕಿಸ್ತಾನವೆಂಬ ಎರಡು ತುಂಡುಗಳಾಗಿರುವದಷ್ಟೆ. ಹೀಗೆ ಒಂದರಲ್ಲಿ ಎರಡು ಹೋಳುಗಳಾಗಿದ್ದರೂ ಅವೆರಡೂ ಹೋಳುಗಳು ಪರಸ್ಪರರ ಶಾಂತಿ, ಸೌಹಾರ್ದ, ಸ್ನೇಹಭಾವನೆಗಳಿಂದ ಕೂಡಿಕೊಂಡು ಪರಸ್ಪರರ ಉನ್ನತಿಯನ್ನು ಸಾಧಿಸುವದು ಶಕ್ಯವಿದೆ. ಆದರೆ ಪುಂಡಾಟಿಕೆಯಿಂದ ಉದ್ದೇಶ ಬೇಗ ಸಫಲವಾಗುವದೆಂಬ ಭ್ರಮೆಯಿಂದಲೋ ಏನೋ ಪಾಕಿಸ್ತಾನವಾದಿಗಳು ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಅದಕ್ಕೆ ಅವಕಾಶ ಕೊಟ್ಟರು. ತತ್ಪರಿಣಾಮವಾಗಿ ಭೀಕರ ಹತ್ಯಾಕಾಂಡ ಪಾಕಿಸ್ತಾನದಲ್ಲಿ ನಡೆಯಿತು. ತತ್ಪ್ರತೀಕಾರವೂ ಹಿಂದುಸ್ತಾನದ ಕೆಲ ಭಾಗಗಳಲ್ಲಿ ಆಯಿತು. ಹೀಗೆಯೆ ಇದು ನಡೆದು ವಾದರೆಗತಿ ಬೆನ್ನಾಗಾಗಲಾರದೆಂಬ ಸುಬುದ್ಧಿ ಹುಟ್ಟಿದ್ದರಿಂದಲೊ ಏನೋ ಎರಡೂ ಸರಕಾರಗಳು ಪರಸ್ಪರ ವಿಚಾರವಿನಿಮಯ ಮಾಡಿ ಅನೇಕ ವಿಷಯಗಳಲ್ಲಿ ಈಗ ಮೈಕ್ಯಕ್ಕೆ ಬಂದಿರುವವೆಂದು ತಿಳಿಯುತ್ತದೆ. ಹಿಂದುಸ್ತಾನದ ಗೃಹಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಹಿರಿಯೋಲಗದಲ್ಲಿ ಈ ಸಂಬಂಧದಲ್ಲಿ ಹೇಳಿಕೆಯನ್ನು ಕೊಡುತ್ತ ಮಹತ್ವದ ಸಮಸ್ಯೆಗಳಲ್ಲಿ ಮೈಕ್ಯವಾಗಿದೆ; ಯಾರ ಮಧ್ಯಸ್ಥಿಕೆಯೂ ಅವಶ್ಯವಿಲ್ಲ ಎಂದು ಸಾರಿರುವರು. ಇದರಿಂದ ಎರಡೂ ಭಾಗಗಳಲ್ಲಿನ ಜನರು ಸಂತೋಷದ ಉಸಿರನ್ನು ಬಿಡಬಹುದಾಗಿದೆ. ಎರಡೂ ಸರಕಾರಗಳ ಸಾಲ ಹೊಣೆಗಾರಿಕೆಗಳನ್ನು ಸರಿಪಡಿಸಿಕೊಳ್ಳುವದು, ನಿರಾಶ್ರಿತರ ಸಮಸ್ಯೆಯನ್ನು ಬಿಡಿಸುವದು, ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವದು ಮೊದಲಾದ ವಿಷಯಗಳಲ್ಲಿ ಎರಡೂ ರಾಷ್ಟ್ರಗಳು ಕೂಡಿಕೊಂಡು ಹೋಗುವದು ಅವಶ್ಯವಾಗಿದೆ ಎಂದು ಬೇರೆ ಹೇಳಬೇಕಿಲ್ಲ.

ಕೃತಿಯಲ್ಲಿ ಇಳಿಯಲಿ

[illegible]

ಹಿಂದುಸ್ತಾನದ ವಿದೇಶ ನೀತಿ

ಹಿಂದುಸ್ತಾನದ ವಿದೇಶ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು [illegible]

ದೇಶಾದ್ಯಂತವೂ

ಆಹಾರ ಧಾನ್ಯ ನಿಯಂತ್ರಣ ಸಡಿಲಿತು!

ಮುಂಬಯಿ ಪ್ರಾಂತದಲ್ಲಿ ಸಂಪೂರ್ಣ ನಿಯಂತ್ರಣತ್ಯಾಗ— ಕೇಂದ್ರ ಸರಕಾರದ ಪ್ರಕಟನೆ— ಶಾಸನ ಸಭೆಯಲ್ಲಿ ಚರ್ಚೆ

★ ಹಿಂದುಸ್ತಾನ ಸರಕಾರದವರು ತಾ ೧೦ ಕ್ಕೆ ಒಂದು ಸಾರ್ವಜನಿಕ ಪ್ರಕಟಣೆಯ ಮೂಲಕ ಹಾಗು ಶಾಸನ ಸಭೆಯಲ್ಲಿ ಹೇಳಿಕೆಯ ಮೂಲಕ ಆಹಾರ ನಿಯಂತ್ರಣ ಸಂಬಂಧದಲ್ಲಿ ತಮ್ಮ ಹೊಸ ಧೋರಣವನ್ನು ಪ್ರಸಿದ್ಧಗೊಳಿಸಿದರು. ಇದರ ಪರಿಣಾಮವಾಗಿ ಆಹಾರ ಧಾನ್ಯಗಳ ಮೇಲಿನ ಎಲ್ಲ ನಿಯಂತ್ರಣಗಳೂ ಸೀದಾ ಪದ್ಧತಿಯೂ ಕ್ರಮಕ್ರಮೇಣ ರದ್ದುಗೊಳಿಸಲ್ಪಡುವವು. ಅರ್ಥಾತ್ ನಿಯಂತ್ರಣ ಮತ್ತು ಸೀದಾ ಪದ್ಧತಿಯನ್ನು ವಿಸ್ತರಿಸುವ ಈ ವರೆಗಿನ ಧೋರಣವನ್ನು ಬಿಟ್ಟುಕೊಟ್ಟು ತದ್ವಿರುದ್ಧವಾಗಿ ಅದನ್ನು ಸಂಕುಚಿತಗೊಳಿಸಿ ಪೂರ್ಣ ರದ್ದುಗೊಳಿಸುವ ಧೋರಣವನ್ನು ಸರಕಾರ ಕೈಕೊಂಡಿದೆ.

★ ಹಿಂದುಸ್ತಾನ ಸರಕಾರದ ಈ ಧೋರಣವನ್ನು ಅನುಸರಿಸಿ ಅನೇಕ ಪ್ರಾಂತಗಳು ತಾ ೧೦ ಕ್ಕೇ ಕ್ರಮ ಕೈಕೊಂಡಿವೆ. ಮುಂಬಯಿ ಸರಕಾರದವರು ಬಹಳ ಮುಂದೆ ಹೋಗಿ ಬೃಹತ್ತರ ಮುಂಬಯಿ, ಪುಣೆ, ಅಹಮದಾಬಾದ ಮತ್ತು ಸೊಲ್ಲಾಪುರ ನಗರಗಳನ್ನು ಹೊರತು ಉಳಿದ ಇಡಿ ಪ್ರಾಂತದಲ್ಲಿ ಆಹಾರ ಧಾನ್ಯ, ಬೇಳೆಕಾಳು ಮೊದಲಾದವುಗಳ ಮೇಲಿನ ಸಾಗಾಟ ಮತ್ತು ಬೆಲೆ ನಿಯಂತ್ರಣಗಳನ್ನೂ ಶಾಸನ ಬದ್ಧ ಸೀದಾ ಪದ್ಧತಿಯನ್ನೂ ಜನೇವರಿ ೧ರಿಂದ ರದ್ದುಗೊಳಿಸಿದ್ದಾರೆ.

● ಈ ಕ್ರಮದಿಂದ ಬಚ್ಚಿಟ್ಟ ಧಾನ್ಯಗಳು ಹೊರಗೆ ಬಂದು ಬೆಲೆಗಳು ಒಂದು ಮಟ್ಟಕ್ಕೆ ಬಂದು ನಿಲ್ಲಬಹುದೆಂದು ಆಶಿಸಲಾಗಿದೆ. ಆದರೆ ಸಂಗ್ರಹ ಮತ್ತು ಲಾಭಬಡಕತನದಿಂದ ಸಾರ್ವಜನಿಕರಿಗೆ ತೊಂದರೆಯುಂಟಾದರೆ ನಿಯಂತ್ರಣಗಳನ್ನು ಇನ್ನಷ್ಟು ಕಠೋರ ರೀತಿಯಿಂದ ಜಾರಿಗೆ ತರಲು ಹಿಂದೆ ಮುಂದೆ ನೋಡಲಿಕ್ಕಿಲ್ಲೆಂದು ಎಲ್ಲ ಸರಕಾರಗಳೂ ಎಚ್ಚರಿಸಿವೆ.

ಕೇಂದ್ರ ಸರಕಾರದ ಪ್ರಕಟನೆ

ಹಿಂದುಸ್ತಾನ ಸರಕಾರ ಈ ಸಂಬಂಧದಲ್ಲಿ ಹೊರಡಿಸಿದ ಪ್ರಕಟನೆಯನ್ನು ಇಂತು ಸಂಗ್ರಹಿಸಬಹುದು:

ಯುದ್ಧಕಾಲದಲ್ಲಿ ಉದ್ಭೂತವಾದ ಪರಿಸ್ಥಿತಿಯನ್ನು ಎದುರಿಸಲು ೧೯೪೩ ಮಧ್ಯದಲ್ಲಿ ಸಣ್ಣದಾಗಿ ಪ್ರಾರಂಭಿಸಲ್ಪಟ್ಟ ಸೀದಾ ಪದ್ಧತಿ ೧೯೪೩ ರಲ್ಲಿ ಆಹಾರ ಧಾನ್ಯ ಧೋರಣ ಸಮಿತಿಯ ಸೂಚನೆಗಳಂತೆ ವಿಸ್ತರಿಸಲ್ಪಟ್ಟಿತು. ಮುಂದೆ ಬರಗಾಲ ವಿಚಾರಣಾ ಸಮಿತಿ ಈ ಪದ್ಧತಿಗೇ ಅಂಟಿಕೊಳ್ಳಬೇಕೆಂದು ಸೂಚಿಸಿತು. ೧೯೪೫ ರಲ್ಲಿ ಯುದ್ಧ ಮುಗಿದು ಹೊರಗಿನಿಂದ ಆಹಾರ ಧಾನ್ಯ ಬರ್‍ರುವದು ಹೆಚ್ಚಾದರೂ ಎರಡು ವರ್ಷಗಳಲ್ಲಿ ಬೆಳೆ ಕೆಟ್ಟು ಹುಟ್ಟುವಳಿ ಕಡಿಮೆಯಾದುದರಿಂದ ನಿಯಂತ್ರಣವನ್ನು ಸಡಿಲಿಸುವ ಇಲ್ಲವೆ ರದ್ದುಗೊಳಿಸುವ ಬದಲು ಬಿಗಿಗೊಳಿಸುವ ಮತ್ತು ವಿಸ್ತರಿಸುವ ಕಾಲ ಬಂತು. ಆಹಾರೋತ್ಪಾದನೆಯ ಅಂಕೆ ಸಂಖ್ಯೆಗಳಿಂದ ಇದು ಸ್ಪಷ್ಟವಾಗಬಹುದು.

ಲ್ಲವಾದರೂ ಸಲಹೆಗಳು ಬಂದಿವೆ. ಆದರೆ ಅದರ ಸದಸ್ಯರಲ್ಲಿ ಐಕಮತ್ಯ ಕಂಡು ಬರಲಿಲ್ಲ. ಈ ಸಲಹೆಗಳ ಬಗ್ಗೆ ಪ್ರಾಂತಿಕ ಮುಖ್ಯ ಮಂತ್ರಿಗಳ ಮತ್ತು ಸಂಸ್ಥಾನಿಕ ಪ್ರತಿನಿಧಿಗಳ ಪರಿಷತ್ತು ವಿಚಾರ ನಡೆಸಿದಾಗ ಅಲ್ಲಿಯೂ ಭಿನ್ನ ಭಿನ್ನ ಅಭಿಪ್ರಾಯಗಳು ವ್ಯಕ್ತವಾದವು. ಕೊನೆಗೆ ಅತ್ಯಂತ ಲಕ್ಷ್ಯಪೂರ್ವಕ ವಿಚಾರ ಮಾಡಿ ಸ್ವಲ್ಪ ಅರೆಮನಸ್ಸಿನಿಂದಲೇ ಹಿಂದುಸ್ತಾನ ಸರಕಾರ ಕೆಳಗಿನಂತೆ ನಿರ್ಣಯಿಸಿತು:

ಕ್ರಮೇಣ ವಿನಿಯಂತ್ರಣ

ಸದ್ಯದ ಆಹಾರ ನೀತಿಯಲ್ಲಿ ಬದಲು ಮಾಡಿ ಸೋಪಾನ ಕ್ರಮದಂತೆ ನಿಯಂತ್ರಣಗಳನ್ನು ತೆಗೆದು ಹಾಕುವ ಧೋರಣವನ್ನು ಸರಕಾರ ಅನುಸರಿಸಬೇಕು. ಇದರ ಮೇರೆಗೆ ಪ್ರಾಂತ ಮತ್ತು ಸಂಸ್ಥಾನ ಸರಕಾರಗಳಿಗೆ ಅವು ವಹಿಸಿಕೊಂಡ ಭಾರವನ್ನು ಕ್ರಮೇಣ ಇಳಿಸುತ್ತ, ಸೀದಾ ಮತ್ತು ನಿಯಂತ್ರಿತ ಹಂಚಿಕೆಯ ವಿಸ್ತರಣದ ಈಗಿನ ಧೋರಣವನ್ನು ತಿರುಗಿಸಿ ಅವುಗಳ ಸಂಕೋಚನ ಮತ್ತು ಆದಷ್ಟು ಬೇಗನೆ ಪೂರ್ಣ ನಿಯಂತ್ರಣತ್ಯಾಗ ಮಾಡುವ ವ್ಯವಸ್ಥೆ ಮಾಡಿಕೊಳ್ಳಿರೆಂದು ತಿಳಿಸಲಾಗಿದೆ.

ವಿದೇಶಗಳಿಂದ ಆಹಾರ ತರಿಸುವ ಕಾರ್ಯವನ್ನು ಕೇಂದ್ರ ಸರಕಾರವೇ ನೋಡಿಕೊಳ್ಳುವದು. ಸದ್ಯದ ಮೂಲ ವ್ಯವಸ್ಥೆಯೂ ಹಾಗೆಯೆ ಉಳಿಯುವದು. ಹೊರಗಿಂದ ತರಿಸಿದ ಧಾನ್ಯಗಳಲ್ಲಿ ೫ ರಿಂದ ೧೦ ಲಕ್ಷ ಟನ್ ವರೆಗೆ ಕಠಿಣ ಪ್ರಸಂಗವನ್ನೆದುರಿಸುವ ಸಲುವಾಗಿ ಕೇಂದ್ರಸರಕಾರ ಕಾದಿಡುವದು. ಸಮೃದ್ಧ ಪ್ರಾಂತ ಸಂಸ್ಥಾನಗಳಿಗೆ ಕನಿಷ್ಠ ನಿರ್ಯಾತ ಪ್ರಮಾಣವನ್ನು ತಿಳಿಸಲಾಗಿದ್ದು ೧೯೪೮ ರ ಮಟ್ಟಿಗೆ ಕನಿಷ್ಠ ಅಷ್ಟು ಧಾನ್ಯಗಳನ್ನು ಎತ್ತಿ ಕಳಿಸುವ ಹೊಣೆ ಹೊರಬೇಕೆಂದು ಕೇಳಿಕೊಳ್ಳಲಾಗಿದೆ. ಅಂತೆಯೆ ಕೊರತೆಯ ಘಟಕಗಳಿಗೂ ಅವುಗಳಿಗೆ ದೊರೆಯಬಹುದಾದ ಪರಮಾವಧಿ ಹೊರಗಿನ ಧಾನ್ಯವಿಷ್ಟೆಂದು ತಿಳಿಸಿದ್ದು ಅದಕ್ಕಿಂತ ಹೆಚ್ಚು ಬೇಡದೆ ಇದ್ದುದ್ದರಲ್ಲಿಯೇ ಸಾಗಿಸಿಕೊಂಡು ಹೋಗುವಂತೆ ತಿಳಿಸಲಾಗಿದೆ.

ಸದ್ಯಕ್ಕೆ ಸೀದಾ ಕ್ಷೇತ್ರಗಳಲ್ಲಿ ಎತ್ತುವಳಿಯಿಂದ ಹಂಚಲ್ಪಡುವ ಇತರ ಚಿಲ್ಲರೆ ಧಾನ್ಯಗಳು. ಜವೆಗೋದಿ ಮತ್ತು ಕಡಲೆಯ ಮೇಲಿನ ನಿಯಂತ್ರಣ ಇರಬೇಕೋ ಇರಬಾರದೋ ಪ್ರಾಂತಗಳು ಮತ್ತು ಸಂಸ್ಥಾನಗಳು ತಾವೇ ನಿರ್ಧರಿಸಿಕೊಳ್ಳಬೇಕು. ಪ್ರಾಂತಗಳೂ ಸಂಸ್ಥಾನಗಳೂ ಎತ್ತುವಳಿಗೆ ಇಷ್ಟವೆನಿಸಿದ ಮಾರ್ಗ ಅನುಸರಿಸಬಹುದು. ಕಡಲೆ ಬಿಟ್ಟು ಬೇರೆ ದ್ವಿದಲ ಧಾನ್ಯಗಳ ಮೇಲಿನ ಮತ್ತು ಸಕ್ಕರೆ ಬೆಲ್ಲಗಳ ಮೇಲಿನ ನಿಯಂತ್ರಣಗಳು ಈಗಾಗಲೆ ಹೋಗಿವೆ.

ಕಾರ್ಯಾರಂಭ

ಹೊಸ ಆಹಾರ ಧೋರಣವಿದು. ಇದನ್ನು ಆಯಾ ಪ್ರಾಂತಗಳೂ ಸಂಸ್ಥಾನಗಳೂ ತಂತಮ್ಮಲ್ಲಿಯ ಭಿನ್ನಭಿನ್ನ ಸ್ಥಿತಿಗತಿಗಳನ್ನು ಎಣಿಕೆಗೆ ತೆಗೆದುಕೊಂಡು ಆಚರಣೆಗೆ ತರಬೇಕು. ಆದ್ದರಿಂದ ಬೇರೆ ಬೇರೆ ಬಗೆಯಾಗಿ ಆಚರಣೆಗೆ ಬರಬಹುದು. ಆದುದರಿಂದ ಪ್ರಾಂತಗಳೂ ಸಂಸ್ಥಾನಗಳೂ ತಂತಮ್ಮ ಆಹಾರ ಧೋರಣವನ್ನು ಡಿಸೆಂಬರ ೧೦ ನೆ ದಿನವೇ ಸಾರಬೇಕೆಂದು ಕೇಳಿಕೊಳ್ಳಲಾಗಿದೆ.

ಕೊನೆಯಲ್ಲಿ ಸರಕಾರ ಈ ಹೊಸ ಧೋರಣದಲ್ಲಿ ಸ್ವಲ್ಪಮಟ್ಟಿಗೆ ಸಾಹಸವಿದೆಯೆಂದೊಪ್ಪಿಕೊಂಡಿದೆ. ಇದರಿಂದ ಕಳ್ಳಪೇಟೆ, ಲಾಭಬಡಕತನ, ಲಂಚಗುಳಿತನಗಳು ಅಳಿಯಬಹುದೆಂದು ಆಶಿಸಲಾಗಿದೆ. ಈ ಆಸೆ ಫಲಿಸಿದರೆ ದೇಶದಲ್ಲಿ ಶಾಂತಿ ಸಮೃದ್ಧಿ ಸುಖಗಳು ನೆಲೆಯೂರುವವು. ಒಂದು ವೇಳೆ ಈ ಧೋರಣದಿಂದ ಪರಿಸ್ಥಿತಿ ಹದಗೆಟ್ಟರೆ, ಆಗ ಉಗ್ರ ನಿಯಂತ್ರಣಗಳನ್ನು ಮತ್ತೆ ಹೇರಲು ಹಿಂದೆ ಮುಂದೆ ನೋಡಲಿಕ್ಕಿಲ್ಲ.

ಆಹಾರೋತ್ಪಾದನೆ: (ಅಂಕಿಗಳು ಲಕ್ಷ ಟನ್ನುಗಳನ್ನು ತೋರುತ್ತವೆ)

ವರ್ಷ	ಅಕ್ಕಿ	ಗೋದಿ	ಜೋಳ/ಸಜ್ಜೆ	ಒಟ್ಟು	ಹಿಂದಿನ ೫ ವರ್ಷಗಳ ಸರಾಸರಿಯೊಡನೆ ಅಂತರ
೧೯೪೩—೪೪	೨೮೨	೧೦೬	೧೧೨	೫೦೦	—
೧೯೪೪—೪೫	೩೦೧	೧೦೮	೧೦೯	೫೧೮	೧೮
೧೯೪೫—೪೬	೨೮೪	೯೨	೮೮	೪೬೪	—೩೬
೧೯೪೬—೪೭	೩೦೨	೮೧	೮೫	೪೬೮	—೩೨

ಈ ಕೊರತೆಯ ಮೂಲಕ ಯುದ್ಧ ಕಾಲಕ್ಕಿಂತ ಯುದ್ಧೋತ್ತರ ಕಾಲದಲ್ಲಿ ಆಹಾರದ ಆಡಳಿತ ಕಠಿಣ ಹೋಗಿದೆ.

ಕಷ್ಟ ನಷ್ಟ

ಎತ್ತುವಳಿ, ಸೀದಾಪದ್ಧತಿ, ಆಹಾರ ಧಾನ್ಯಗಳ ಆಯಾತಗಳಲ್ಲಿ ಗಂಭೀರ ಸಮಸ್ಯೆಗಳು ತಲೆದೋರಿದವು. ಒಕ್ಕಲಿಗರು ತಮಗೆ ಬರುವ ಬೆಲೆ ಸಾಲದೆಂದು ಗೊಣಗುಟ್ಟಿದರು. ಎತ್ತುವಳಿಯಿಂದ ಕಡಿಮೆ ಕಡಿಮೆ ಧಾನ್ಯ ಹೊರಡಹತ್ತಿತು. ವಿದೇಶದಿಂದ ಬರುವ ಧಾನ್ಯಕ್ಕೆ ವಿಪರೀತ ವೆಚ್ಚ ಬಂದು ವಿದೇಶ ವಿನಿಮಯಕ್ಕೆ ಸಿಗುವ ಹಣ ಬರಿದಾದರೂ ಅಲ್ಲಿಂದ ಬಂದ ಪೂರೈಕೆಗಳಿಂದ ೧೨ ಔನ್ಸಿನ ಅಲ್ಪ ಸೀದಾವನ್ನು ಕೂಡ ಕಾಯ್ದುಕೊಳ್ಳಲು ಬಾರದೆ ಸೀದಾ ಪದ್ಧತಿಯೇ ಕುಸಿದು ಬೀಳುವ ಭಯವುಂಟಾಯಿತು. ಗಿರಾಕಿಗಳು ಧಾನ್ಯ ಕೆಟ್ಟಿದೆ, ಪ್ರಮಾಣ ಅಸ್ಥಿರವಾಗಿದೆಯೆಂದು ದೂರಿದರು. ವ್ಯಾಪಾರಿಗಳು ತಮ್ಮ ವ್ಯಾಪಾರಕ್ಕೆ ಧಕ್ಕೆ ತಂದ ನಿಯಂತ್ರಣಗಳನ್ನು ಶಪಿಸುತ್ತಾರೆ. ಎಲ್ಲೆಡೆ ಅಸಂತೋಷ ಹರಡಿದೆ.

೧೯೪೭ ಜುಲೈಯಲ್ಲಿ ಸೇರಿದ ಕೇಂದ್ರ ಸರಕಾರದ ಆಹಾರ ಮಂತ್ರಿ ಮತ್ತು ಪ್ರಾಂತಿಕ ಮುಖ್ಯ ಮಂತ್ರಿ, ಆಹಾರ ಮಂತ್ರಿಗಳ ಪರಿಷತ್ತಿನಲ್ಲಿ ಈ ಸಮಸ್ಯೆ ಚರ್ಚಿಸಲ್ಪಟ್ಟು ಸರ್ ಪುರುಷೋತ್ತಮದಾಸ ಠಾಕೂರದಾಸರ ಅಧ್ಯಕ್ಷತೆಯಲ್ಲಿ, ತಾತ್ಕಾಲಿಕ ಮತ್ತು ದೀರ್ಘಕಾಲೀನ ಆಹಾರ ಧೋರಣದ ಬಗ್ಗೆ ಸರಕಾರಕ್ಕೆ ಸಲಹೆ ಕೊಡಲು ಅಧಿಕಾರಿ ಮತ್ತು ಅಧಿಕಾರೇತರ ಸಮಿತಿಯೊಂದು ನೇಮಿಸಲ್ಪಟ್ಟಿತು. ಅದರ ವರದಿ ಇನ್ನೂ ಬಂದಿ

ಧಾರಣೆ

ಯಾವ ದರದಿಂದ ಧಾನ್ಯವನ್ನು ಎತ್ತಬೇಕ ಮತ್ತು ಯಾವ ದರದಿಂದ ಮಾರಬೇಕೆಂಬುದನ್ನು ತಂತಮ್ಮ ಸ್ಥಿತಿಗತಿ ನೋಡಿ ಪ್ರಾಂತಗಳೆ ನಿರ್ಧರಿಸಿಕೊಳ್ಳಬೇಕು. ಆದರೆ ಪ್ರಾಂತಿಕ ಸರಕಾರಗಳು ತಾವು ಗೊತ್ತುಪಡಿಸಿದ ದರಗಳಿಂದ ಜೀವನದ ವೆಚ್ಚ ಮಿತಿಮೀರಿ ಏರದಂತೆ ನೋಡಿಕೊಳ್ಳಬೇಕು. ಸಮೃದ್ಧ ಪ್ರಾಂತಗಳಿಂದ ಕೊರತೆ ಭಾಗಗಳಿಗೆ ಸಹಾಯ ಹೆಚ್ಚಾಗುವಂತೆ ಮಾಡಲು ಎತ್ತುವಳಿಯಾದ ಧಾನ್ಯಕ್ಕೆ ಮಣಕ್ಕೆ ಎಂಟಾಣೆ ಮತ್ತು ನಿರ್ಯಾತಮಾಡಿದ್ದಕ್ಕೆ ಮಣಕ್ಕೆ ಎಂಟಾಣೆಯಂತೆ ಕೇಂದ್ರ ಸರಕಾರ ಬೋನಸ್ಸು ಕೊಡುವದು.

ಪ್ರಾಂತ ಅಥವಾ ಸಂಸ್ಥಾನಗಳಲ್ಲಿ ವಿನಿಯಂತ್ರಿತ ಆಹಾರ ಧಾನ್ಯಗಳ ಸಾಗಾಟ ಮತ್ತು ನಿಯಂತ್ರಿತ ಧಾನ್ಯಗಳ ಹಂಚಿಕೆ ಹಗುರಾ.ಬೇಕೆಂದು ಆಹಾರ ಧಾನ್ಯಗಳ ಖಾಸಗಿ ಸಾಗಾಟಕ್ಕೆ (ರೇಲ್ವೆಗಳಲ್ಲಿ) ಹೆಚ್ಚಿನ ಪ್ರಶಸ್ತಿ ಕೊಡಲಾಗುವದು.

ಎತ್ತುವಳಿ ನಿಯಂತ್ರಿತ ಹಂಚಿಕೆ ಮತ್ತು ಸೀದಾ ಇವು ಈ ಕೆಳಗಿನ ಧಾನ್ಯಗಳಿಗಷ್ಟೆ ಅನ್ವಯಿಸಬೇಕು: ಅಕ್ಕಿ, ಭತ್ತ; ಗೋದಿ, ಮೈದಾ ಮತ್ತು ಗೋದಿ ಹಿಟ್ಟು; ಜೋಳ; ಸಜ್ಜೆ; ಮತ್ತು

ಶಾಸನ ಸಭೆಯಲ್ಲಿ

ಆಹಾರ ಮಂತ್ರಿ ಡಾ। ರಾಜೇಂದ್ರ ಪ್ರಸಾದರು ಕೇಂದ್ರ ಶಾಸನ ಸಭೆಯಲ್ಲಿ ಹೊಸ ಆಹಾರ ಧೋರಣವನ್ನು ತಾ. ೧೦ ಕ್ಕೆ ಘೋಷಣೆ ಮಾಡುತ್ತ ಅದರಿಂದ ಕೊರತೆ ಪ್ರದೇಶಗಳಲ್ಲಿಯ ಬೆಲೆ ಒಂದು ಮಟ್ಟಕ್ಕಿಳಿದು ಪ್ರಚುಲಿತ ದೇಶಗಳಲ್ಲಿ ಅದೇ ಮಟ್ಟಕ್ಕೇರುವವೆಂದು ಆಶಿಸಿದರು. ಎಲ್ಲ ಪಕ್ಷಗಳ ಸಹಕಾರದಿಂದ ಈ ಧೋರಣ ಯಶಸ್ವಿಯಾಗುವದೆಂಬ ವಿಶ್ವಾಸವನ್ನೂ ಅವರು ವ್ಯಕ್ತಗೊಳಿಸಿದರು.

ಡಾ. ರಾಜೇಂದ್ರರು ಸ್ವಲ್ಪದರಲ್ಲಿ ಸೀದಾ ಪದ್ಧತಿಯ ಇತಿಹಾಸವನ್ನು ರೇಖಿಸುತ್ತ ೧೯೪೪ ರಲ್ಲಿ ಪ್ರೌಢನಿಗೆ ೧ ಪೌಂಡು ಪ್ರಮಾಣದಿಂದ ೨೬೦ ಲಕ್ಷ ಜನರನ್ನು ವ್ಯಾಪಿಸಿ ಪ್ರಾರಂಭವಾದ ಸೀದಾ ಪದ್ಧತಿ ೧೯೪೭ ರಲ್ಲಿ ವಿಭಜನೆಗೆ ಮೊದಲು ೧೬೨೦ ಲಕ್ಷ ಮತ್ತು ಈಗ ೧೪೮೦ ಲಕ್ಷ ಜನರನ್ನು ಪರಿವೇಷ್ಟಿಸಿ ತಲಾ ೧೨ ಔನ್ಸಿನ ಇಳಿಸಿದ ಸೀದಾವನ್ನು ಕೂಡ ಕಾಯ್ದುಕೊಳ್ಳಲಾರದ ಅವಸ್ಥೆಗೆ ಬಂದುದರ ಕಾರಣಗಳನ್ನು ಲ್ಲೇಖಿಸಿದರು. ಅನಾವೃಷ್ಟಿಯಿಂದ ಬೆಳೆ ಕೆಟ್ಟದ್ದು, ದೇಶದಲ್ಲಿ ರೈತರಿಂದ ಧಾನ್ಯ ಎತ್ತುವದು ಕಠಿಣವಾಗುತ್ತ ಹೋದುದು, ಧಾನ್ಯದ ಬೆಲೆ ಏರಿಸಬೇಕೆಂಬ ಕೂಗೆದ್ದುದು, ಇವು ದೇಶದೊಳಗೆ ಧಾನ್ಯ ಸಂಗ್ರಹದ ಅಡಚಣೆಗಳಾದರೆ, ಎಲ್ಲ ದೇಶಗಳಲ್ಲಿಯೂ ಆಹಾರದ ಕೊರತೆಯಿಂದ ಹೊರಗಿನಿಂದ ತರಿಸಿದ ಧಾನ್ಯ ಪ್ರಮಾಣ ನಾವು ಬೇಡಿದ್ದಕ್ಕಿಂತ ಅರ್ಧದಷ್ಟೂ ಆಗಲಿಲ್ಲ ಅದಕ್ಕೂ ವಿಪರೀತ ಬೆಲೆ. ೧೯೪೬ ಪ್ರಾರಂಭದಲ್ಲಿ ಬಂಗಾಲಿ ಮಣಕ್ಕೆ ೧೦ ರೂಪಾಯಿಯಂತೆ ಸಿಗುತ್ತಿದ್ದ ಬ್ರಹ್ಮೀ ಅಕ್ಕಿಗೆ ಈಗ ೨೧ ರೂಪಾಯಿ ಬೀಳುತ್ತಿದೆ.

ಹೀಗೆ ದೇಶದಲ್ಲಿದ್ದ ಧಾರಣೆಗೂ ಆಯಾತದ ಧಾರಣೆಗೂ ಇದ್ದ ಅಂತರವನ್ನು ತುಂಬಲು ಸರಕಾರ ಧನ ಸಹಾಯಮಾಡಬೇಕಾಯಿತು. ೧೯೪೬—೪೭ ರಲ್ಲಿ ಇದರಿಂದ ಸರಕಾರಕ್ಕೆ ೨೦೫೯ ಲಕ್ಷ ವೆಚ್ಚ ಬಂತು. ಈ ವರ್ಷ ೨೨೫೦ ಲಕ್ಷ ವೆಚ್ಚ ಬರಬಹುದು. ಹೊರಗಿಂದ ಬಂದ ಧಾನ್ಯಗಳಿಗೆ ಹಣ ತೆರಲು ವಿನಿಮಯ ದೊರಕಿಸುವ ಅಡಚಣೆಯೂ ಹೆಚ್ಚಿತು. ವರ್ಷಕ್ಕೆ ೧೦೦ ಕೋಟಿ ಬೆಲೆಯ ಧಾನ್ಯಗಳನ್ನು ಹೊರಗಿಂದ ಎಷ್ಟು ದಿನ ತರಿಸಬಂದೀತ.? ಇದೆಲ್ಲದರ ಜತೆಗೆ ಲಂಚಗುಳಿತನ, ಸಂಗ್ರಹಪ್ರವೃತ್ತಿ ಹೆಚ್ಚಿತು. ಮಹಾತ್ಮಾ ಗಾಂಧಿಯವರೂ ನಿಯಂತ್ರಣದ ವಿರುದ್ಧ ಪ್ರಬಲ ಅಭಿಪ್ರಾಯ ವ್ಯಕ್ತಗೊಳಿಸಿದ ಕಾರಣ ನಿಯಂತ್ರಣಗಳನ್ನು ನಡೆಸಿಕೊಂಡು ಹೋಗುವದು ಇನ್ನಷ್ಟು ಕಠಿಣ ಹೋಗಿದೆಯೆಂದು ಮಂತ್ರಿಗಳು ಹೇಳಿದರು.

ಪ್ರತಿಕ್ರಿಯೆಗಳು

ನಿಯಂತ್ರಣತ್ಯಾಗದ ಈ ಘೋಷಣೆಗೆ ಕೇಂದ್ರ ಶಾಸನ ಸಭೆಯಲ್ಲಿ ದೊರೆತ ಸ್ವಾಗತ ಮಿಶ್ರಿತವಾಗಿತ್ತು. ಅನೇಕರು ಅನುಕೂಲಾಭಿಪ್ರಾಯಗಳನ್ನು ವ್ಯಕ್ತಗೊಳಿಸಿದರೂ ಪಂ. ಬಾಲಕೃಷ್ಣ ಶರ್ಮಾ, ಪಂ. ಕುಂಜರು, ಅನಂತಶಯನ ಅಯ್ಯಂಗಾರ, ಹುಸೇನ ಇಮಾಮ ಮೊದಲಾದವರು ಅದನ್ನು ತೀವ್ರವಾಗಿ ಟೀಕಿಸಿದರು. ಬಾಲಕೃಷ್ಣ ಶರ್ಮಾರು ಇದು "ಅಧೋಗಾಮಿ" ಧೋರಣವೆಂದು ಹೇಳಿ ಬಂಗಾಲ ಬರಗಾಲದಲ್ಲಿ ೩೫ ಲಕ್ಷ ಜನ ಸತ್ತರೂ ವ್ಯಾಪಾರಿಗಳಿಗೆ ಕರುಣೆ ಬಾರದ್ದನ್ನು ಉದಾಹರಿಸಿದರು. ಪಂ. ಕುಂಜರು ಅವರು, ರಾಜೇಂದ್ರರು ಕೊಟ್ಟ ಕಾರಣಗಳು ಮನಕ್ಕೆ ನಾಟುವಂತಿಲ್ಲವೆಂದೂ ಅದು "ಆತ್ಮವಂಚನೆಯೆನ್ನಬಹುದಾದ ಒಣ ಆಶಾವಾದ" ವೆಂದೂ ಹೇಳಿದರು.

ರಾಜೇಂದ್ರ ಬಾಬುಗಳು ಉತ್ತರ ಕೊಟ್ಟು "ನಮ್ಮ ಬುದ್ಧಿಯ ಕಸರತ್ತುಗಳು ಗಾಂಧೀಜಿಯ ಒಳದನಿಯ ಮುಂದೆ ನಿಲ್ಲಲಾರದೆ ಹೋದವು" ಎಂದರು!

ಪ್ರಾಂತಗಳಲ್ಲಿ

● ಮುಂಬಯಿ ಪ್ರಾಂತದಲ್ಲಿ ಮೇಲೆ ಹೇಳಿದಂತೆ ಧಾನ್ಯ ನಿಯಂತ್ರಣ ಕಿತ್ತು ಹಾಕಲ್ಪಟ್ಟಿದೆಯಲ್ಲದೆ ಡಿಸೆಂಬರ ೧೯ ರಿಂದ ಒತ್ತಾಯದ ಲೆವಿ ಹಾಗು ಸರಕಾರಿ ಗುತ್ತಿಗೆಯನ್ನು ತೆಗೆದುಹಾಕಿ ಇಡಿ ಪ್ರಾಂತದಲ್ಲಿಯ ಸಾಗಾಟದ ಮೇಲಿನ ನಿರ್ಬಂಧ ತೆಗೆಯಲ್ಪಟ್ಟಿದೆ.

● ಮದ್ರಾಸ ಸರಕಾರದವರು ಮೂರು ಮೆಟ್ಟಲುಗಳಲ್ಲಿ ವಿನಿಯಂತ್ರಣವನ್ನು ಮಾಡಿ ಮುಗಿಸಲು ನಿರ್ಧರಿಸಿದ್ದಾರೆ. ಮೊದಲು ಬಳ್ಳಾರಿ, ಅನಂತಪುರ, ಕರ್ನೂಲು, ಕಡಪಾ ಜಿಲ್ಲೆಗಳಲ್ಲಿ ಗ್ರಾಮಾಂತರಗಳಲ್ಲಿ ಅಕ್ಕಿ ಹಾಗು ಸಣ್ಣ ಕಾಳುಗಳ ಸೀದಾ ನಿಯಂತ್ರಣಗಳನ್ನು ಕಿತ್ತು ಹಾಕಿ, ಎರಡನೆಯದಾಗಿ ಗೋದಾವರಿ, ಕೃಷ್ಣಾ,

[೧೦ನೇ ಪುಟ ನೋಡಿರಿ]

ಕರ್ಮವೀರ
ಹರಿಜನ ಪುರವಣಿ

ಕೊಡು — ಕೊಳ್ಳು

ಒಬ್ಬ ಸಂಕಟಗ್ರಸ್ತ ಸಿಂಧಿ ಬರೆಯುತ್ತಾನೆ.

"ಈ ಬಿಕ್ಕಟ್ಟಿನ ಕಾಲದಲ್ಲಿ, ನಮ್ಮ ದೇಶ ಬಾಂಧವರಲ್ಲಿ ಸಾವಿರಾರು ಮಂದಿ ತಮ್ಮ ಪಿತೃಕ್ರಮಾಗತ ಮನೆಮಾರುಗಳನ್ನು ಬಿಟ್ಟು ಸಿಂಧ, ಪಂಜಾಬ ಮತ್ತು ಗಡಿನಾಡುಗಳಿಂದ ಬಂದು ಬೀದು ತುಂಬುತ್ತಿರುವಾಗ ಕೆಲ ಹಿಂದುಗಳಲ್ಲಿ ಪ್ರಾಂತೀಯ ಭಾವನೆಯಿರುವುದು ಕಂಡು ಬಂದಿದೆ. ಇಲ್ಲಿಗೆ ಬರುತ್ತಿರುವವರು ಬಹಳ ಕಷ್ಟ ನಷ್ಟಕ್ಕೆ ಗುರಿಯಾದವರು; ಆದುದರಿಂದ ಹಿಂದಿ ಒಕ್ಕೂಟದ ಹಿಂದುಗಳು ನ್ಯಾಯವಾಗಿ ತೋರಬಲ್ಲ ಎಲ್ಲ ಆದರಕ್ಕೂ ಪಾತ್ರರು. ಅವರನ್ನು ಸಾಮಾನ್ಯವಾಗಿ "ಶರಣಾರ್ಥಿಗಳೆಂದು" ಕರೆಯುತ್ತಿದ್ದರೂ ನೀವು ಸರಿಯಾಗಿಯೇ ಅವರನ್ನು "ದುಃಖಿಗಳೆಂದು" ಕರೆದಿರುವಿರಿ. ಜನರು ಸರಕಾರದ ಯತ್ನಕ್ಕೆ ಸರ್ವ ರೀತಿಯಿಂದ ನೆರವಾಗದಿದ್ದರೆ ಯಾವ ಸರಕಾರವೂ ಬಿಡಿಸಲಾರದಷ್ಟು ದೊಡ್ಡ ಸಮಸ್ಯೆಯಾಗಿದೆ ಅವರದು. ಕೆಲ ಮನೆಯೊಡೆಯರು ಮನೆ ಬಾಡಿಗೆ ಹೆಚ್ಚಿಸಿರುವುದನ್ನೂ ಮತ್ತೆ ಕೆಲವರು "ಪಗಡಿ" ಕೇಳುತ್ತಿರುವುದನ್ನೂ ಗಮನಿಸಿದರೆ ವ್ಯಥೆಯಾಗುತ್ತದೆ. ಪ್ರಾಂತೀಯ ಭಾವನೆಯ ಮತ್ತು ಪಗಡಿ ಪದ್ಧತಿಯ ವಿರುದ್ಧ, ಈ ಭಯಂಕರ ಸಂಕಟ ಕಾಲದಲ್ಲಿ, ನೀವು ನಿಮ್ಮ ದನಿಯೆತ್ತಬೇಕೆಂದು ನಾನು ಪ್ರಾರ್ಥಿಸಲೆ? "

ಬರಹಗಾರನೊಡನೆ ನಾನು ಸಹಾನುಭೂತಿ ತೋರುವೆನಾದರೂ ದುಃಖಿಗಳಿಗೆ ನಷ್ಟಕೊಟ್ಟು ತನ್ಮೂಲಕ ಹೊಟ್ಟೆ ಬೆಳೆಸಲಿಚ್ಛಿಸುವ ಲೋಭಿಗಳಾದ ಮನೆಯೊಡೆಯರಿದ್ದಾರೆಂಬುದಕ್ಕೆ ಸಾಕ್ಷಿ ದೊರೆತ ಹೊರತು ಅವನ ಅಭಿಪ್ರಾಯವನ್ನು ಪುರಸ್ಕರಿಸಲಾರೆ. ಆದರೆ ನನ್ನ ಇಲ್ಲವೆ ಬರಹಗಾರನ ಅಪೇಕ್ಷೆಯಿದ್ದಷ್ಟು ದೂರ ಹೋಗಲಾರದಿದ್ದರೂ ತಮಗೇ ತೊಂದರೆಯನ್ನು ತಂದುಕೊಂಡು ದುಃಖಿಗಳ ದುಃಖ ಶಮನ ಮಾಡುವವರೂ ಇದ್ದಾರೆಂದು ನನಗೆ ಸ್ವತಃ ಗೊತ್ತಿದೆ. ಭಾರ ಕಡಿಮೆ ಮಾಡಲು ಉತ್ತಮ ಮಾರ್ಗವೆಂದರೆ, ಈ ಅನಿರೀಕ್ಷಿತ ಹೊಡೆತದಿಂದ ಹೇಗೆ ಲಾಭ ಪಡೆಯಬೇಕೆಂದು ದುಃಖಿಗಳು ಕಲಿಯುವದು. ಅವರು ನಮ್ರತೆಯ ಕಲೆಯನ್ನು ಕಲಿಯಬೇಕು; ಅದಕ್ಕೆ ಉಗ್ರವಾದ ಆತ್ಮಶೋಧ ಬೇಕು; ಇನ್ನೊಬ್ಬರ ದೋಷೋದ್ಘಾಟನೆ ಮಾಡಿ, ಅವರನ್ನು ಕೆಲವೊಮ್ಮೆ ಉಗ್ರವಾಗಿ, ಅನೇಕ ವೇಳೆ, ಅಯುಕ್ತವಾಗಿ, ಒಮ್ಮೊಮ್ಮೆ ಮಾತ್ರ ಯುಕ್ತವಾಗಿ ಟೀಕಿಸುವದರಿಂದ ಅದಾಗದು. ಆತ್ಮಶೋಧ ನಮ್ಮನ್ನು ಉದಾತ್ತಗೊಳಿಸುತ್ತದೆ; ಪರ ಶೋಧ ಅಧೋಗತಿಗೆ ಕಾರಣವಾಗುತ್ತದೆ. ದುಃಖಿಗಳು ಐಕ್ಯಜೀವನದ ಕಲೆ ಮತ್ತು ಗುಣಗಳನ್ನು ಕಲಿಯಬೇಕು; ಅದರಲ್ಲಿ ಸಹಕಾರ ವೃತ್ತವೂ ಸದಾ ಅಗಲವಾಗುತ್ತ ಹೋಗಿ ಅಂತ್ಯದಲ್ಲಿ ಅದು ಇಡೀ ಮಾನವ ಕುಲವನ್ನೇ ಸುತ್ತುವರಿಯುವುದು. ಇದನ್ನು ಅವರು ಮಾಡಿದರೆ ಒಬ್ಬ ದುಃಖಿಯೂ ಏಕಾಕಿಯಾಗಿರಬೇಕಾಗಿಲ್ಲ. ಯಾವ ಪ್ರಾಂತಕ್ಕೆ ಸೇರಿದವರೀಗಲಿ ಅವರೆಲ್ಲರೂ ಒಂದಾಗಿ ಸ್ವಕೀಯ ಹಿತಕ್ಕೆ ಗಮನ ಕೊಡದೆ ಸರ್ವರ ಕ್ಷೇಮ ಚಿಂತನೆ ಮಾಡುವವರಾಗುತ್ತಾರೆ. ಇದರಿಂದ ಅವರೆಲ್ಲರೂ ಒಂದೆಡೆ ವಾಸಿಸುವರೆಂದಾಗಲಿ, ಹಾಗೆ ಆಗಬೇಕೆಂದು ಒತ್ತಾಯ ಪಡಿಸುವರೆಂದಾಗಲಿ ಅರ್ಥವಾಗುವುದಿಲ್ಲ; ಅದೆಂದೂ ಆಗತಕ್ಕದ್ದಲ್ಲ; ಏಕೆಂದರೆ ಲಕ್ಷೋಪಲಕ್ಷ ಜನರು ಗೃಹಚ್ಯುತರಾಗಿದ್ದಾರೆ; ಅವರಿಗೆ ತಮ್ಮ ತಲೆಯನ್ನು ಎಲ್ಲಿ ಒರಗಿಸಬೇಕೆಂಬುದು ಗೊತ್ತಿಲ್ಲ. ಈ ನಮ್ರವಾದ ಸಹಕಾರ ಬುದ್ಧಿಯಿದ್ದರೆ ಎಲ್ಲೇ ಅವರಿರಲಿ, ಎಲ್ಲ ದುಃಖಿಗಳಲ್ಲಿ ಅವರು ಬೆರೆತುಹೋಗುವರು; ಅವರು ಯಾವ ದರ್ಜೆ ಅಥವಾ ಸಮಾಜದಿಂದ ಬಂದವರೆಂಬುದನ್ನು ಗಣಿಸುವದಿಲ್ಲ. ಒಬ್ಬಾತ ತನ್ನನ್ನು ತಾನು ಹೇಳಿದಲ್ಲೇ ಇರದೇಕೆಂದರೆ ಆಗುವ ಮಾತಲ್ಲ. ದುಃಖಿಗಳೆಂದೂ ಗೊಣಗುಟ್ಟುವದಿಲ್ಲ. ಮುಸಲ್ಮಾನ ಒಡೆಯರಿಗೆ ಸೇರಿದ ಮನೆಗಳು ಕಾಬಿರಲಿ ಇಲ್ಲವೆ ಖಾಲಿ ಇರಲಿ, ಅವರು ಅವನ್ನು ಹೊಗಲು ಇಚ್ಛಿಸರು. ಭಾರತದಲ್ಲಿಯ ಇಂದಿನ ಅಸಾಧಾರಣ ಪರಿಸ್ಥಿತಿಯಿಂದ ಕೆಟ್ಟೋಡಿದವರ ಆಸ್ತಿ ಪಾಸ್ತಿಗಳನ್ನೇನು ಮಾಡಬೇಕೆಂಬುದನ್ನು ನಿರ್ಣಯಿಸುವುದು ಸರಕಾರಕ್ಕೆ ಸೇರಿದ್ದು. ದುಃಖಿಗಳು ಎಚ್ಚರದಿಂದ ಮಾಡತಕ್ಕ ಒಂದೇ ಒಂದು ಕಾರ್ಯವೆಂದರೆ, ಒಕ್ಕಟ್ಟಿನಲ್ಲಿದ್ದು ಒಮ್ಮತದಿಂದ ವರ್ತಿಸುವುದು. ಹೀಗೆ ವಿವರಿಸಿದ ಭಾವವು ರೂಪುಗೊಂಡು ಹರಡಿದರೆ ದುಃಖಿಗಳನ್ನು ಇಲ್ಲವೆ ನಿರಾಶ್ರಿತರನ್ನು ಪುನರ್ನಿವೇಶನಗೊಳಿಸುವ ಸಮಸ್ಯೆಯು ನಂಬಲಾರದಷ್ಟು ಸುಲಭವಾಗಿ, ಅವರೆಂದು ಸಮಾಜ ಕಂಟಕ ವರ್ಗವೆನಿಸುವುದು ತಪ್ಪುತ್ತದೆ.

ಇಷ್ಟಲ್ಲದೆ, ಅಂಗಹೀನನಲ್ಲದ ಪ್ರತಿಯೊಬ್ಬ ದುಃಖಿಯೂ ಅನ್ನ ಬಟ್ಟೆ ನೆರಳಿಗಾಗಿ ತನ್ನ ತನ್ನ ಶಕ್ತಿಯ ಪ್ರಕಾರ ನ್ಯಾಯವಾಗಿ ದುಡಿಯಬೇಕು. ಹೀಗೆ ಅವರು ದುಡಿಮೆಯ ಗೌರವವನ್ನು ಅರಿಯುವರು ಮತ್ತು ತಾವು ಯಾರನ್ನೂ ಅವಲಂಬಿಸಿಲ್ಲವೆಂದು ಸಮಾಧಾನ ಹೊಂದುವರು. ಲಿಂಗಭೇದವಿಲ್ಲದೆ ಪ್ರತಿಯೊಬ್ಬರೂ ಪರಸ್ಪರ ಸಮಾನರು. ಕೆಲ ಕಷ್ಟದಲ್ಲಿ ಎಲ್ಲರೂ ಭಾಗವಹಿಸುತ್ತಾರೆ. ಉದಾ— ಕಕ್ಕಸು ತೊಳೆಯುವುದು, ಬೀದಿ ಗುಡಿಸುವುದು ಮುಂತಾದ ಶೌಚಕಾರ್ಯಗಳು. ಯಾವ ದುಡಿಮೆಯೂ ಅತಿ ಹೆಚ್ಚಿನದು ಇಲ್ಲವೆ ಅತಿ ಕಡಿಮೆ ದರ್ಜೆಯದೆಂದು ತಿಳಿಯಲಾಗುವುದಿಲ್ಲ. ಈ ಸಮಾಜದಲ್ಲಿ ಉಂಡಾಡಿ ಗುಂಡರಿಗೂ ಸೋಮಾರಿಗಳಿಗೂ ತಿರುಗಲು ತಿರಿಪರಿಗೂ ಸ್ಥಳವಿಲ್ಲ. ಒತ್ತೊತ್ತಾಗಿ ಒಂದರ ಪಕ್ಕದಲ್ಲಿ ಒಂದಿದ್ದು ಎರಡರಲ್ಲಿ ಯಾವುದು ಹೆಚ್ಚು ಅಸಹ್ಯವೋ ಎಂಬುದನ್ನು ಗುರುತಿಸಲಾಗದಿರುವ ಮನೆಗಳುಳ್ಳ ಹೊಲಸು ಕಸದ ನಗರ ಜೀವನಕ್ಕಿಂತ ಈ ಶಿಬಿರ ಜೀವನವು ಎಂದಾದರೂ ಉತ್ತಮವೇ.

ಹೊಸದಿಲ್ಲಿ
೬—೧೨—೪೭ ಮೋ. ಕ. ಗಾಂಧಿ

ರಿಚರ್ಡ್ ಗ್ರೆಗ್ಗರಿಗೆ ಉತ್ತರ

ಒಬ್ಬ ಪತ್ರಕರ್ತ ಬರೆಯುತ್ತಾನೆ—

"ಮಹಾತ್ಮಾ ಗಾಂಧಿಯವರಿಗೆ ಬರೆದ ಅವರ ಕಾಗದದಲ್ಲಿ ಶ್ರೀ ರಿಚರ್ಡ್ ಗ್ರೆಗ್ಗರು —ಇತ್ತೀಚಿನ ಹಿಂಸೆಯಲ್ಲಿ ಬಹಳ ಅಂಶವು ಅಂತರ್ಜಾತೀಯ ಸಂಶಯ ದ್ವೇಷಗಳಿಗಿಂತ ಹೆಚ್ಚಾಗಿ ಅನೇಕ ವರ್ಷಗಳಿಂದ ದಮನಕ್ಕೊಳಗಾದ ಜನತೆಯ ಸುಪ್ತ ಶಕ್ತಿಯ ಉತ್ಪಾತದಿಂದಲೇ ಹೊರಟಿದೆಯೆಂದು ವಿವರಿಸುತ್ತಾರೆ. ಈಗಿನ ಹಿಂಸೆಗೆ ಅವರ ಒಂದು ಆರ್ಥಿಕ ವಿವರಣವನ್ನು ಕೊಡಬಯಸುತ್ತಾರೆ. ಅವರು ಮುಂಬರಿದು, ಬಾಲ್ಯದಲ್ಲಿ ಹೊಂದಿದ ಆಶಾಭಂಗವು ದಮನಹೊಂದಿದ ಪ್ರತೀಕಾರ ಬುದ್ಧಿಯನ್ನು ಬೆಳೆಸುವುದು; ಅದು ದಮನಕರ್ತನೆಡೆ ನೇರವೂ ಬಹಳ ಕಾಲ ಉಳಿದು ಅನುಕೂಲ ಸಂದರ್ಭದಲ್ಲಿ ಪ್ರಕಟವಾಗಬೇಕೆಂದು ಹವಣಿಸುತ್ತದೆ ಎಂದು ಹೇಳುತ್ತಾರೆ. ಅವರ ವಿವರಣವನ್ನು ಒಪ್ಪಲಸಾಧ್ಯ. ಜನತೆ ಅಂತಹ ಅಪಕಾರಿ ಜಾತಿಗಳವರನ್ನು ಕೊಲ್ಲ ಹೋಗಿದ್ದರೆ ಅವರು ಹೇಳುವುದು ಸತ್ಯವೆನ್ನಬಹುದಾಗಿತ್ತು. ಈಗ ಹಾಗಿಲ್ಲ. ಕೊಂದವನು ಬೇರೆ, ದಮನ ಕರ್ತನು ಅನ್ಯ, ಪ್ರತೀಕಾರ ನಡೆಯುತ್ತಿರುವುದು ಅನ್ಯರಲ್ಲಿ. ಗ್ರೆಗ್ಗರ ಆಶಾಭಂಗದ ವಿವರಣವನ್ನು ಒಪ್ಪುವುದಾದರೆ, ಜಾತೀಯ ವರ್ಗಗಳು ಗೆದ್ದು ಜನತೆಯು ಸಮೂಲವಾಗಿ ನಿರ್ದಯದ ಮನಕ್ಕೊಳಗಾಗಿರಬೇಕಾಗಿದಿತು. ಅಂತಹ ಸಂದರ್ಭದಲ್ಲಿ ಹೋರಾಟದ ಅನುಭವವು ನಗ್ನ ದ್ವೇಷವಲ್ಲದೆ ಬೇರೊಂದಕ್ಕೆ ಅವಕಾಶ ಕೊಡದೆನ್ನಬಹುದಾಗಿತ್ತು. ಬಂಗಾಲದ ಕ್ಷಾಮವು ಎಷ್ಟೋ ಜನರ ಆಹುತಿ ತೆಗೆದುಕೊಂಡರೂ ದಂಗೆಗೆಡೆಗೊಡಲಿಲ್ಲ.

"ಮನೆಯ ಪ್ರಭಾವ ವ್ಯಕ್ತಿಯ ಮೇಲಿರು ತ್ತದೆ. ಕುಟುಂಬ ಇಲ್ಲವೆ [illegible] ಪ್ರೀತಿ ತೋರಿಸದಿದ್ದರೆ ಒಬ್ಬನು ಸಮಾಜ ದ್ರೋಹಿಯಾದಾನು. ಅನ್ಯರಿಂದ ಮಾತೃಸಹಜ ವಾತ್ಸಲ್ಯವನ್ನು ನಿರೀಕ್ಷಿಸಲಾಗುತ್ತದೆ. ಅದರೆ ಅದಕ್ಕೆ ಪ್ರತ್ಯುತ್ತರ ರೂಪವಾಗಿ ವಾತ್ಸಲ್ಯ ಬರದಿದ್ದಲ್ಲಿ ಆಶಾಭಂಗ ಹೊಂದಿದ ಇಚ್ಛೆಯು ಮಾರ್ಗವನ್ನು ಕಾಣದೇ ದ್ವೇಷ ಹಿಂಸೆಗಳತ್ತ ತಿರುಗುವುದು. ಮಕ್ಕಳು [illegible] ಕಾಯಿದೆಯನ್ನು ಮುರಿಸುವ

[illegible] ಆಗಿ ಬೆಳೆಯಬೇಕಾದರೆ ಅದರ ಆಂತರಿಕ ಮತ್ತು ಸಮಾಜಘಾತಕ ಪ್ರವೃತ್ತಿಗಳನ್ನು ತಡೆಗಟ್ಟಬೇಕು. [illegible] ಕಾರಣ. ಅದನ್ನು ನಿವಾರಿಸಲು ದಯೆ ಅಗತ್ಯ. ನಮ್ಮ ದೇಶದ ಬಹು ಸಂಖ್ಯಾತರು [illegible] ಆಸ್ತಿ ಪಾಸ್ತಿ, ಮನೆ, ಮಠ, [illegible] ಕಾರಣ. [illegible] ಅದರಿಂದ [illegible]

ಶ್ರೀ ಗ್ರೆಗ್ಗರ ಮತವನ್ನು ವಿಚಾರಿಸಲು ಮತ್ತೊಂದು ಕಾರಣವಿದೆ. ಪ್ರತಿಯೊಂದು ಜಾತಿಯೂ ನಡತೆಯ ನಿಯಮಗಳನ್ನು ಬೆಳೆಸಿಕೊಂಡು ಬಂದಿದೆ! ಅವುಗಳ ಬಗ್ಗೆ ವಿವರವನ್ನು ಹೇಳಲು ಸಾಧ್ಯವಿಲ್ಲ. ಅವು ಕೇವಲ ಪರಂಪರಾಗತ ಸಮಾಜ ಘಾತಕ ಕಟ್ಟುಪಟ್ಟಿಗಳನ್ನು ಬಗ್ಗು ಬಡಿವಲ್ಲಿ ಧರ್ಮವು ಕೆಲ ಮಟ್ಟಿಗೆ ಜಯಶಾಲಿಯಾಗಿದೆ.

ರಾಜಕೀಯ ಲಾಭಕ್ಕಾಗಿ ದ್ವೇಷಾಸೂಯೆ ಪ್ರಸಾರಕವಾದ ಅಪಪ್ರಚಾರವು ಗಂಭೀರ ಪರಿಸ್ಥಿತಿ ಇಲ್ಲದಂತೆ ಮಾಡುವಲ್ಲಿ ವಿಘ್ನವನ್ನುಂಟು ಮಾಡಿದೆ. ತಡೆಗಳನ್ನು ತೆಗೆದು ಹಾಕಿದ ಕೂಡಲೆ, ಮನಸ್ವಿಯಾಗಿ ನಡೆಯಲು ಬಾಗಿಲು ತೆರೆದು ಬಿಟ್ಟಂತಾಯಿತು. ಅದು ಇಂದಿನ ದುರಂತಕ್ಕೆ ಕಾರಣವಾಯಿತು; ಮುಂದೆಯೂ ಹಾಗೇ ಆಗಬಹುದಾಗಿದೆ. ಅದರ ಪ್ರಥಮ ಪರಿಣಾಮವೇ ಕೊಲೆ. ಅದರ ದೆವ್ವಕ್ಕೆ ಭವಿಷ್ಯವು ಕೊಡಬೇಕಾದ್ದೇನೆಂಬುದನ್ನು ಹೇಳಲು ನಾನು ಧೈರ್ಯ ಮಾಡುವುದಿಲ್ಲ. ದ್ವೇಷದಲ್ಲೇ ಬೆಳೆದ ಮತ್ತು ಒಮ್ಮೆಲೇ ಅಧಿಕಾರದೋನ್ಮತ್ತರಾದ ಜನರೊಡನೆ ನಡೆಯಲು ಯುಕ್ತವಾದ ತತ್ತ್ವಪ್ರಣಾಲಿಯೊಂದನ್ನು ರಚಿಸುವುದೇ ಇಂದಿನ ತುರ್ತು ಕರ್ತವ್ಯ. ಅಧಿಕಾರಾರೂಢರೂ ಪ್ರಭಾವಿಗಳೂ ದಾಸವೀ ಜೀವನದಿಂದ ಮಾನವನನ್ನು ಮೇಲಕ್ಕೆತ್ತುವ ಉದ್ದೇಶವನ್ನು ಮನಗಂಡಿರಬೇಕು. ಪ್ರೇಮ ಜ್ಞಾನ ಸೌಂದರ್ಯಾನಂದ ದರ್ಶನದಿಂದ ಸ್ಫೂರ್ತಿ ಪಡೆದ ಕರ್ಮಕ್ಕೆ ಮಾತ್ರ ಬೆಲೆಯಿದೆ. ಇವು ಆಧ್ಯಾತ್ಮಿಕಗಳು. ಇವು ಬದುಕಿ ಬಾಳಿದ ಎಂತಹ ಮಹಾತ್ಮರ ಜೀವನಗಳನ್ನು ತುಂಬಲೂ ಸಾಕು."

ಶ್ರೀಯುತ ಗ್ರೆಗ್ಗರ ಬರಹದ ಅರ್ಥ ದಾರ್ಢ್ಯವನ್ನು ಈ ಪತ್ರಕರ್ತನು ಅರಿಯದುದು ಆಶ್ಚರ್ಯವಾಗುತ್ತದೆ. ಗ್ರೆಗ್ಗರು ಬೇಕಾದರೆ ಇದಕ್ಕೆ ಉತ್ತರ ಕೊಡಲಿ. —ಮೋ. ಕ. ಗಾಂಧಿ

ಕೊನೆಗೆ ಸರಿಯಾದ ಹೆಜ್ಜೆಯನ್ನೇ ಇಡಲಾಯಿತು

ಕೊನೆಗೆ ಒಂದೇ ಒಂದಾದರೂ ಪ್ರಾಂತಿಕ ಸರಕಾರವು ಅಂದರೆ ಮದ್ರಾಸು ಸರಕಾರ ಧಾನ್ಯದ ಬೆಳೆಗೆ ಪ್ರೋತ್ಸಾಹ ಕೊಡುವುದರತ್ತ ಮತ್ತು ಸಾಗುವಳಿಯ ಭೂಮಿಯ ಕ್ಷೇತ್ರ ವಿಸ್ತರಣದತ್ತ ಲಕ್ಷ್ಯವಿತ್ತು ದೇಶದ ಆಹಾರ ಕೊರತೆಯನ್ನು ನೀಗಿಸುವುದರ ಸಲುವಾಗಿ ಕಾರ್ಯಕ್ರಮ ಕೈಕೊಂಡ ಪ್ರಯತ್ನ ಮಾಡುತ್ತಿರುವಂತೆ ತೋರುತ್ತದೆ. ಬೀಜಗೊಬ್ಬರಗಳನ್ನು ಕೊಡುವುದಾಗಿ ಸರಕಾರ ಭಾಷೆ ಕೊಟ್ಟಿದೆ.

ದುಡ್ಡಿಗಾಗಿ ಬೆಳೆವ ಬೆಳೆ ಹೆಚ್ಚದಂತೆ ತಡೆಯಲು ಸರಕಾರ ಅಂಥವಕ್ಕೆ ಗೊಬ್ಬರವನ್ನು ಒದಗಿಸುವದಿಲ್ಲ.

[illegible] ಗಡ್ಡೆಯನ್ನು, ತಂಬಾಕು, ಹತ್ತಿ, ಶೇಂಗಾ, ಕಬ್ಬುಗಳನ್ನು ಬೆಳೆಯಲು [illegible]

[illegible]

— ಜೆ. ಸಿ. ಕುಮಾರಪ್ಪಾ

[illegible]

[illegible]

—ಮೋ. ಕ. ಗಾಂಧಿ

ದೇವರಲೋಕದ ನ್ಯಾಯಾಧೀಶ

[illegible]

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಬಿರ್ಲಾಭವನ ಹೊಸದಿಲ್ಲಿ ತಾ. ೨೮-೧೧-೪೭ ರ ದಿನ ಪ್ರಾರ್ಥನೋತ್ತರದಲ್ಲಿ ಗಾಂಧೀಜಿ ಮಾಡಿದ ಭಾಷಣದ ಸಾರ.

ನಿರಾಧಾರ ಆರೋಪಗಳು

ಪ್ರಾರ್ಥನಾನಂತರ ಗಾಂಧೀಜಿ ಮಾತನಾಡುತ್ತ ಮುಂಬಯಿಯಿಂದ ಅವರಿಗೆ ಬಂದ ಒಂದು ಪತ್ರ ವಿಷಯವಾಗಿ ಹೀಗೆ ಹೇಳಿದರು.

ಪತ್ರ ಬರೆದವರು ಮುಂಬಯಿಯ ಒಂದು ವೃತ್ತಪತ್ರದಿಂದ ಕತ್ತರಿಸಿದ ಸಮಾಚಾರ ಒಂದನ್ನು ಕಳುಹಿದ್ದಾರೆ. ಆದರೆ ಇವರು ತಮ್ಮ ಹೆಸರನ್ನು ಮರೆಮಾಚಿದ್ದಾರೆ. ನನ್ನ ಪ್ರಾರ್ಥನೋತ್ತರ ಭಾಷಣಗಳನ್ನು ಬಿತ್ತರಿಸಲು ಅಖಿಲ ಭಾರತ ಆಕಾಶವಾಣಿಯನ್ನು ಉಪಯೋಗಿಸಲಾಗುತ್ತದೆಯೆಂದೂ ಇದು ಕಾಂಗ್ರೆಸ್ಸಿನ ಪ್ರಚಾರವಲ್ಲದೆ ಮತ್ತಿನ್ನೇನೆಂದೂ ಈ ವಿಧಾನವು ಅಹಿಂಸೆಯ ಮುಖವಾಡದಲ್ಲಿದ್ದ ನಾಜೀಪದ್ಧತಿಯೆಂದೂ ಜನರು ನನ್ನ ಮಾತಿಗೆ ಬೇಸತ್ತಿರುವರೆಂದೂ ಆ ಸಮಾಚಾರದಲ್ಲಿದೆ. ಇದಕ್ಕೆ ನನ್ನ ಉತ್ತರವಿಷ್ಟೇ. ನನ್ನ ಮಾತಿಗೆ ಹುರುಳಿಲ್ಲವೆಂದು ಕೆಲವರಿಗೆ ತೋರಿರಬಹುದು. ಆದರೆ ನನ್ನ ಮಾತು ಅನೇಕರಿಗೆ ಧೈರ್ಯದಾನ ಮಾಡುತ್ತಿರುವದಾಗಿ ನನಗೆ ವರದಿಯಾಗಿದೆ. ಮೇಲಿನ ಆರೋಪ ನಿರಾಧಾರವಾಗಿದೆ. ತನ್ನ ಗುಣಗಾನಕ್ಕಾಗಿಯೇ ಆಕಾಶವಾಣಿಯನ್ನು ಉಪಯೋಗಿಸುವ ಸರಕಾರಕ್ಕೆ ಬೆಲೆಯೇ ಇಲ್ಲವೆನ್ನಬೇಕು. ಸರಕಾರದ ಸುಕೃತಿಗಳೇ ಅದರ ಸರಿಯಾದ ಪ್ರಚಾರ ಸಾಧನಗಳು. ಅನ್ನು ನನ್ನ ಬಗ್ಗೆ. ಪ್ರಾರ್ಥನೆಗೂ ಧರ್ಮಕ್ಕೂ ಸಂಬಂಧಪಟ್ಟಿರುವ ವಿಷಯಗಳನ್ನು ಮಾತ್ರ ಕುರಿತು ನಾನು ಮಾತನಾಡುತ್ತೇನೆ. ಈ ನನ್ನ ಮಾತುಗಳು ರುಚಿಸದಿದ್ದರೆ ಅವರೇಕೆ ಅವನ್ನು ಕೇಳಹೋಗಬೇಕು? ಆಕಾಶವಾಣಿಗೋಸುಗ ಮಾತನಾಡುವ ಮೋಹ ನನಗಿಷ್ಟೂ ಇರುವದಿಲ್ಲ. ನನ್ನ ಒಂದೇ ಒಂದು ಗುರಿಯೆಂದರೆ ಮಾನವ ಕುಲದ ಸೇವೆ. ಅದಕ್ಕೋಸುಗವೇ ನಾನು ನಿತ್ಯೋ ಡನೆ ಮಾತನಾಡುವದು. ಸಾರ್ವಜನಿಕರು ಪ್ರಾರ್ಥನೆಗೆ ಬರುವದನ್ನು ನಿಲ್ಲಿಸಿ ಬಿಟ್ಟರೆ ನಾನು ಪ್ರಾರ್ಥನೋತ್ತರ ಭಾಷಣಗಳನ್ನೇ ಮಾಡುವದಿಲ್ಲ.

ಬಲಾತ್ಕಾರಕ್ಕೆ ಬಲಿಯಾದ ಸ್ತ್ರೀಯರು

ತಮಗೆ ತುಂಬ ನೋವು ಕೊಟ್ಟ ಕೆಲ ಪತ್ರಗಳ ವಿಷಯವನ್ನು ಉಲ್ಲೇಖಿಸಿ ಗಾಂಧೀಜಿ ಹೀಗೆ ಹೇಳಿದರು. "ಪಾಕಿಸ್ತಾನದಲ್ಲಿ ಅನೇಕ ಸ್ತ್ರೀಯರು ಬಲಾತ್ಕಾರಕ್ಕೂ ಅಮಾನುಷ ಹಿಂಸೆಗೂ ಅಪಮಾನಕ್ಕೂ ಗುರಿಯಾಗಿದ್ದಾರೆ. ಈ ಯಾತನೆಯಿಂದ ಪಾರಾಗಿ ಬಂದ ಸ್ತ್ರೀಯರು ಬಹಿಷ್ಕೃತರು. ಇದಕ್ಕಾಗಿ ಅವರು ಲಜ್ಜೆಯಿಂದ ಮುಖ ತಪ್ಪಿಸಿಕೊಳ್ಳಬೇಕಾಗಿ ಬಂದಿದ್ದಾರೆ. ಅವರನ್ನು ಸಮಾಜ ಕಳಂಕಿತರೆಂದು ಭಾವಿಸುವದೆ? ಇದೇನು ಶಾಸ್ತ್ರದ ಪರಮಾವಧಿಯಲ್ಲವೆ? ಸೀತಾದೇವಿಯಂಥ ತೇಜಸ್ವಿನಿ ಸ್ತ್ರೀಯು ರಾವಣನಂಥ ರಾಕ್ಷಸನಿಗೂ ಅಗಲಾರದೆಂಬುದು ನಿಜವಿದ್ದರೂ ಈ ದಿನಗಳಲ್ಲಿ ಅಂತಹ ಸೀತಾದೇವಿಯರು ಸಿಕ್ಕುವದು ವಿರಳ. ಪ್ರತಿಯೊಬ್ಬ ಸ್ತ್ರೀಯೂ ಆ ಮಟ್ಟಕ್ಕೆ ಏರುವದು ಸಾಧ್ಯವೂ ಇಲ್ಲ. ಮೇಲಾಗಿ ಬಲಾತ್ಕಾರದಿಂದ ಭಂಗಿಸಲ್ಪಟ್ಟ ಸ್ತ್ರೀಯರು ಲಜ್ಜಿತರಾಗಬೇಕಾಗಿಲ್ಲ. ಅಂತಹ ಸ್ತ್ರೀ ಅಪವಿತ್ರಳೂ ಅಲ್ಲ ನೀತಿ ಜಾರಿದವಳೂ ಅಲ್ಲ. ದುರ್ನೀತಿಯ ಅನೇಕ ಹೆಣ್ಣು ಗಂಡುಸಮಾಜದ ಶಿಕ್ಷೆಯನ್ನು ತಪ್ಪಿಸಿಕೊಳ್ಳುವದಲ್ಲದೆ ಅವರ ನೀತಿಯು ಚ್ಯುತಿಯುಂಟಾಗಿರುವದಿಲ್ಲ. ಆದರೆ ಪಾಪಿಗಳ ಬಲಾತ್ಕಾರಕ್ಕೆ ಬಲಿಯಾದ ನಿರಪರಾಧಿಗಳನ್ನು ಬಹಿಷ್ಕರಿಸಲು ಜನರು ದಾರಿ ತಪ್ಪಿ ಧಾವಿಸುತ್ತಿರುವದು ಸೋಜಿಗವಲ್ಲವೆ? ಇದು ನನಗೆ ಬಹಳ ನೋವುಂಟು ಮಾಡುತ್ತದೆ. ನನ್ನ ಮಗಳಾಗಲಿ ನನ್ನ ಹೆಂಡತಿಯಾಗಲಿ ಇಂತಹ ದುರ್ಘಟನೆಗೆ ಗುರಿಯಾಗಿ ಪಾರಾಗಿ ಬಂದಿದ್ದರೆ ನಾನೆಂದೂ ಅವರನ್ನು ತಿರಸ್ಕರಿಸಿ ಅಥವಾ ಪರಿತ್ಯಜಿಸಿ ಮನೆಯ ಹೊರಗಿಡುತ್ತಿರಲಿಲ್ಲ. ಇಂತಹ ಅಭಾಗಿಗಳಾದ ಒಂದು ಮುಸಲ್ಮಾನ ಸ್ತ್ರೀಯರನ್ನೇಕರನ್ನು ನಾನು ಕಂಡಿದ್ದೇನೆ ಹಾಗೂ ಈ ದುರ್ಘಟನೆಗಾಗಿ ಅವರು ಎಳ್ಳಷ್ಟೂ ಲಜ್ಜಿತರಾಗುವ ಕಾರಣವಿಲ್ಲವೆಂದು ನಾನವರಿಗೆ ತಿಳಿಸಿ ಹೇಳಿದ್ದೇನೆ.

ಒಕ್ಕಲಿಗರಿಗೆ ನೆರವು

ಒಂದಾನೊಂದು ಕಾಲಕ್ಕೆ ಸ್ವತಃ ಒಕ್ಕಲಿಗರಾಗಿದ್ದ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಯೊಬ್ಬರು ನನ್ನ ಬಳಿಗೆ ಬಂದಿದ್ದರು. ಹಿಂದಿನ ಕಾಲದಲ್ಲಿ ಹಳ್ಳಿಯ ಸ್ತ್ರೀಪುರುಷರೆಲ್ಲ ಸುಗ್ಗಿ ಕಾಲಕ್ಕೆ ಒಬ್ಬರಿಗೊಬ್ಬರು ನೆರವು ನೀಡುತ್ತಿದ್ದರೆಂಬ ಬಗೆಗೆ ತಿಳಿಸಿದರು. ಈಗಿನ ಕಾಲದಲ್ಲಿ ಒಕ್ಕಲಿಗರು ಸುಗ್ಗಿಯಲ್ಲಿ ಕೂಲಿಯ ಆಳುಗಳನ್ನು ಹಚ್ಚಬೇಕಾಗುತ್ತದೆ. ಇದರಿಂದ ಆಹಾರ ಧಾನ್ಯಗಳ ಬೆಲೆ ಏರುವದಲ್ಲದೆ ಹಳ್ಳಿಗರ ಪ್ರಾಂಜಲ ಸಹಕಾರಭಾವವು ತೊಡೆದು ಹೋಗುವದು. ಪರಸ್ಪರ ಈ ಸಹಕಾರಭಾವ ಬಹಳ ಮಹತ್ವದ್ದು. ಈ ಪ್ರಾಚೀನ ಪದ್ಧತಿಯನ್ನು ಮತ್ತೆ ಸಕಲರೂ ಅನುಸರಿಸಬೇಕೆಂದು ನಾನು ಒತ್ತಿ ಒತ್ತಿ ಹೇಳದಿರಲಾರೆ.

ಒಕ್ಕಲಿಗರ ರಾಜ್ಯ

ಉಳಿದವರಲ್ಲದಿದ್ದರೂ ಆಹಾರ ಮಂತ್ರಿಯಾದವರಾದರೂ ಒಕ್ಕಲಿಗರಾದವರೇ ಇರಬೇಕೆಂದು ಆ ಕಾರ್ಯದರ್ಶಿ ಹೇಳಿದರು. ಇಂದು ಮಂತ್ರಿಮಂಡಲದಲ್ಲಿ ಒಬ್ಬರಾದರೂ ಒಕ್ಕಲಿಗರಾಗಿರುವದಿಲ್ಲವೆಂಬುದು ವಿಷಾದದ ಸಂಗತಿ. ಸರದಾರ ವಲ್ಲಭಭಾಯಿ ಪಟೇಲರು ಒಕ್ಕಲು ಮನೆತನದಲ್ಲಿ ಹುಟ್ಟಿದರೇನೋ ನಿಜ. ಅವರಿಗೆ ಒಕ್ಕಲುತನದ ಬಗ್ಗೆ ಕುಸು ಪರಿಶ್ರಮವಿದ್ದುದೂ ನಿಜವೇ. ಆದರೆ ಅವರು ಬ್ಯಾರಿಸ್ಟರರಾಗಿ ಅದನ್ನೇ ಅವರು ತಮ್ಮ ವೃತ್ತಿಯಾಗಿಟ್ಟುಕೊಂಡರು. ನಮ್ಮ ಸರಕಾರದ ಮುಖ್ಯಾಮಾತ್ಯರಾದ ಜವಾಹರಲಾಲರು ಅಪೋಘ ಪಂಡಿತರು, ಅಸಾಮಾನ್ಯ ಇತಿಹಾಸಕಾರರು ಮತ್ತು ಲೋಕವಿಖ್ಯಾತ ಲೇಖಕರು. ಆದರೆ ಇವರಿಗೆ ಕೃಷಿ ವಿಷಯದ ಬಗ್ಗೆ ಏನೂ ಗೊತ್ತಿಲ್ಲ. ಉಳಿದ ಮಂತ್ರಿಗಳೆಲ್ಲ ಧನಿಕರು. ಹೊಲದಲ್ಲಿ ನಿಂತು ಎಂದೂ ದುಡಿಯದಿದ್ದವರು. ಹಿಂದುಸ್ತಾನದ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ ೮೦ ರಷ್ಟು ಜನರು ಕೃಷಿಕರಿದ್ದರೂ ಸರಕಾರದಲ್ಲಿ ಅವರ ಪ್ರಾತಿನಿಧ್ಯವಿಲ್ಲ. ಭೂಮಿಯು ಫಲಪ್ರದವಾಗುವಂತೆ ಮತ್ತು ಆಹಾರೋತ್ಪಾದನೆ ಅಧಿಕವಾಗುವಂತೆ ಕೃಷಿಕರೇ ಮಾಡಬಲ್ಲರು. ಕೃಷಿಕರು ಯಾವ ಕಾರಣಕ್ಕಾಗಿ ಯೇಕೆ ಲಾಭಲಾಲಸರಾಗುತ್ತಾರೆಂಬುದನ್ನು ನಾನು ಬಲ್ಲೆ ಹಾಗೂ ಅದನ್ನು ನಾನು ಸಹಜವಾಗಿ ನಿವಾರಿಸಲೂ ಬಲ್ಲೆ. ನಮ್ಮ ಪ್ರಜಾರಾಜ್ಯದಲ್ಲಿ ಪ್ರಮುಖ ಪ್ರಜೆ ಎನ್ನಿಸಿದ ಕೃಷಿಕನೇ ರಾಜ್ಯ ಭಾರ ವಹಿಸಬೇಕು. ಪ್ರಾಮಾಣಿಕನಾದ ಮತ್ತು ಸಮರ್ಥನಾದ ಓರ್ವ ಕೃಷಿಕನನ್ನೇ ನಾನು ಹೃತ್ಪೂರ್ವಕ ಮುಂದೆ ತರಲು ಬಯಸುತ್ತೇನೆ. ಇಂತಹ ಕೃಷಿಕನಿಗೆ ಇಂಗ್ಲೀಷ ಭಾಷೆ ಬಾರದೆ ಇರಬಹುದು, ಆದರೇನಾಯ್ತು? ನಾನು ಜವಾಹರರಿಗೆ ಕೃಷಿಕ ಮಂತ್ರಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಲು ಹೇಳುತ್ತೇನೆ ಮತ್ತು ತಮ್ಮ ಈ ಕೃಷಿಕ ಮಹಾ ಮಂತ್ರಿಯ ಪರವಾಗಿ ದೇಶ ವಿದೇಶಗಳ ರಾಯಭಾರಿಗಳನ್ನು ಸಂದರ್ಶಿಸಲು ಹೇಳುವೆನಲ್ಲದೆ ಈ ಬಗೆಯ ಸೇವೆಯಲ್ಲಿ ಹೆಮ್ಮೆಪಡಲು ಕೋರುವೆ. ಕೃಷಕ ಮುಖ್ಯ ಮಂತ್ರಿಯು ತನ್ನ ವಾಸಕ್ಕೆಂದು ಒಂದು ಅರಮನೆಯನ್ನು ಬಯಸಲಾರ. ಅವನು ಒಂದು ಮಣ್ಣಿನ ಗುಡಿಸಲಲ್ಲಿದ್ದು ಮುಗಿಲ ಹೊದಿಕೆಯಲ್ಲಿ ಮಲಗಿ ತನಗೆ ಅನುವು ದೊರೆತಾಗಲೆಲ್ಲ ಹೊಲದಲ್ಲಿ ಹೋರಿ ಮಾಡುವನು. ಇದರಿಂದ ಸಮಗ್ರ ದೃಶ್ಯವೆ ಒಮ್ಮೆಂದೊಮ್ಮೆ ಮಾರ್ಪಾಟಾಗಿ ಹೋಗುವದು. ಹಿಂದುಸ್ತಾನದ ಪಂಚಾಯತ ರಾಜ್ಯದಲ್ಲಿ ಒಕ್ಕಲಿಗನಾದವನಿಗೇ ಹೆಚ್ಚಿನ ಸ್ಥಾನ ದೊರಕಬೇಕಾದುದು ಕ್ರಮಪ್ರಾಪ್ತವಾಗಿದೆ. ಅವನನ್ನು ಹೇಗೆ ಮುಂದೂಡಬೇಕೆಂಬುದೇ ನಾವು ಸಮಾಲೋಚಿಸಬೇಕಾದ ಪ್ರಶ್ನೆಯಾಗಿದೆ.

ಬಿರ್ಲಾಭವನ ಹೊಸದಿಲ್ಲಿ ೨೯—೧೧—೪೭

ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ ದಿಲ್ಲಿಯಲ್ಲಿಯ ಮದ್ಯಪಾನದ ಅಂಕೆಗಳು ಮಿತಿ ಮೀರಿ ಏರಿದ್ದು ಕೇಳಿದುದನ್ನು ಪತ್ರಿಕೆಗಳಲ್ಲಿ ಓದಿದುದನ್ನು ಉಲ್ಲೇಖಿಸಿದರು. ಮದ್ಯಪಾನದಿಂದ ಬಗೆಬಗೆಯ ದುಷ್ಕೃಟಗಳು ಬೀಳುತ್ತವೆ. ಸಿನ್ನಿನಂಥ ಶೀಖರು ಹೊಸ ಯುಗವನ್ನು ಪ್ರಾರಂಭಿಸಿದ್ದಾರೆ. ಮದ್ಯಪಾನವು ಮೊದಲಿಗಿಂತ ಕಡಿಮೆಯಾಗಬಲ್ಲದು.

ಅಪಹೃತ ಹುಡುಗಿಯರು

ಅಪಹೃತ ಸ್ತ್ರೀಯರ ಸಂಬಂಧದಲ್ಲಿ ಗಾಂಧೀಜಿ ಮಾತಾಡುತ್ತ ಪಾಕಿಸ್ತಾನದಲ್ಲಿ ಅನೇಕ ಹಿಂದು ಮತ್ತು ಶೀಖ ಹುಡಿಗೆಯರು ಅಪಹರಿಸಲ್ಪಟ್ಟದ್ದನ್ನು ವಿವರಿಸಿದರು. ಅವರು ಎಂಥ ಅನಸ್ಸಿತ ಛಲನೆಗೆ ಗುರಿಯಾಗಿರುವರೆಂಬುದು ಪರಮಾತ್ಮನಿಗೊಬ್ಬನಿಗೇ ಗೊತ್ತು. ಒಕ್ಕೂಟದಲ್ಲಿಯ ಹಿಂದುಗಳು ಮತ್ತು ಶೀಖರು ಅಷ್ಟೊಂದು ಸಭ್ಯತನದಿಂದ ನಡೆದುಕೊಂಡಿಲ್ಲ. ಅಪಹರಿಸಲ್ಪಟ್ಟ ಮುಸಲ್ಮಾನ ಹುಡುಗಿಯರನ್ನು ಅನಸ್ಸಿತ ರೀತಿಯಿಂದ ಛಲಿಸಲಾಯಿತೆಂದು ನನಗೆ ತಿಳಿದು ಬಂದಿದೆ. ಪಂಜಾಬ ಸರಕಾರದವರು ಮತ್ತು ಅಧಿಕಾರಿಗಳು ಇಂಥ ಹುಡಿಗೆಯರನ್ನೆಲ್ಲ ಬಿಟ್ಟುಬಿಡಬೇಕೆಂದು ನನ್ನ ಅಭಿಪ್ರಾಯ. ಇಂಥ ಅಪಹಾರವೆಲ್ಲ ಕಟ್ಟಳೆಗೆ ವಿರುದ್ಧವಾದುದು ಅರ್ಥಾತ್ ಕ್ರಮಬದ್ಧವಲ್ಲ ಎಂದು ಎರಡೂ ಸರಕಾರಗಳು ಸಾರಬೇಕು. ಇಂಥ ಅಪಹೃತ ಪ್ರತಿಯೊಬ್ಬ ಹುಡಿಗೆಯನ್ನು ಆಯಾ ಸರಕಾರಗಳಿಗೆ ತಿರುಗಿ ಮುಟ್ಟಿಸುವವರೆಗೆ ವಿಶ್ರಾಂತಿ ಹೊಂದದಿರುವುದು ಎರಡೂ ಸರಕಾರಗಳ ಮುಖ್ಯ ಕರ್ತವ್ಯವಾಗಿದೆ. ಆಯಾ ಸ್ತ್ರೀಯರು ಸ್ವೇಚ್ಛೆಯಿಂದ ಮತಾಂತರ ಹೊಂದುವ ಇಲ್ಲವೆ ಸಂಬಂಧ ಬೆಳಿಸಿಕೊಳ್ಳುವ ಪ್ರಶ್ನೆಯೆ ಉಪಸ್ಥಿತವಾಗುವುದಿಲ್ಲ.

ವಿಲಾಸ ವಸ್ತುಗಳ ಮೇಲೆ ಕರ

ಮೂರನೇ ವರ್ಗದ ರೇಲ್ವೆ ದರಗಳನ್ನು ಏರಿಸಿದುದನ್ನು ಪ್ರತಿಭಟಿಸಿ ಗೆಳೆಯನೊಬ್ಬ ಪತ್ರ ಬರೆದಿರುವನು. ತಂಬಾಕು ಸಿಗರೇಟು ಮುಂತಾದ ವಿಲಾಸದ ವಸ್ತುಗಳ ಮೇಲೆ ಇನ್ನೂ ಹೆಚ್ಚಿನ ಕರವನ್ನು ಹೇರಿದ್ದರೆ ಒಳಿತಾಗುತಿತ್ತೆಂದು ಅವನ ಅಭಿಪ್ರಾಯ. ಈ ಸೂಚನೆ ನನಗೆ ಸರಿದೋರುವದು. ಆದರೆ ಅವಶ್ಯವಿದ್ದಷ್ಟು ಈ ಪ್ರಶ್ನೆಯನ್ನು ನಾನು ಅಭ್ಯಸಿಸಿರುವದಿಲ್ಲಾದ್ದರಿಂದ ಸ್ಪಷ್ಟ ಅಭಿಪ್ರಾಯವನ್ನು ನಾನು ಕೊಡಲಾರೆ. ಆ ಸೂಚನೆಗಳನ್ನು ಮಾತ್ರ ನಾನು ಉಲ್ಲೇಖಿಸಿ ಅಧಿಕಾರಿಗಳ ಲಕ್ಷ್ಯವನ್ನು ಅತ್ತ ಎಳೆಯಬಯಸುತ್ತೇನೆ. ಸರಿಯಾದ ಕಾರಣವಿಲ್ಲದೆ ಒಂದು ಪೈ ಕೂಡ ವೆಚ್ಚ ಮಾಡಲು ನಮ್ಮ ಮಂತ್ರಿಗಳು ಹಿಂದೆ ಮುಂದೆ ನೋಡುವರೆಂದು ನನಗೆ ಗೊತ್ತು. ಹಳ್ಳಿಗರು ಸರಕಾರಕ್ಕೆ ಕೊಡುವ ಹಣವೆಲ್ಲ ಅವರಿಗೆ ಬೇಕಾದ ವಿವಿಧ ಸೌಕರ್ಯಗಳಿಗಾಗಿ ತಿರುಗಿ ವ್ಯಯವಾಗುವದೊ ಮತ್ತು ವೆಚ್ಚವಾದದ್ದೆಲ್ಲ ಅವರ ಸಲುವಾಗಿಯೇ ಇದೆಯೋ ಎಂಬುದು ಸಿದ್ಧವಾಗಬಲ್ಲದೆ ಎಂಬದೆ ನಿಜವಾದ ಒರೆಗಲ್ಲು.

ಸ್ವಯಂ ಪ್ರೇರಿತ—ಗೃಹರಕ್ಷಕರು

ಸ್ವತಂತ್ರ ಹಿಂದುಸ್ತಾನವು ದೊಡ್ಡ ಸೈನ್ಯವನ್ನಿಡಬೇಕಾಗಿಲ್ಲ. ಸ್ವಯಂ ಪ್ರೇರಿತ ಗೃಹರಕ್ಷಕರು ತಮ್ಮ ಮನೆಗಳನ್ನು ರಕ್ಷಿಸಬಲ್ಲರಲ್ಲದೆ ದೇಶದ ರಕ್ಷಣೆಯಲ್ಲಿಯೂ ತಮ್ಮ ಪಾತ್ರ ವಹಿಸಬಲ್ಲರು.

ಬಿರ್ಲಾಭವನ ಹೊಸದಿಲ್ಲಿ ೩೦—೧೧—೪೭

ಕಾಠೇವಾಡದಿಂದ ಬಂದ ತಂತಿ

ಗಾಂಧೀಜಿ ಇಂದಿನ ಪ್ರಾರ್ಥನೋತ್ತರ ಭಾಷಣದಲ್ಲಿ ಪ್ರಾರ್ಥನೆಗೆ ಬರುವವರೆಲ್ಲ ಸಂಗಡ ಆಸನಗಳನ್ನು ತರಬೇಕಾಗಿ ಹೇಳಿ ಕಾಠೇವಾಡದಿಂದ ಬಂದ ತಂತಿಗಳನ್ನು ಉಲ್ಲೇಖಿಸಿದರು. ಕಾಠೇವಾಡದಲ್ಲಿ ನಡೆದುದೆಂದು ಹೇಳಲಾಗುತ್ತಿರುವ ಸಂಗತಿಗಳ ಬಗ್ಗೆ ಈ ಮೊದಲು ಹೇಳಿದ್ದುಂಟು. ಪಾಕಿಸ್ತಾನ ಪತ್ರಿಕೆಗಳಲ್ಲಿ ಬರೆಯಲ್ಪಟ್ಟದ್ದನ್ನೆಲ್ಲ, ಗಾಂಧೀಜಿ ಅಲಕ್ಷಿಸಲಾರರು. ಸಾವಿರಾರು ಜನರು ಆ ಪತ್ರಿಕೆಗಳನ್ನು ಓದಿ ಅವುಗಳನ್ನು ನಂಬುವರು. ಆದುದರಿಂದ ಘಟನೆಗಳ ಪುರಾವೆಗಳ ದಾರೀ ನೋಡದೆ ಅವರು ಹೇಳಿದ್ದುಂಟು. ವರದಿಯು ಅಸತ್ಯವಾಗಿದ್ದರೆ, ಆಯಾ ಪತ್ರಿಕೆಗಳಿಗೆ ಅದು ನಾಚಿಕೆಗೇಡು, ಅದು ಸತ್ಯವಾಗಿದ್ದರೆ ಕಾಠೇವಾಡದ ಜನತೆಗೆ ನಾಚಿಕೆಗೇಡು. ಸರದಾರರು ತಮಗೆ ಹೇಳಿದುದನ್ನೆಲ್ಲ ಅವರು ಹೇಳಿರುವರು. ಇಂದು ಮತ್ತೆ ಅವರು ಗಾಂಧೀಜಿಯ ಭೆಟ್ಟಿ ತೆಗೆದುಕೊಂಡು ಕಾಠೇವಾಡದಲ್ಲಿ ಎಲ್ಲವೂ ಸರಿಯಾಗಿದೆಂದು ಆಶ್ವಾಸಿಸಿರುವರು. ಕೆಲವು ಹಿಂದುಗಳು ತಲೆಕೆಡಿಸಿಕೊಂಡು ಕೆಲ ಮುಸಲ್ಮಾನ ಮನೆಗಳನ್ನು ನಾಶಮಾಡಿದ್ದುಂಟು, ಇಲ್ಲವೆ ಸುಟ್ಟದ್ದುಂಟು. ಆದರೆ ಕಾಂಗ್ರೆಸ್ಸಿಗರು ಸರಕಾರದ ಸಹಾಯದಿಂದ ಕೂಡಲೆ ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದರೆಂದೂ ಇದರಲ್ಲಿ ಅವರು ತಮ್ಮ ಪ್ರಾಣದ ಪರಿವೆಯನ್ನು ಕೂಡ ಮಾಡಲಿಲ್ಲವೆಂದೂ ರಾಜಕೋಟದಿಂದ ಗಾಂಧೀಜಿಗೆ ತಂತಿಯೊಂದು ಬಂದಿದೆ. ರಾಜಕೋಟದಲ್ಲಿ ಪ್ರಸಿದ್ಧ ವಕೀಲರೂ ಧುರೀಣರೂ ಆಗಿರುವ ಶ್ರೀ ಢೇಭರ ಭಾಯಿ ಇವರ ಮೇಲೆ ಅತ್ಯಾಚಾರವಾಗಿದೆ. ಕೆಲ ಕಾಂಗ್ರೆಸ್ಸಿಗರೂ ಗಾಯಗೊಳಿಸಲ್ಪಟ್ಟಿದ್ದಾರೆ. ಈ ರೀತಿ ಕಾಂಗ್ರೆಸ್ಸಿಗರ ಮೇಲೆಯೆ ಜನಸಾಮಾನ್ಯರೊಚ್ಚಿಗೆದ್ದಿದ್ದರೂ ಮುಸಲ್ಮಾನರು ರಕ್ಷಿಸಲ್ಪಟ್ಟಿರುವರು. ಗಾಂಧೀಜಿಗೆ ಆದ ದುಃಖದಿಂದ ಅವರು ನೊಂದಿಕೊಂಡಿರುವರು. ಇದೀಗ ರಾಜಕೋಟದಲ್ಲಿ ಎಲ್ಲವೂ ಸರಾಗವಾಗಿ ಸಾಗಿದೆಂದು ಆ ಪತ್ರದಲ್ಲಿ ಬರೆಯಲಾಗಿದೆ. ಉಳಿದ ಕಡೆಗಳಲ್ಲಿಯ ಘಟನೆಗಳ ಬಗ್ಗೆ ವಿಚಾರಣೆ ನಡೆಸಿದ್ದು ಪರಿಣಾಮವನ್ನು ತಿಳಿಸಲಾಗುವದು. ರಾಷ್ಟ್ರೀಯ ಸೇವಕ ಸಂಘ ಮತ್ತು ಹಿಂದು ಮಹಾಸಭೆಯವರು ಈ ದಾಳಿಯನ್ನು ಸಂಘಟಿಸಿದರೆಂದು ಹೇಳಲಾಗುತ್ತದೆ. ಆದರೆ ಅವರು ಅಯಶಸ್ವಿಯಾದರು. ಕಾಂಗ್ರೆಸ್ಸಿಗರು ಮಾಡಿದ ಸೇವೆಯನ್ನು ಪ್ರಶಂಸಿಸಿ ಮುಸಲ್ಮಾನರಿಂದ ಮತ್ತೊಂದು ತಂತಿ ಬಂದಿದೆ. ಈ ಸಂಗತಿಯನ್ನು ಬೆಳಕಿಗೆ ತಂದದ್ದಕ್ಕಾಗಿ ಗಾಂಧೀಜಿಯನ್ನು ಅಭಿನಂದಿಸುತ್ತ ಮುಂಬಯಿಯ ಕೆಲ ಮುಸಲ್ಮಾನರಿಂದ ಅವರಿಗೆ ತಂತಿ ಬಂದಿದೆ. ಕಾಠೇವಾಡದಲ್ಲಿಯ ಮುಸಲ್ಮಾನರ ಲೂಟಿಯಾಗಿದ್ದು ಅವರನ್ನು ಹೆದರಿಸಲಾಗಿದೆಯೆಂದೂ ಅದರಲ್ಲಿ ಬರೆಯಲಾಗಿದೆ. ಕೊಲೆ ಅಪಹಾರದ ಸುದ್ದಿ ಇಲ್ಲದ್ದು ಸಂತೋಷದ ಸಂಗತಿ. ಅನೇಕ ಮುಸಲ್ಮಾನರು ಕಾಠೇವಾಡವನ್ನು ಬಿಟ್ಟು ಬಿಟ್ಟಿರುವರೆಂದು ಹೇಳಲಾಗುತ್ತದೆ. ಕೊಟ್ಟ ಆಶ್ವಾಸನಗಳನ್ನು ನಂಬುವದಾದರೆ ನಿರಾಶ್ರಿತರು ತಮ್ಮ ತಮ್ಮ ಮನೆಗಳಿಗೆ ಮರಳಬೇಕು. ಪುರಾವೆಗಳಿಲ್ಲದ ಇಲ್ಲವೆ ಅತಿರಂಜಿತ ಸುದ್ದಿಗಳನ್ನು ಪ್ರಕಟಿಸುವ ಬಗ್ಗೆ ಗಾಂಧೀಜಿ ಪತ್ರಿಕಾಕರ್ತರಿಗೆ ಎಚ್ಚರಿಕೆ ಕೊಟ್ಟರು. ತಮ್ಮ ಗೆಳೆಯರನ್ನು ವಂಚಿಸುವದರಿಂದ ಅವರಿಗೆ ಯಾವ ಪ್ರಯೋಜನವೂ ಇಲ್ಲ. ಭಾವನಗರ ಮಹಾರಾಜರಿಂದಲೂ ಪುನಃ ಆಶ್ವಾಸಿಸುವ ತಂತಿ ಬಂದಿದೆ. ರಾಜಕೋಟದ ಐದು ಮುಸಲ್ಮಾನರಿಂದಲೂ ತಂತಿಯೊಂದು ಬಂದಿದೆ. ೧೩ ಅಂಗಡಿಗಳನ್ನು ಲೂಟಿ ಮಾಡಿದ್ದು ಒಂದು ಲಕ್ಷ ರೂ.ಕ್ಕಿಂತ ಕಡಿಮೆಯಲ್ಲದಷ್ಟು ಹಾನಿಯಾಗಿದೆ. ಮತ್ತು ಕಾಂಗ್ರೆಸ್ಸಿಗರು ಹಾಗೂ ಸರಕಾರದವರು ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದರು ಎಂದು ಮುಂತಾಗಿ ಅದರಲ್ಲಿ ಬರೆಯಲಾಗಿದೆ. ಇದರ ವಿರುದ್ಧ ಜುನಾಗಡದಿಂದ ಇದೇ ತಾನೆ ಗಾಂಧೀಜಿ ಪ್ರಾರ್ಥನೆಗೆ ಬರುವಾಗ ತಂತಿಯೊಂದು ಬಂದಿದೆ. ಶುಕ್ರವಾರ ದಿನ ಉಲ್ಲೇಖಿಸಿದಂತಹ ಭಯಂಕರ ಸುದ್ದಿಗಳನ್ನು ಅದು ಒತ್ತಿ ಹೇಳುತ್ತದೆ. ಈ ಬಗ್ಗೆ ವಿಚಾರಣೆಯಾಗಬೇಕಾದದ್ದು ಅವಶ್ಯ. ಈ ವಿಚಾರಣೆ ನಡೆಸುವ ಅಧಿಕಾರ ಗಾಂಧೀಜಿ ಕೈಯಲ್ಲಿ ಇಲ್ಲ. ಕಾಠೇವಾಡದಿಂದ ಮುಂದಿನ ತಂತಿಗಳನ್ನೂ ಗಾಂಧೀಜಿ ನಿರೀಕ್ಷಿಸುತ್ತಿರುವರು. ಆದರೆ ಪೂರ್ಣ ಆಶ್ವಾಸನದ ಹೊರತು ಬೇರೆ ಯಾತರದಿಂದಲೂ ಗಾಂಧೀಜಿಗೆ ಸಮಾಧಾನವಿಲ್ಲ. ಅಧಿಕೃತ ವಿಚಾರಣೆಗಿಂತಲೂ ಇದು ಉತ್ತಮವೆಂದೂ ಗಾಂಧೀಜಿಯ ಅಭಿಪ್ರಾಯ.

ಹಿಂದೂ ಮಹಾಸಭೆ ಮತ್ತು ಆರ್. ಎಸ್. ಎಸ್. ದವರಿಗೆ ಬಿನ್ನಹ

ಹಿಂದು ಮಹಾಸಭಾ ಮತ್ತು ರಾಷ್ಟ್ರೀಯ ಸೇವಕಸಂಘ ಇವೆರಡೂ ಹಿಂದೂ ಸಂಸ್ಥೆಗಳಾಗಿದ್ದು ಅವುಗಳಲ್ಲಿ ಬೇಕಾದಷ್ಟು ಸುಶಿಕ್ಷಿತ ಜನರು ಇರುವರು; ಅವು ಯಾವ ಕೃತ್ಯಗಳನ್ನು ಮಾಡುತ್ತಿರುವವೆಂದು ವರದಿಯಾಗಿರುವದೋ ಆ ಘಟನೆಗಳಿಂದ ಪರಾವೃತ್ತವಾಗಬೇಕೆಂದು ಅನಂತರ ಗಾಂಧೀಜಿ ಬಿನ್ನವಿಸಿದರು. ಅಕ್ಷಮ್ಯ ಸಂಗತಿಗಳನ್ನು ಮಾಡುವದರಿಂದ ಧರ್ಮರಕ್ಷಣೆಯಾಗದು. ಪರಿಸ್ಥಿತಿಯನ್ನು ಸರಿಪಡಿಸಲು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಲು ಸರಕಾರಕ್ಕೆ ಅವರು ಅವಕಾಶವನ್ನುಂಟು ಮಾಡಬೇಕು.

ಮಸೀದೆಗಳಲ್ಲಿ ಮೂರ್ತಿಗಳು

ಮಂದಿರಗಳಾಗಿ ಮಾರ್ಪಡಿಸಲ್ಪಟ್ಟ ಮಸೂದೆಗಳಲ್ಲಿಯ ಮೂರ್ತಿಗಳನ್ನು ಸ್ಥಳಾಂತರಿಸುವದಕ್ಕೆ ಏಳು ದಿನಗಳ ನೋಟೀಸು ಕೊಟ್ಟು ಹೊರಡಿಸಿದ ಸರಕಾರೀ ಪ್ರಕಟನೆಯತ್ತ ಗಾಂಧೀಜಿ ಅನಂತರ ಹೊರಳಿದರು. ತಾವಾಗಿಯೆ ತೆಗೆಯದಿದ್ದರೆ ಪೋಲೀಸರೆ ಅವುಗಳನ್ನು ಸ್ಥಳಾಂತರಿಸುವರು. ಮಸೀದೆಗಳಿಗಾದ ಹಾನಿಯನ್ನು ಸರಕಾರವು ತುಂಬಿ ಕೊಡುವದಾಗಿ ಸರದಾರರು ಹೇಳಿರುವರು. ಆದರೆ ಗಾಂಧೀಜಿಯವರ ಅಭಿಪ್ರಾಯದಂತೆ ಸಾರ್ವಜನಿಕರೆ ಈ ಹಾನಿಯನ್ನು ತೆತ್ತಬೇಕು. ಭಕ್ತರು ವಿಧಾನಪೂರ್ವಕ ಮೂರ್ತಿ ಪ್ರತಿಷ್ಠಾಪನೆ ಮಾಡಿದಾಗಲೆ ಅದರಲ್ಲಿ ಸನ್ನಿಧಾನವುಂಟಾಗುವದು. ಒತ್ತಾಯದಿಂದ ಮಸೀದೆಗಳನ್ನು ವಶಪಡಿಸಿಕೊಳ್ಳುವದು ಹಿಂದೂ ಧರ್ಮಕ್ಕೆ ಕಲಂಕಪ್ರಾಯವಾದುದು. ಮಸೀದೆಗಳಲ್ಲಿಯ ಮೂರ್ತಿಗಳನ್ನು ತೆಗೆದು ಹಾಕಿ ಹಾನಿಯನ್ನು ತುಂಬಿ ಕೊಡುವದು ಹಿಂದುಗಳ ಕರ್ತವ್ಯ. ಯಾವುದೊಂದು ಮಸೀದೆಯು ಗುರುದ್ವಾರವಾಗಿ ಮಾರ್ಪಟ್ಟದ್ದು ನನ್ನ ಗಮನಕ್ಕೆ ಬಂದಿಲ್ಲ. ಶೀಖರು ಗುರುಗ್ರಂಥ ಸಾಹೇಬರನ್ನು ಪೂಜಿಸುತಿರುವರು. ಮಸೀದೆಯಲ್ಲಿ ಗ್ರಂಥಸಾಹೇಬರನ್ನು ಕೂಡಿಸುವದೆಂದರೆ ಅವರಿಗೆ ಅಪಮಾನವೇ ಸೈ.

ಮುಸಲ್ಮಾನನೊಬ್ಬನು ಅರೆಸುಟ್ಟ ಕುರಾಣವನ್ನು ಗಾಂಧೀಜಿ ಕಡೆಗೆ ತಂದಿದ್ದರು. ಅದನ್ನವರು ಒಂದು ಅರಿವೆಯಲ್ಲಿ ಸುತ್ತಿದ್ದರು. ತೋಂಸಿ ಅಳುತ್ತ ಅವರ ಕಡೆಗೆ ಬಂದು ಅವನ್ನು ಏನೂ ಮಾತಾಡದೆ ಹೊರಟು ಹೋದನು. ಈ ರೀತಿ ಕುರಾಣಕ್ಕೆ ಅಪಮಾನ ಎಸಗಿದವನು ತನ್ನ ಧರ್ಮಕ್ಕೇ ಅಪಮಾನ ಮಾಡಿರುವನು. ತಮ್ಮ ದೇಶ ಮತ್ತು ಧರ್ಮಕ್ಕೆ ಹಾನಿಯನ್ನುಂಟು ಮಾಡುವ ಪ್ರವೃತ್ತಿಯನ್ನು ಹಿಂದುಗಳು ಮತ್ತು ಶೀಖರು ಬಿಟ್ಟುಗೊಡಬೇಕೆಂದು ಬಿನ್ನವಿಸುವದಾಗಿ ಗಾಂಧೀಜಿ ನುಡಿದರು.

ಅ. ಭಾ. ಕುಷ್ಠನಿವಾರಕರ ಸಭೆ

ಅಕ್ಟೋಬರ ಅಂತ್ಯದಲ್ಲಿ ವರ್ಧಾದಲ್ಲಿ ಅ. ಭಾ. ಕುಷ್ಠನಿವಾರಕರ ಸಭೆ ಸೇರಿತು. ರಾಷ್ಟ್ರದ ರಚನಾತ್ಮಕ ಕಾರ್ಯಕ್ರಮದಲ್ಲಿ ಕುಷ್ಠನಿವಾರಣೆಯ ಕಾರ್ಯವನ್ನು ಗಾಂಧಿಯವರು ಸೇರಿಸಿದ್ದು ಎಲ್ಲರ ಗಮನವನ್ನು ಆ ವಿಷಯದತ್ತ ಕೇಂದ್ರೀಕರಿಸಿದೆ. ಕುಷ್ಠರೋಗದಿಂದ ಗುಣಹೊಂದಿದ ಪ್ರೊ. ಟಿ. ಎನ್ ಜಗದೀಶನ್ನರು ಈ ಕ್ಷೇತ್ರದಲ್ಲಿ ಬಹಳ ಉತ್ಸಾಹಿ ಕಾರ್ಯಕರ್ತರು; ಅವರು ಕಳೆದ ವರ್ಷ ಅ.ಭಾ. ಕುಷ್ಠನಿವಾರಕರ ಸಭೆ ಕರೆಯಬೇಕೆಂದು ಸಲಹೆ ಇತ್ತರು. ಈ ವಿಷಯವನ್ನು ಕಸ್ತೂರಬಾ ವಿಶ್ವಸ್ತ ಮಂಡಲದ ಸಲಹೆಗಾರ ವೈದ್ಯ ಸಭೆಯ ಎದುರು ಇಡಲಾಯಿತು. ಸಭೆಯ ಸದಸ್ಯರಾದ ಡಾ. ಗಿಲ್ಡರರು ಇದನ್ನು ಸ್ವಾಗತಿಸಿದರು. ಅದೇ ಕಾಲದಲ್ಲಿ ಸಿಂಧ ಸರಕಾರವು ಕುಷ್ಠರೋಗಿಗಳನ್ನು ಬಲತ್ಕಾರದಿಂದ ನಿರ್ವೀರ್ಯರನ್ನಾಗಿ ಮಾಡುವ ಸೂಚನೆಯೊಂದನ್ನು ಶಾಸನಸಭೆಯಲ್ಲಿ ಮಾಡಿದುದರ ಮೇಲೆ ಬಹಳ ಚರ್ಚೆನಡೆಯಿತು. ಸಾರ್ವಜನಿಕ ಆರೋಗ್ಯ ಶಾಖೆಯ ಅಧಿಕಾರಿಗಳಿಗೂ ಕೂಡ ಅಂಥ ಸಭೆಯು ಕೆಲ ಮಟ್ಟಿಗೆ ಮಾರ್ಗದರ್ಶನ ಮಾಡಬಲ್ಲದೆಂದು ಡಾ. ಗಿಲ್ಡರರು ಅಭಿಪ್ರಾಯ ಪಟ್ಟರು. ಮೇಯಲ್ಲಿ ಕಸ್ತೂರಬಾ ವಿಶ್ವಸ್ತ ಮಂಡಲದ ಪ್ರಾಂತೀಯ ಸಂಯುಕ್ತ ಸಭೆ ಜರುಗಿ ಅದರಲ್ಲಿ ಮಹಾರೋಗಿ ಸೇವಾ ಮಂಡಲವು ವರ್ಧಾದಲ್ಲಿ ಪರಿಷತ್ತನ್ನು ಕರೆಯಬೇಕೆಂದು ತೀರ್ಮಾನಿಸಲಾಗಿತ್ತು. ಅದಕ್ಕೆ ಗಾಂಧಿಯವರು ಹೋಗುವರೆಂದು ಆಶಿಸಲಾಗಿತ್ತು; ಆದರೆ ದೇಶದಲ್ಲಿಯ ಘಟನೆಗಳು ಹಾಗೆ ಮಾಡಗೊಡದಾದವು. ಕೇಂದ್ರದಲ್ಲಿ ಆರೋಗ್ಯ ಮಂತ್ರಿಗಳಾಗಿರುವ ರಾಜಕುಮಾರಿ ಅಮೃತ ಕುಂವರಿ ಕೂಡ ದಿಲ್ಲಿಯನ್ನು ಬಿಟ್ಟು ಹೊರಡಲಾರದಾದರು. ಮತ್ತು ಸಲಹೆಗಾರ ವೈದ್ಯ ಸಭೆಯ ಅಧ್ಯಕ್ಷರಾದ ಡಾ. ಜೀವರಾಜ ಮೇಥಾರವರು ಆರೋಗ್ಯ ಶಾಖೆಯ ಡಾಯರೆಕ್ಟರ ಜನರಲ್ಲರಾಗಿ ನಿಯಮಿಸಲ್ಪಟ್ಟುದರಿಂದ ಅವರೂ ಬರಲಾರರೆಂಬ ಅಂಜಿಕೆಯಿತ್ತು. ಪರಿಷತ್ತನ್ನು ಮುಂಬರಿಸಬೇಕೆಂಬ ಸಲಹೆ ಬಂದಿತು. ಆದರೆ ತಾರೀಕುಗಳನ್ನು ನಿರ್ಧರಿಸಲಾಗಿತ್ತು. ಮತ್ತು ದೇಶದ ನಾನಾ ಭಾಗಗಳ ಕುಷ್ಠನಿವಾರಕರ ಉತ್ಸಾಹ ಹೆಚ್ಚಿನದಿದ್ದು ಅದಕ್ಕೆ ತಣ್ಣೀರೆರೆಯಬಾರದೆಂದು ತಿಳಿಯಲಾಯಿತು. ಅದರ ಪ್ರಕಾರ ಮುಂಬರಿಸುವ ಯೋಜನೆಯನ್ನು ಬದಿಗಿಡಲಾಯಿತು. ಕೊನೆಯಲ್ಲಿ ಡಾ. ಜೀವರಾಜ ಮೇಥಾರವರು ಪರಿಷತ್ತಿಗೆ ಎರಡು ದಿನ ಹಾಜರಿದ್ದರು. ಡಾ. ಗಿಲ್ಡರರು ಒಂದು ದಿನ ಆಗಮಿಸಿದ್ದರು. ಮತ್ತು ನೂರು ಪ್ರತಿನಿಧಿಗಳು ಜಮಾಯಿಸಿದ್ದರು. ಅವರು ಚತುರ್ವರ್ಗಗಳಾಗಿ ವಿಭಜಿಸಲ್ಪಟ್ಟರು.

೧ ಸ್ವಯಂ ರೋಗಿಗಳಾಗಿದ್ದವರು.
೨ ಕುಷ್ಠನಿವಾರಣೆಯಲ್ಲಿ ತೊಡಗಿದ ವೈದ್ಯ ವರ್ಗದವರು.
೩ ಪ್ರಮುಖವಾಗಿ ರಚನಾತ್ಮಕ ಕಾರ್ಯದಲ್ಲಿ ತೊಡಗಿದ ಸಾಮಾನ್ಯ ಕೆಲಸಗಾರರು
೪ ಕೇಂದ್ರ ಮತ್ತು ಪ್ರಾಂತಗಳ ಪ್ರಾತಿನಿಧಿಕ ಆಡಳಿತಗಾರರು.

ಮಹಾರೋಗಿ ಸೇವಾ ಮಂಡಲದ ಪರವಾಗಿ ಪ್ರತಿನಿಧಿಗಳನ್ನು ಸ್ವಾಗತಿಸುತ್ತ, ಮಂಡಲದ ಅಧ್ಯಕ್ಷರಾದ ಶ್ರೀ ಜಾಜೂಜಿಯವರು ಭಾರತದಲ್ಲಿ ಕುಷ್ಠರೋಗ ಬಹಳ ಹೆಚ್ಚಿದ್ದು ಇನ್ನೂ ಹೆಚ್ಚುತ್ತಿದ್ದರೂ ಅದರ ವಿರುದ್ಧ ಯುಕ್ತ ಮುನ್ನೆಚ್ಚರಿಕೆ ತೆಗೆದುಕೊಳ್ಳುವ ಆವಶ್ಯಕತೆಯತ್ತ ಜನರನ್ನು ಎಚ್ಚರಿಸಲಿಲ್ಲ. ಅಲ್ಲದೆ ಈ ಸಮಸ್ಯೆಯನ್ನೆದುರಿಸಲು ಸರಕಾರ ಕೂಡ ಏನೂ ಮಾಡಿಲ್ಲ ಎಂದರು. ಕೆಲಸಗಾರರನ್ನು ಸಂಬೋಧಿಸಿ ಅವರು– “ನಾನು ಹೃತ್ಪೂರ್ವಕವಾಗಿ ನಿಮ್ಮನ್ನು ಬರಮಾಡಿಕೊಳ್ಳುತ್ತೇನೆ ಎಂಬುದರ ಬದಲು ನಾನು ನಿಮಗೆ ನಮ್ರನಾಗಿ ಬಾಗುತ್ತೇನೆ ಎಂದು ಹೇಳಬಯಸುತ್ತೇನೆ” ಎಂದರು. ಅವರ ಅವಿಶ್ರಾಂತ ಪ್ರಯತ್ನ ಮತ್ತು ಶೋಧಗಳಿಂದಾಗಿಯೇ ನಿರಾಶೆಗೆ ಬದಲು ಇಂದು ರೋಗಿಗೆ ಆಶೆಯುಂಟಾಗಿದೆ ಮತ್ತು ಸಾರ್ವಜನಿಕರಿಗೆ ಭಯ ಪಡದಿರಲು ಕಾರಣ ಸಿಕ್ಕಿದೆ. ಗ್ರಾಮೋದ್ಧಾರ ಕಾರ್ಯದಲ್ಲಿ ಹೇಗೆ ರಚನಾತ್ಮಕ ಕಾರ್ಯಕರ್ತರು ಕುಷ್ಠರೋಗದ ಹಾವಳಿಯನ್ನು ಹಳ್ಳಿಗಳಲ್ಲಿ ಕಂಡರು ಮತ್ತು ಆ ಕಾರಣದಿಂದ ಹೇಗೆ ಮಹಾರೋಗಿ ಮಂಡಲವನ್ನು ಸ್ಥಾಪಿಸಿದರು ಎಂಬುದನ್ನು ಶ್ರೀ ಜಾಜೂಜಿಯವರು ವಿವರಿಸಿದರು. ರಚನಾತ್ಮಕ ಕಾರ್ಯಕ್ರಮದಲ್ಲಿ ಕುಷ್ಠನಿವಾರಣೆಯನ್ನು ಗಾಂಧಿಯವರು ಸೇರಿಸಲು ಈ ಅನುಭವವೇ ಕಾರಣ

ಅನಂತರ ಮಹಾರೋಗಿ ಸೇವಾ ಮಂಡಲದ ವ್ಯವಸ್ಥಾಪಕರಾದ ಶ್ರೀ ಮನೋಹರ ದಿವಾಣಜಿಯವರ ಭಾಷಣದ ಸಾರಾಂಶವನ್ನೊಪ್ಪಿಸುತ್ತ ...

ಸಮ “ಗಾಂಧಿಯವರು ಹೇಳಿದಂತೆ ಇದೊಂದು ದಯೆ ಮತ್ತು ಸೇವೆಯ ಕಾರ್ಯ. ಅದರಿಂದ ಕುಷ್ಠನಿವಾರಣೆಯಾಗಬಹುದು, ಆಗದಿರಬಹುದು— ಆದರೆ ಅವರು ತಮ್ಮ ಸಹರೋಗಿಗಳ ಸೇವೆಗಾಗಿಯೇ ತಮ್ಮನ್ನು ವಿನಿಯೋಗಿಸಬಹುದು. ಕುಷ್ಠನಿವಾರಣೆಯು ಬರಿಯ ವೈದ್ಯಕೀಯ ಸಮಸ್ಯೆ ಯಲ್ಲ; ಅದೆಂದರೆ, ಜೀವನದಲ್ಲಿಯ ಆಕಾಂಕ್ಷೆಯನ್ನು ಆತ್ಮಾರ್ಪಣದ ಆನಂದಕ್ಕೆ ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆಯನ್ನು ಇತರರಿಗಾಗಿ ಮಾಡುವ ನಿಸ್ವಾರ್ಥ ಸೇವೆಗೆ ಪರಿವರ್ತಿಸುವುದು. ರೋಗಿಯೊಬ್ಬನ ಜೀವನವಷ್ಟೇ ನೀವು ಬದಲಿಸಬಲ್ಲಿರಾದರೆ ಅಲ್ಲವೆ ಅವನ ಪ್ರಕಾರ ಇಡೀ ಜೀವನದ ಬೆಲೆಯನ್ನು ಪರಿವರ್ತಿಸಬಲ್ಲಿರಾದರೆ ನೀವು ಹಳ್ಳಿಯನ್ನೂ ದೇಶವನ್ನೂ ಬದಲಿಸಬಲ್ಲಿರಿ. ಆದುದರಿಂದ ಇದನ್ನು ರಚನಾತ್ಮಕ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ.” ಎಂದು ನುಡಿದರು.

ಪರಿಷತ್ತನ್ನು ಉದ್ಘಾಟಿಸುತ್ತ ಕಳೆದ ೭೫ ವರ್ಷಗಳಿಂದ ಇಡೀ ಜಗತ್ತಿನಲ್ಲಿ ಕುಷ್ಠಪೀಡಿತರ ಸೇವೆ ಮಾಡಿದ ಕುಷ್ಠಸಮಿತಿಗೆ ಶ್ರೀ ಧೆಕ್ಕರ ಬಾಪರು ಹೆಚ್ಚಿನ ಧನ್ಯವಾದಗಳನ್ನರ್ಪಿಸಿದರು. ಕಳೆದ ೨೦ ವರ್ಷಗಳಿಂದ ಅದರ ವಾರ್ಷಿಕ ವರದಿಗಳನ್ನು ತಾವು ಓದಿರುವವರಾಗಿಯೂ ಆ ಕೆಲಸವನ್ನು ಭಾರತೀಯರೇ ಸ್ವತಃ ಪ್ರಾರಂಭಿಸುವ ಸುದಿನವನ್ನು ಹಾರೈಸುತ್ತಿದ್ದುದಾಗಿಯೂ ಅವರು ಹೇಳಿದರು; ಅಂಥ ದಿನ ಕೊನೆಗೆ ಬಂದಿತೆಂದು ತಮಗೆ ಸಂತೋಷವಾಯಿತೆಂದರು. ಒಂದೇ ಒಂದು ಸಾಮಾನ್ಯ ಸಮಸ್ಯೆಯನ್ನು ಬಿಡಿಸಲು ತಜ್ಞರೂ ಸಾಮಾನ್ಯರೂ ಒಟ್ಟು ಸೇರಿ ಕೆಲಸ ಮಾಡತೊಡಗಿದ ಜನಪ್ರಿಯ ಪರಿಷತ್ತು ಬಹುಶಃ ಅದೇ ಮೊದಲನೆಯದೆನ್ನಬಹುದು. ಕುಷ್ಠವು ಗುಣಪಡಿಸಲಾರದ ರೋಗವಲ್ಲ; ಅಲ್ಲದೆ ಕೇವಲ ನೂರಕ್ಕೆ ೨೦ ರಷ್ಟು ಜನ ರೋಗ ಮಾತ್ರ ಸಾಂಕ್ರಾಮಿಕ ಎಂಬ ಮೂಲಭೂತಸಂಗತಿಗಳನ್ನು ಜನರಿಗೆ ತಿಳಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ಅವರ ಹೇಳಿಕೆಯ ಪ್ರಕಾರವೆ ಕಸ್ತೂರಬಾ ವಿಶ್ವಸ್ತ ಮಂಡಲದ ಕರಡಿನಲ್ಲಿ ಕುಷ್ಠ ಹಿಡಿದ ಹೆಂಗಸರು ಮಕ್ಕಳ ಸೇವೆಯನ್ನು ಸೇರಿಸಲಾಗಿತ್ತು ಅದು ಕೆಲವರನ್ನು ಅಚ್ಚರಿಗೊಳಿಸಿ ಮತ್ತೆ ಕೆಲವರನ್ನು ಅಂಜಿಸಿತು.

ಕುಷ್ಠವು ಕ್ಷಯದಂತೆ ನಗರದ ರೋಗವಲ್ಲ; ಅದೊಂದು ಹಳ್ಳಿಯ ರೋಗ. ಆದುದರಿಂದ ಅದನ್ನು ಹಳ್ಳಿಗಳಲ್ಲೆ ಚಿಕಿತ್ಸೆಗೆ ಗುರಿಪಡಿಸಬೇಕು. ರೋಗಿಗಳಿಗೆ ಇನ್ನೂ ಹೆಚ್ಚು ಸಂಸ್ಥೆಗಳು ರಕ್ಷಣಾಲಯಗಳು, ಆಸ್ಪತ್ರೆಗಳು ಮತ್ತು ಔಷಧಾಲಯಗಳು ದೊರಕುವ ಅಗತ್ಯವಿದೆ ಕುಷ್ಠನಿವಾರಣ ಸಮಿತಿ, ಬ್ರಿಟಿಶ ಸಾಮ್ರಾಜ್ಯ ಕುಷ್ಠ ನಿವಾರಣ ಸಂಘ ಮುಂತಾದವುಗಳಿಗೆ ಗ್ರಾಂಟು ಮತ್ತು ರಕ್ಷಣೆಗಳನ್ನು ಕೊಡುವುದರಿಂದಲೇ ಸರಕಾರಗಳು ತೃಪ್ತವಾಗಿ ಕುಳಿತು ಬಿಡಬಾರದು, ಅವೇ ಸ್ವತಃ ಆ ಕಾರ್ಯವನ್ನು ಅಸ್ಥೆಯಿಂದ ಕೈಗೆ ತೆಗೆದುಕೊಳ್ಳಬೇಕು. ಸಣ್ಣ ಹಳ್ಳಿಗಳ ಕುಷ್ಠ ಕೇಂದ್ರಗಳಲ್ಲಿ ಕೆಲಸ ಮಾಡಲು ಅನೇಕ ವೈದ್ಯಕೀಯ ಮತ್ತು ತದಿತರ ಕೆಲಸಗಾರರ ಅವಶ್ಯಕತೆಯಿದೆ ಕೆಲಸಗಾರರನ್ನು ತಯಾರು ಮಾಡುವ ಸಂಘಗಳ ಅಧಿಕಾರೀತರವಾಗಿರಬೇಕು;ಸರಕಾರಗಳು ಅಗತ್ಯಬಿದ್ದಾಗ ಅವಕ್ಕೆ ಸಲಹೆ ಸಹಾಯಗಳನ್ನು ಕೊಡುತ್ತಿರಬೇಕು.

ಕುಷ್ಠ ನಿವಾರಣಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಡೋನಾಲ್ಡ ಮಿಲ್ಲರರು ಸಮಿತಿ ಮಾಡಿದ ಕಾರ್ಯವನ್ನು ದಯೆಯಿಂದ ಹೆಸರಿಸಿದ್ದಕ್ಕಾಗಿ ಪರಿಷತ್ತಿನ ನಿಮಂತ್ರಕರಿಗೆ ಕೃತಜ್ಞತೆಯನ್ನರ್ಪಿಸಿ, ಇಂತೆಂದರು: “ಸಮಿತಿಯ ಪರವಾಗಿ ನಾನು ಈ ಪರಿಷತ್ತಿನ ಮೂಲಕ ನಿಃಸಂದೇಹವಾಗಿ ಅದ್ವಿತೀಯವಾದ ಭಾರತೀಯ ಕುಷ್ಠನಿವಾರಣ ಸಂಘವನ್ನು, ಸ್ಥಾಪಿಸಲು ಸ್ಥಳೀಯ ಪ್ರಯತ್ನಗಳನ್ನು ಮಾಡುತ್ತಿರುವುದಕ್ಕೆ ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತವನ್ನು ಬಯಸುತ್ತೇನೆ.

“ಈ ಬೇಗ್ಗೆ ಮಹಾಸತ್ಯಗಳ ಭಕ್ತರು ನಾಸ್ತಿಕವಾದದ ಪ್ರಬಲ ಪ್ರವಾಹಗಳ ವಿರುದ್ಧ ಕಾದಬೇಕಾಗಿರುವ ವಿಷಯವನ್ನು ಶ್ರೀ ಜಾಜೂಜಿಯವರೊಡನೆ ಮಾತನಾಡಿದೆನು. ನಮ್ಮ ಶ್ರದ್ಧೆ ತತ್ವ ಮತ್ತು ಧ್ಯೇಯಗಳಿಗೆ ಬಿಡದೆ ಅಂಟಿಕೊಂಡಿರುವಷ್ಟು ಪ್ರಬಲವಿದ್ದರೆ ನಾವು ಮೇಲು ಮಂದರಗಳನ್ನು ಮಗುಚಬಹುದು ಎಂದು ಶ್ರೀ. ಜಾಜೂಜಿಯೆಂದರು. ಮತ್ತು ಅದು ನಿಜ. ನೆಟ್ಟಮೊದಲು ರಾಗದ್ವೇಷ ಮತ್ತು ಔದಾಸೀನ್ಯಗಳ ವಿರುದ್ಧವಾಗಿ ಸಾಕಷ್ಟು ಶ್ರದ್ಧೆ ಬಂದ ಮುನ್ನುಗ್ಗಿ ಹೋರಾಡಲು ಬಲ್ಲದೊಂದು ಸಂಘವಿದ್ದರೂ ಸಾಕು: ಈಗ ಇಷ್ಟರಮಟ್ಟಿಗೆ ಸ್ನೇಹ ಮತ್ತು ಸಹಾಯಗಳನ್ನು ಬೇಕೆನ್ನುವವರಿಗೆ ಹೊಸ ಜೀವ ಮತ್ತು ಆಶೆಯನ್ನು ತರುವ ದೊಡ್ಡ

ಚಳವಳಿಯ ಅಂತ್ಯದಲ್ಲಿ [illegible] ಆಗದು ಇತ್ತು. [illegible] ನಾವು ಭಾರತವನ್ನು ಬಿಟ್ಟು ಹೋದರೆ [illegible] ಅಂತ್ಯದಲ್ಲಿ [illegible] ದಾಣದೆ; ಭಾರತದಲ್ಲಿಯ ಕುಷ್ಠನಿವಾರಣೆ ಅಲ್ಲಿಯ ಗೆಳೆಯರು [illegible] ನಾವು ಬಹಳ ಮೆಚ್ಚಿಕೊಂಡೆ. [illegible] ಒಂದು ರಾತ್ರಿ ಕಳೆದ ಮೇಲೆ ನನಗೆ [illegible] ಕೈಗೆ ನನ್ನ ಸಹಾಯವನ್ನು ಕೇಳುತ್ತಿದ್ದರು. ನನ್ನ ಮನೆಯನ್ನು ಬಿಟ್ಟ [illegible]. ಭಾರತವು ಮನೆಯನ್ನು [illegible] ಇದು ನನ್ನ ಅಲ್ಪ ಕಾಣಿಕೆ [illegible] ಮನೆಯಾದ [illegible] ತಮ್ಮ ಸಹಾಯದೊಡನೆ— ಈಗ ನಮಗೆ ಮನೆ [illegible] ಆಗಿದೆ; ಮತ್ತು ಇದು ಭಾರತದಲ್ಲಿ ನಮ್ಮ [illegible] ತ್ರಿದೂಪದವರಿಗೆ ಕಾಣಿಕೆ— ಎಂದು ಬರೆದು ಕಳುಹುತ್ತಿದ್ದರು. ಈ ದಿನ ಸಂದರ್ಭ ಸಭೆಯನ್ನು ಕಂಡರೆ ಆ ಗೆಳೆಯರು ಸಂತೋಷಪಡುವರು. ಇವರ ಮತ್ತು ಸಮಿತಿಯ ಇನ್ನಿತರ ಗೆಳೆಯರ ಪರವಾಗಿ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಪ್ರೇಮವೆಂಬುದೊಂದು ಅಂತರಾಷ್ಟ್ರೀಯ ವಸ್ತು; ಅಲ್ಲದೆ ಅತಿರಾಷ್ಟ್ರೀಯ ವಸ್ತು; ಮತ್ತು ರಚನಾತ್ಮಕ ಸೇವೆಯಲ್ಲಿ ತೋರಿದ ಪ್ರೇಮದಿಂದ ಈ ಕಲಹಾಂತರದಿಂದ ಬಂದ ಸಮಸ್ಯೆಯನ್ನು ಬಿಡಿಸಬಹುದು; ಆಗ ಬರುವ ಕಾಲದಲ್ಲಿ ಭಾರತದ ಸುಂದರವಾದ ಹೆಸರು ಇನ್ನೂ ಹೆಚ್ಚು ಸುಪ್ರಭವಾಗಿ ಬೆಳಗುವುದು!”

ವೈದ್ಯಕೀಯ ಚಿಕಿತ್ಸೆಯು ಮತ್ತು ಸಾಮಾನ್ಯ ರಕ್ಷಣೆಗಳಲ್ಲದೆ ರೋಗಿಗಳಿಗೆ ಯೋಗ್ಯವಾದದೊಂದು ಬಗೆಯ ಸಾಮಾಜಿಕ ಜೀವನವನ್ನು ಒದಗಿಸಬೇಕೆಂಬುದನ್ನು ಶ್ರೀ ಕಾಕಾಸಾಹೇಬ ಕಾಲೇಲಕರರು ಒತ್ತಿ ಹೇಳಿದರು. ರೋಗಿಯನ್ನು ಕರೆತಂದ ಬಳಿಕ ಅವನ ಉಪಜೀವಿಗಳನ್ನು ನೋಡಿಕೊಳ್ಳಲು ವ್ಯವಸ್ಥೆ ಮಾಡಬೇಕೆಂದು ಅವರು ನೆನಪು ಮಾಡಿಕೊಟ್ಟರು. ಸರ್ವಸಾಮಾನ್ಯ ಸಮಾಜ ಜೀವನವನ್ನು ಬೆಳಸಿಕೊಳ್ಳಲಾಗುವಂತೆ ಸ್ತ್ರೀಪುರುಷರಿಗೆ ಮಿಶ್ರಗೃಹಗಳಿರಬೇಕೆಂದು ಅವರು ವಾದಿಸಿದರು. ಜಾತಿ ಧರ್ಮಗಳ ವ್ಯತ್ಯಾಸಗಳನ್ನು ಅಳಿಸಬೇಕು. ರೋಗಿಗಳು ತಮ್ಮದೇ ಆದ ಒಂದು

ಜಾತಿಯನ್ನು [illegible] ಒಂದು ಧರ್ಮವನ್ನು [illegible]

ಆದು ಮನುಷ್ಯನ [illegible] ಅಂತರ [illegible] ಕಲ್ಪಿಸಬೇಕೆಂದು ಅವರು [illegible]

ಗುಣಪಡಿಸಲು [illegible] ರೋಗಿಗಳು [illegible] ಅವನ್ನು [illegible] ಕೊಡುವುದು [illegible] ಕೊಡುವರು ತಮ್ಮ ಕರ್ತವ್ಯ [illegible] ಒಂದು ಹೊಸ ಮತ್ತು [illegible] ೧೦ ಎಂದರು. ಈ [illegible] ವೈದ್ಯಕೀಯ [illegible] ರಕ್ಷಣೆಗಳ [illegible] ಬೇಕು.

ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಾ. [illegible] ಮೇಥಾರವರು ಈ [illegible] ವಿವೇಚಿಸಿದರು. ಆಗ ೫೦ ಲಕ್ಷ [illegible] ೧೦ ಲಕ್ಷ [illegible] ಇವರಲ್ಲಿ ೨ ಲಕ್ಷ [illegible] ಸಾಂಕ್ರಾಮಿಕ. ಅವರಲ್ಲಿ [illegible] ವಾಗ ಇದನ್ನು [illegible] ರೋಗದ ಕುಷ್ಠ [illegible] ಅವಶ್ಯಕತೆಯನ್ನು ಒತ್ತಿ [illegible] ಅವುಗಳಲ್ಲಿ [illegible] ರೋಗವನ್ನು [illegible] ಬಗ್ಗೆ ವೈಜ್ಞಾನಿಕ ಜ್ಞಾನ [illegible] ಸಾಂಕ್ರಾಮಿಕ ರೋಗಗಳನ್ನು [illegible] ಗುಣಪಡಿಸಲಿಕ್ಕೆ [illegible] ಕಾರ್ಯಗಳಲ್ಲಿ ಭಾಗವಹಿಸುವುದು, [illegible] ಮನೆಯಲ್ಲಿ ವಾಸಿಸುವುದು, ರೋಗದ [illegible] ಮಕ್ಕಳ ಅವರಿಂದ [illegible]

[೧೨ನೇ ಪುಟಕ್ಕೆ]





ಮುಂಬಯಿಯಲ್ಲಿ ಡಾ. ರಾಜೇಂದ್ರ ಪ್ರಸಾದರು [illegible] ಭಾರತ [illegible] (ಮೇಲೆ) [illegible] ಮುಂಬಯಿಯ [illegible] (ಕೆಳಗೆ) [illegible]

ಒಡನೆ ಕರ್ನಾಟಕ ಪ್ರಾಂತವಾಗಬೇಕು

ಆಂಧ್ರ ತಮಿಳುನಾಡುಗಳೊಡನೆ ತಳಕು ಹಾಕಬೇಡಿರಿ

ಮುಂದಾಳುಗಳಿಗೆ ಮದ್ರಾಸ ಕನ್ನಡ ಮುಂದಾಳುಗಳ ಮನವಿ

ಮದ್ರಾಸ ಕರ್ನಾಟಕದ ಎಲ್ಲ ಶಾಸನ ಸಭಾಸದಸ್ಯರು ಕಾಂಗ್ರೆಸ ಮತ್ತು ಘಟನಾ ಸಮಿತಿಯ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದ ಪಂಡಿತ ಜವಾಹರಲಾಲ, ಸರದಾರ ಪಟೇಲ ಮಹಾತ್ಮಾ ಗಾಂಧಿಯವರಿಗೂ ಸಂಯೋಜಿಸಿ ಒಂದು ಮನವಿಯನ್ನು ಕಳಿಸಿ ಕರ್ನಾಟಕ ಪ್ರಾಂತೀಕರಣವನ್ನು ಒಡನೆ ಕೈಕೊಳ್ಳುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಅವರ ಮನವಿಯನ್ನು ಹೀಗೆ ಸಂಗ್ರಹಿಸಬಹುದು:

ಭಾರತದ ಮುಖ್ಯಮಂತ್ರಿಗಳು ಶಾಸನ ಸಭೆಯಲ್ಲಿ ಆಂಧ್ರವನ್ನು ಪ್ರತ್ಯೇಕ ಪ್ರಾಂತವಾಗಿ ಘಟನೆಯಲ್ಲಿ ಸೇರಿಸಬಹುದೆಂದೂ ಕರ್ನಾಟಕ ಮಹಾರಾಷ್ಟ್ರಗಳ ನಿರ್ಮಾಣ ಅಷ್ಟು ಸುಗಮವೂ ವ್ಯವಹಾರ್ಯವೂ ಅಲ್ಲವೆಂದೂ ಸಾರಿದುದನ್ನು ನೋಡಿ ನಮಗೆ ಬಹಳ ಖೇದವೂ ನಿರಾಶೆಯೂ ಆಗಿದೆ. ಸ್ವರಾಜ್ಯ ದೊರೆತೊಡನೆ ಭಾಷಾನ್ವಯ ಪ್ರಾಂತ ರಚನೆಯನ್ನು ಮೊಟ್ಟಮೊದಲು ಕೈಕೊಳ್ಳಲಾಗುವದೆಂದು ಇಪ್ಪತ್ತು ವರ್ಷಗಳಿಂದ ಸಾರುತ್ತ ಬಂದು ಇಂಥ ವಕ್ತವ್ಯ ಹೊರಬಿದ್ದುದು ವಿಷಾದಕರ. ೧೯೩೭ರಲ್ಲಿ ಸದ್ಯದ ಮುಖ್ಯ ಮಂತ್ರಿಗಳೇ ಅಧ್ಯಕ್ಷರಾಗಿದ್ದ ನೆಹರೂ ಸಮಿತಿ ಉಳಿದವುಗಳಿಗಿಂತ ಕರ್ನಾಟಕದ ಬೇಡಿಕೆ ಹೆಚ್ಚು ಮಾನ್ಯವೆಂದು ಒಪ್ಪಿಕೊಂಡಿತ್ತು. ೧೯೪೫ ಜನವರಿಯಲ್ಲಿ ಸರದಾರ ಪಟೇಲರು ಕರ್ನಾಟಕ ಏಕೀಕರಣ ಪರಿಷತ್ತಿನ ಮುಂಬಯಿ ಅಧಿವೇಶನವನ್ನು ಪ್ರಾರಂಭಿಸಿ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಬೆಂಬಲ ಕೊಟ್ಟರು. ಕಾಂಗ್ರೆಸ್ಸೇ ಈಗ ಸುಮಾರು ೩೦ ವರ್ಷಗಳಿಂದ ಇಂಥ ಪ್ರಾಂತದ ತಳಹದಿಯ ಮೇಲೆಯೇ ಕೆಲಸ ಮಾಡುತ್ತಿದೆ. ೧೯೩೮ರಲ್ಲಿ ಮತ್ತು ಮತ್ತೆ ಇದೇ ವರ್ಷದಲ್ಲಿ ಮದ್ರಾಸ ಮುಂಬಯಿ ಶಾಸನ ಸಭೆಗಳು ಕರ್ನಾಟಕ ಪ್ರತ್ಯೇಕ ಪ್ರಾಂತವಾಗಬೇಕೆಂದು ಒತ್ತಾಯಗೊಳಿಸುವ ಠರಾವುಗಳನ್ನು ಸ್ವೀಕರಿಸಿವೆ.

ಅಂದರೆ ಕರ್ನಾಟಕದ ಅವಶ್ಯಕತೆ ಆಂಧ್ರ ಮಹಾರಾಷ್ಟ್ರಗಳಿಗಿಂತ ಹೆಚ್ಚಿನದೆಂದು ವಿವರಿಸುತ್ತ ಮನವಿ ಹೀಗೆ ಹೇಳುತ್ತದೆ: ಮದ್ರಾಸ ಪ್ರಾಂತದಲ್ಲಿ ಆಂಧ್ರದ ಹನ್ನೆರಡು ಜಿಲ್ಲೆಗಳಿದ್ದು ಶಾಸನ ಸಭೆಯಲ್ಲೂ ಮಂತ್ರಿ ಮಂಡಲದಲ್ಲೂ ಆಂಧ್ರರು ಬಹುಸಂಖ್ಯಾತರಾಗಿರುವುದರಿಂದ ಅವರ ದನಿ ಕೇಳದಿರುವದಿಲ್ಲ. ಮುಂಬಯಿ, ಮಧ್ಯಪ್ರಾಂತ, ಹೈದರಾಬಾದುಗಳಲ್ಲಿ ಮಹಾರಾಷ್ಟ್ರೀಯರಿಗೂ ಇದೇ ಮಾತು ಅನ್ವಯಿಸುತ್ತದೆ. ಅವರಿಬ್ಬರೂ ಎಲ್ಲಿಯೂ ಅತ್ಯಲ್ಪ ಸಂಖ್ಯಾತರಲ್ಲ.

ಆದರೆ ಕರ್ನಾಟಕದ ಪರಿಸ್ಥಿತಿ ಮಾತ್ರ ಅತಿ ವಿಷಮವಾಗಿದೆ. ಅದು ಮುಂಬಯಿ, ಮದ್ರಾಸ, ಕೊಡಗು ಇವೆಲ್ಲ ಪ್ರಾಂತಗಳಲ್ಲಿ ಅಲ್ಪ ಸಂಖ್ಯಾತವಾಗುವಂತೆ ಹರಿದು ಹಂಚಿಹೋಗಿದೆ. ಅಲ್ಲದೆ ಅನೇಕ ಸಂಸ್ಥಾನಗಳಲ್ಲಿಯೂ ಅದು ಹಂಚಿಹೋಗಿದೆ. ಪರಿಣಾಮವಾಗಿ ಶಾಸನ ಸಭೆಗಳಲ್ಲಿ ಮಂತ್ರಿಮಂಡಲಗಳಲ್ಲಿಯೂ ಕನ್ನಡಿಗರ ದನಿಯನ್ನು ಕೇಳುವವರೇ ಇಲ್ಲವಾಗಿದೆ. ಇದರಿಂದ ಹಾನಿಯುಂಟಾಗಿ ಕೊಳ್ಳೇಗಾಲ, ಬಳ್ಳಾರಿ, ಮುಂತಾದ ಗಡಿ ಪ್ರದೇಶದ ಕನ್ನಡ ಭಾಗಗಳ ಜನರು ತಮಗೆ ಬೇಡದೆ ತೆಲಗು, ತಮಿಳು ಭಾಷೆಗಳಲ್ಲಿ ವ್ಯವಹರಿಸಬೇಕಾಗಿ ಕನ್ನಡತನವೇ ಹೋಗುತ್ತಿದೆಯೆಂದು ಮನವಿ ಹೇಳುತ್ತದೆ. ಆಂಧ್ರ ಪ್ರತ್ಯೇಕ ಪ್ರಾಂತವಾದರಂತೂ ಬಾಕಿ ಉಳಿದ ಮದ್ರಾಸಿನ ತಮಿಳು ಪ್ರಧಾನ ರಾಜ್ಯದಲ್ಲಿ ಕನ್ನಡ ಜನರ ನಿಸ್ಸಹಾಯ ಪರಿಸ್ಥಿತಿಗೆ ಕೊನೆಯೇ ಇಲ್ಲದಾಗುವದು. ನಿಜವಾಗಿ ತೆಲುಗರಿಗಾದರೂ ತಮಿಳರಿಗಾದರೂ ಅನ್ಯಭಾಷಾ ಭಾಗಗಳೊಡನೆ ತಳಕು ಹಾಕಿಕೊಳ್ಳುವ ಅಭಿಲಾಷೆ ಇಲ್ಲ. ಅದರಿಂದ ಮದ್ರಾಸಿನ ಕನ್ನಡ ಭಾಗವನ್ನು ಆಂಧ್ರ ಅಥವಾ ತಮಿಳು ಪ್ರಾಂತಕ್ಕೆ ಸೇರಿಸುವದು ಇಬ್ಬರಿಗೂ ಹಿತವಲ್ಲ.

ಹೀಗೆ ಮನವಿಯು ಆಂಧ್ರ, ಒರಿಸ್ಸಾ, ಸಿಂಧದಂಥ ಚಿಕ್ಕ ಪ್ರಾಂತಗಳಿಗೆ ಸ್ವತಂತ್ರ ಅಸ್ತಿತ್ವ ಕೊಡಲು ಕಾಂಗ್ರೆಸ್ಸಿಗೆ ಆಕ್ಷೇಪವಿಲ್ಲವಾಗಿ ಕನ್ನಡಿಗರು ಬೇಡಿದ ಕರ್ನಾಟಕ ಪ್ರಾಂತವನ್ನು ನಿರ್ಮಿಸುವದನ್ನು ವಿಳಂಬ ಮಾಡುತ್ತ ಹೋಗಬಾರದೆಂದು ಹೇಳಿದ್ದಾರೆ. ಹೀಗೆ ಮಾಡಿದರೆ ಜನರು ಅದನ್ನು ಕಾಂಗ್ರೆಸ್ಸು ಅಧಿಕಾರದೊಡನೆ ಮೇಲೆ ಕನ್ನಡ ಪ್ರತ್ಯೇಕತೆಯನ್ನು ಯಾಕೋ ಮೂಲೆಗೆ ತಳ್ಳುತ್ತಿದೆಯೆಂದು ಶಂಕಿಸಲು ಕಾರಣವಾಗುವದು.

ಚಿಂತೆಯ ಬಗೆಗೆ ಚಿಂತೆ !

ಪಾಶ್ಚಾತ್ಯ ಜಗತ್ತಿನಲ್ಲಿಂದು ಮನಃಶಾಸ್ತ್ರದ ಪ್ರಭಾವ ಎಲ್ಲೆಲ್ಲೂ ಹರಡಿದೆ. ಪ್ರತಿಯೊಬ್ಬನೂ ತನಗೇನಾದರೂ ಚಿತ್ತಪ್ರಕೋಪ ಉಂಟಾದರೆ, ದುಃಸ್ವಪ್ನ ಬಿದ್ದರೆ, ಸರಿ ನಿದ್ರೆಯಿಲ್ಲದಾದರೆ, ಹೆಂಡತಿಯೊಡನೆ ಜಗಳಾಡಿದರೆ ಮಕ್ಕಳತ್ತ ಕೆರಳಿದರೆ, ತನಗೆ ಮಾನಸಿಕ ರೋಗವಿದೆಯೆಂದು ತಿಳಿದುಕೊಂಡು ಹತ್ತಿರದ ಒಬ್ಬ ಮನಃಶಾಸ್ತ್ರಜ್ಞನತ್ತ ಓಡುವುದು ರೂಢಿಯಾಗಿ ಬಿಟ್ಟಿದೆ. ಚಿತ್ತಕ್ಕೆ ಅಲ್ಪ ಸ್ವಲ್ಪ ಅಸ್ವಾಸ್ಥ್ಯವುಂಟಾದರೆ, ತೊಂದರೆಯೆನಿಸಿದರೆ ಅದಕ್ಕಾಗಿ ತಲೆ ಕೆರೆದುಕೊಂಡು ಗಡಿಬಿಡಿಯಿಂದ ಮನಃಶಾಸ್ತ್ರದ ಆಸ್ಪತ್ರೆಗೆ ಹೋಗುವುದೊಂದು ಹುಚ್ಚೇ ಆಗಿಬಿಟ್ಟಿದೆ. ಮಗು ಹಟ ಮಾಡಿದರೆ ಅದನ್ನು 'ಸಮಸ್ಯಾಶಿಶು' (Problem child) ಎಂದು ತಾಯಿ ನೂರೆಂಟು ಮನಃ ಶಾಸ್ತ್ರದ ಹೊತ್ತಿಗೆಗಳನ್ನು ತಿರುವಿ ಹಾಕುವಳು ಇನ್ನೊಂದು ಮನೋವಿಶ್ಲೇಷಣ ಚತುರರಾದ ಡಾ. ಆಲ್ಬರ್ಟ್ ಕಾಕ್ಸ್ ವೇಸಲದು ನಗುತ್ತಾರೆ.

ಈ ಹುಚ್ಚಿಗೆ ಮನಃಶಾಸ್ತ್ರ ಚಿಕಿತ್ಸೆಗೆ ಅತಿ ಪ್ರಾಧಾನ್ಯ ಕೊಟ್ಟದ್ದೇ ಕಾರಣ. ಅಲ್ಲದೆ, ಎಲ್ಲರೂ ತಾನೂ ಒಬ್ಬ ಮನಃಶಾಸ್ತ್ರಿಯೆಂದು ತಲೆಸರಿಯಿರುವ ಮನುಷ್ಯನಿಗೂ ಅಲ್ಪ ಅಸ್ವಾಸ್ಥ್ಯಕ್ಕೆಲ್ಲ ಮಾನಸಿಕ ವ್ಯಗ್ರತೆಯೇ (Mental disorder) ಕಾರಣವೆಂದು ತಲೆಕೆಡಿಸುವದೂ ಜಾಸ್ತಿಯಾಗಿದೆ. ಮತ್ತು ಮನಃಶಾಸ್ತ್ರದ ಬಗ್ಗೆ ನೂರಾರು ಪುಸ್ತಕಗಳು, ಆಕಾಶವಾಣಿ ಭಾಷಣಗಳು, ಪತ್ರಿಕೆಗಳು, ಸಿನೆಮಾಗಳು ಅವಿಶ್ರಾಂತವಾಗಿ ಅತಿ ಪ್ರಚಾರ ಮಾಡುತ್ತಿರುವದೂ ಒಂದು ಮಹತ್ವದ ಕಾರಣ. 'ಕತ್ತಲಲ್ಲಿ ಕಥಾನಾಯಿಕೆ", 'ಮಂತ್ರಮುಗ್ಧೆ', 'ವಿದ್ಯುಚ್ಚಾಲ' ಮುಂತಾದ ಚಲಚ್ಚಿತ್ರಗಳನ್ನು ಕಾಣದವರಿಲ್ಲ. ಈ ಎಲ್ಲವುಗಳಿಂದ ವ್ಯಕ್ತಿಗಳು ತಮ್ಮ ಬಗ್ಗಲ್ಲದೆ ತಮ್ಮ ರಾಣೀಸಾಹೇಬರ ಪ್ರೇಮ ಲೀಲೆಯ ಬಗ್ಗೆ ಮನೋವಿಶ್ಲೇಷಣ ಮಾಡಹೋಗಿ "ಕೀಲೋತ್ಪಾಟನ ವಾನರಃ" ಎಂಬಂತಾಗುತ್ತಾರೆ.

ಪತ್ರಿಕೆಯ ಗ್ರಂಥ ಶಾಸ್ತ್ರಿಗಳುಕೂಡ— ೫ ಮತ್ತು ೧೫ ವರುಷಗಳ ನಡುವಣ ಮಕ್ಕಳಲ್ಲಿ ನೂರಕ್ಕೆ ೩ ರಷ್ಟು ನಡತೆಯಲ್ಲಿ ವಕ್ರವಾಗುತ್ತಾರೆ; "೮೦ ಲಕ್ಷ ಅಮೇರಿಕನ್ನರು ಮನೋರೋಗಗ್ರಸ್ತರಿದ್ದಾರೆ; " ; "೭ ಲಕ್ಷ ೫೦ ಸಾವಿರ ಜನಗಳನ್ನು ಮನೋರೋಗದ ಕಾರಣದಿಂದ ಮಿಲಿಟರಿಗೆ ಸೇರಿಸಿಕೊಳ್ಳಲಾಗಲಿಲ್ಲ"—ಎಂಬಂತಹ ಹಲವಾರು ಅದ್ಭುತಗಳನ್ನು ಪ್ರಕಟಿಸುವುದರಿಂದಲೂ ಜನರು ಮರುಳಾಗಲು ಕಾರಣವಾಯಿತು. ಇದೆಲ್ಲ ಶುದ್ಧ ಹುಚ್ಚು, ಹಾಗೆ ನೋಡಿದರೆ ಪ್ರತಿಯೊಬ್ಬನೂ ಒಂದಲ್ಲ ಒಂದುವಿಧದ ನ್ಯೂರೋಸಿಸ್—ಮನೋವಿಕ್ಷೇಪಕ್ಕೆ ಗುರಿಯಾದವನೇ ಇರುತ್ತಾನೆ. ಹುಚ್ಚರಿಗೂ ಸಾಮಾನ್ಯರಿಗೂ ವ್ಯತ್ಯಾಸವಿರುವುದು ಆ ವಿಕ್ಷೇಪದ ಪ್ರಮಾಣ (Degree) ಮಾತ್ರದಿಂದ ವಿಶೇಷ ವ್ಯಗ್ರತೆಯುಂಟಾದಾಗ ಗೃಹವೈದ್ಯನೇ (Family Doctor) ಸಾಮಾನ್ಯ ವ್ಯಸ್ತತೆಯನ್ನು ಗುಣಪಡಿಸಬಲ್ಲ.

ಆದುದರಿಂದ ಪಾಶ್ಚಾತ್ಯರ ಉದಾಹರಣೆಯಿಂದ ನಾಗರಿಕತೆಯನ್ನು ಕಲಿವ ಹಿಂದೀಯರು ಎಚ್ಚರಿಕೆ ತೆಗೆದು ಕೊಳ್ಳಬೇಕಾಗಿದೆ. ಅಮೇರಿಕನ್ನರಿಗಿಂದು ಹಿಡಿದ ಮರುಳಿಗೆ ಅವರು ತುತ್ತಾಗಬಾರದು. ಚಿಂತೆಯ ಬಗೆಗೆ ಚಿಂತೆಹಿಡಿಸಿ ಕೊಂಡರೆ ಬಹುಬೇಗ ಹುಚ್ಚರ ಆಸ್ಪತ್ರೆಗೆ ಸೇರಬೇಕಾಗಿಬರಬಹುದು, ಹಾಗೆ ಮತ್ತು ಒಬ್ಬ ತತ್ವಜ್ಞನೆಂದ (Life is a tale told by an idiot ಜೀವನವೆಂದರೆ ದಡ್ಡನೊಬ್ಬ ಹೇಳಿದಕತೆ,ಎಂಬುದು ಅಕ್ಷರಶಃ ಸತ್ಯವಾಗಿ ಪರಿಣಮಿಸೀತು.

ಕೊನೆಯ , ಮೈಸೂರು ಸಹಿತ ಆರ್ಥಿಕ ರಾಜಕೀಯ ದೃಷ್ಟಿಯಿಂದ ಏಕೀಕೃತವಾದ ಕರ್ನಾಟಕವನ್ನು ರಚಿಸಲು ಮೈಸೂರಿನ ಪ್ರಜೆಗಳೊಡನೆ ಸಂಧಾನ ನಡೆಸಲು ನಾವು ಸಿದ್ಧರಿದ್ದೇವೆಂದೂ ಅದಕ್ಕೆ ಸಹಾಯ ... ದಟಿ ... ವಿನ್ನವಿಸಿಕೊಳ್ಳಲಾಗಿದೆ. ಒಂದು ... ವೇಳೆ ವ್ಯವಹಾರದಲ್ಲಿ ಅದು ಸಾಧ್ಯವಿಲ್ಲದೆ ಹೋದರೂ ನಮ್ಮದೇ ಪ್ರತ್ಯೇಕ ಪ್ರಾಂತ ಮಾಡಿ ... ವಾಗಬೇಕು. ಅಂಧ್ರ ... ನಾಡಿನೊಡನೆ ಕನ್ನಡ ಭಾಗಗಳ ... ಅಸಾಧ್ಯವೆಂದರು.

ಈ ಮನವಿಗೆ ಮದ್ರಾಸ ಶಾಸನ ಸಭಾ ಕನ್ನಡಿಗ ಸದಸ್ಯರೆಲ್ಲರೂ ಅಂದರೆ, ಶ್ರೀ ಬಿ ಭೀಮರಾವ ಎಂ. ಎಲ್ ಸಿ. ಬಳ್ಳಾರಿ ಮತ್ತು ಎಂ. ಎಲ್. ಎ. ಗಳಾದ ಶ್ರೀ ಕೆ ಆರ್. ಕಾರಂತ್, ಎ. ಬಿ. ಶೆಟ್ಟಿ (ಆರೋಗ್ಯ ಮಂತ್ರಿ), ಡಾ. ಯು ಪಿ. ಮಲ್ಯ, ಎಸ್ ಕೆ ನಾಯಕ್, ಎಚ್. ಎಲ್. ಹುಸೇನ ಕೆ ಈಶ್ವರ, ಬಿ. ಅನಂತಾಚಾರ್ಯ ಹಾಗು ಎ. ಸುಮಂಗಲಮ್ಮನವರು ಅಂಕಿತಹಾಕಿದ್ದಾರೆ.

[೭ನೇ ಪುಟದಿಂದ]

ಗುಂಟೂರು, ನೆಲ್ಲೂರು, ತಂಜಾವೂರು, ತಿರುಚಿನಾಪಳ್ಳಿ, ಆರ್ಕಾಟ ಈ ಸಂದ್ರ ಜಿಲ್ಲೆಗಳಲ್ಲಿ ವಿಧಿಬದ್ಧ ಹಾಗು ಅನಾರೋಗ್ಯಕ ಸೀಮಾನನ್ನು ತೆಗೆದು ಹಾಕಿದವದಲ್ಲದೆ ಉಳಿದ ಎಲ್ಲ ಜಿಲ್ಲೆಗಳ ಅನಾರೋಗ್ಯಕ ಸೀಮಾ ... ದಗ್ಗೆಸಲಾಗುವದು. ಮೂರನೆಯದಾಗಿ ಎಲ್ಲ ... ನಿಯಂತ್ರಣಗಳನ್ನು ಹೋಗಲಾಡಿಸಿ ಅನಿರ್ಬಂಧ ವ್ಯಾಪಾರದ ಪರಿಸ್ಥಿತಿ ಕಲ್ಪಿಸಲ್ಪಡುವದು.

● ... ಕ್ಕೆ ... ಪ್ರಾಂತವಾಗ ಮದ್ರಾಸ ಪ್ರಾಂತದಲ್ಲಿ ಡಿಸೆಂಬರ ೧೫ರಿಂದಲೇ ನಿಯಂತ್ರಣ ಪ್ರಾರಂಭವಾಗ ... ಧಾನ್ಯಗಳ ಮೇಲಿನ ಹಲ ... ನಿರ್ಬಂಧಗಳು ... ದವಾಗುವವಲ್ಲದೆ ಫೆಬ್ರುವರಿಯ ನಂತರ ಸೀಮಾ ಹಂಚಿಕೆಯು ನಿಲ್ಲಿಸಲ್ಪಡುವದು.

● ... ಸರ್ಕಾರದಲ್ಲಿ ಡಿಸೆಂಬರ ೧೦ರಿಂದಲೇ ಸಜ್ಜೆ, ಬಾರ್ಲಿ, ಜೋಳಗಳ ಬೆಲೆ ನಿಯಂತ್ರಣ ತೊಲಗಿದವು. ಈ ... ಕಾಳುಗಳ ಮೇಲಿನ ಪ್ರಾಂತಿಕ ನಿರ್ಬಂಧಗಳು ಉಳಿದಿವೆ.

(೯ ನೇ ಪುಟದಿಂದ)

ಮತ್ತು ನಿಕಟವರ್ತಿತ್ವ ಮತ್ತುದೊಡ್ಡವರಿಗೆ ಹತ್ತಿರವಿರುವುದು ಎಲ್ಲಿಯ ವರೆಗೆ— ಎಂಬುದರ ದೃಷ್ಟಿಯಿಂದ ಅವುಗಳಲ್ಲಿ ಎಷ್ಟರಮಟ್ಟಿಗೆ ವರ್ಗೀಕರಣ ಮಾಡಬಹುದು ? ಸಾರ್ವಜನಿಕ ಸುರಕ್ಷಿತತೆಯ ದೃಷ್ಟಿಯಿಂದ ಕುಷ್ಠಗ್ರಸ್ತರ ಮೇಲೆ ರೇಲ್ವೆ ಪ್ರಯಾಣ, ಇತರ ವಾಹನದ ಬಳಕೆ ಮುಂತಾದವುಗಳಲ್ಲಿ ಕಾಯದೆ ಹಾಕಿದ ನಿರ್ಬಂಧ ಎಷ್ಟರಮಟ್ಟಿಗೆ ನ್ಯಾಯ್ಯವಾದುದು ?

ಕುಷ್ಠವೊಂದು ಮುಖ್ಯವಾಗಿ ಹಳ್ಳಿಯ ರೋಗವೆಂಬುದನ್ನು ಲಕ್ಷಿಸಿ, ಹಳ್ಳಿಗಳಿಂದಲೇ ಕೆಲಸಗಾರರನ್ನು ತರಬೇತು ಮಾಡಬೇಕು ಮತ್ತು ತರಬೇತಿನಲ್ಲಿ ಸಮಾಜ ಸೇವೆಯ ಮೇಲೆ ಪ್ರಾಮುಖ್ಯವಿಡಬೇಕು. "ಸಂತ್ರಸ್ತರಿಗೆ ಸಹಾನುಭೂತಿ" ಎಂಬ ಪರೋಪಕಾರ ಬುದ್ಧಿಯ ಪ್ರಭಾವಕ್ಕೊಳಗಾದ ವೈಯಕ್ತಿಕ ಅವಶ್ಯಕತೆಗಳ ಮೇಲಿನ ಪ್ರಾಧಾನ್ಯವನ್ನು ಎತ್ತಿಹಿಡಿದ ಹಳೆಯ ದೃಷ್ಟಿಗೂ ಸಾರ್ವಜನಿಕ ಆರೋಗ್ಯಕ್ಕೆ ಪ್ರಾಧಾನ್ಯಕೊಡುವ ಹೊಸ ದೃಷ್ಟಿಗೂ ನಡುವೆ ಸಮತೋಲವನ್ನು ಸಾಧಿಸಬೇಕೆಂಬ ಪ್ರೊ. ಜಗದೀಶನ್ನರ ಕೇಳಿಕೆಗೆ ಅವರು ಬೆಂಬಲವಿತ್ತರು.

ಕೊನೆಯಲ್ಲಿ, ಬ್ರಿಟಿಶ ಸಾಮ್ರಾಜ್ಯದ ಕುಷ್ಠ ನಿವಾರಣ ಸಂಘದ ಭಾರತ ಶಾಖೆಯ ಹೆಸರು ಕಾಲೋಚಿತವಿಲ್ಲವಾಗಿ ಅದರ ಹೆಸರನ್ನು ಬದಲಿಸುವ ಸೂಚನೆಯನ್ನು ಅಧ್ಯಕ್ಷರು ಮನವಿತ್ತರು. ಅನಂತರ ನಡೆದ ಚರ್ಚೆಯಲ್ಲಿ ಎಲ್ಲ ಪ್ರತಿನಿಧಿಗಳೂ ಇದಕ್ಕೊಪ್ಪಿದರು. ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ಹೆಚ್ಚು ಆಸಕ್ತಿ ವಹಿಸಿ ಸಮಾಜಸೇವಕರು ಸಾರ್ವಜನಿಕರನ್ನು ಎಚ್ಚರಿಸುವುದರಲ್ಲಿ ನೆರವಾಗಬೇಕೆಂದು ಅಧ್ಯಕ್ಷರು ಪ್ರಮುಖ ಸಮಾಜ ಸೇವಕರಿಗೆ ಪ್ರಾರ್ಥಿಸಿಕೊಂಡರು.


ಪರಿಷತ್ತಿನಲ್ಲಿ ಓದಿದ ಪ್ರಬಂಧಗಳು ವಿವಿಧವಿದ್ದವು ಮತ್ತು ಅವುಗಳಲ್ಲಿ ಹಲವು ಅತ್ಯುತ್ತಮ ದರ್ಜೆಯವಿದ್ದವು ಮತ್ತು ಚರ್ಚೆ ಸ್ನೇಹಮಯವೂ ನಿರಾತಂಕವೂ ಆಗಿತ್ತು. ಕುಷ್ಠರೋಗ ನಿವಾರಣೆಯ ಸಂಪೂರ್ಣ ಹೊಣೆಯನ್ನು ಹೊರುವುದು ಹಿಂದುಸ್ತಾನ ಸರಕಾರದ ಕರ್ತವ್ಯ ಎಂಬಾಗ ಅಡಳಿತವನ್ನು ಪ್ರತಿನಿಧಿಸಿದವರು ತಮ್ಮ ತೊಂದರೆಗಳನ್ನು ನಿರ್ದೇಶಿಸಿ ಸದ್ಯಃ ಕಾಲದಲ್ಲಿ ಸರಕಾರವು ಅನ್ಯ ಕಾರ್ಯಾಸಕ್ತವಿರುವದರಿಂದ ಸಾರ್ವಜನಿಕರು ತಮ್ಮ ಪ್ರಯತ್ನಗಳನ್ನು ಸಡಿಲಿಸಬಾರದೆಂದು ಕೇಳಿಕೊಂಡರು. ಅನೇಕ ಉಪಯುಕ್ತ ಠರಾವುಗಳು ಪಾಸಾದವು. ಇವುಗಳನ್ನು ಸರ್ಕಾರ ಕಾರ್ಯಾಲಯದಿಂದ ತರಿಸಿಕೊಳ್ಳಬಹುದು.

ಒಂದು ತಜ್ಞರ ಮತ್ತು ಸಾಮಾನ್ಯ ಸಮಾಜ ಸೇವಕರ ಸಮಿತಿಯನ್ನು ಪಾಸಾದ ಠರಾವುಗಳನ್ನು ಜಾರಿಗೆ ತರುವದಕ್ಕಾಗಿ ನಿಯಮಿಸಿದ ಬಳಿಕ ಪರಿಷತ್ತು ಮುಕ್ತಾಯಗೊಂಡಿತು.

ಹೊಸದಿಲ್ಲಿ
೧—೧೨—೪೭ ಸುಶೀಲಾನಯ್ಯರ

● ಪಶ್ಚಿಮ ಬಂಗಾಲದಲ್ಲಿ ಕೆಲ ಜಿಲ್ಲೆಗಳಲ್ಲಿ ಜನೇವರಿ ೧ರಿಂದ ಉಳಿದವುಗಳಲ್ಲಿ ಜನೆವರಿ ೧೦ ರಿಂದ ಹಿಟ್ಟು, ಸಿಟ್ಟಿ ... ಣಗಳು ತೊಲಗುವವು.

● ಮೈಸೂರು ಸಂಸ್ಥಾನ ಕೊರತೆ ಪ್ರದೇಶವಾಗಿರುವದರಿಂದ ಧಾನ್ಯ ಎತ್ತುವಳಿ ಮತ್ತು ಸೀಮಾಪದ್ಧತಿ ಸಡಲಿಸುವದು ಗಂಡಾಂತರಕ್ಕೆ ಕಾರಣವಾಗಬಹುದೆಂದೂ ೧೯೪೮ ರಲ್ಲಿ ಈ ವಿಚಾರ ಮಾಡಲಾಗುವದೆಂದೂ ಸರಕಾರಿ ಪ್ರಕಟನೆ ಹೊರಟಿದೆ.



ಕಾಶ್ಮೀರದಲ್ಲಿ ಪಾಕಿಸ್ತಾನ ಸರಕಾರದ ಪ್ರೋತ್ಸಾಹದಿಂದ ... ದ ದಾಳಿಯಲ್ಲಿ ಬಾರಾಮುಲಾ ನಗರವು ಹಾಳುಗೊಳಗಾಗಿದ್ದು ಅದರ ಒಂದು ನೋಟ.

ಕೇಂದ್ರ ಶಾಸನ ಸಭೆಯ ಚಟುವಟಿಕೆಗಳು

ಸ್ನೇಹಭಾವನೇ ಭಾರತದ ವಿದೇಶನೀತಿ

"ಹರಿಜನರ ಅಧೋಗತಿಗೆ ಡಾ. ಅಂಬೇಡಕರರೇ ಹೊಣೆಗಾರರು!"

ಹಿಂದುಸ್ತಾನ ಸರಕಾರದ ಕೇಂದ್ರ ಶಾಸನ ಸಭೆಯಲ್ಲಿ ತಾ. ೧೮ರಂದು ಮುಂಗಡ ಪತ್ರಿಕೆಯ ಬಗ್ಗೆ ಚರ್ಚೆ ನಡೆಯಿತು. ಶ್ರೀ ಕೆ. ಎಂ. ಮುನಷಿ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಶ್ರೀ ಮುನಷಿಯವರು ಮುಂಗಡ ಪತ್ರಿಕೆಯನ್ನು ಸ್ವಾಗತಿಸುತ್ತ ಹೀಗೆ ಹೇಳಿದರು.

ಹಿಂದಿ ನೌಕ, ಉಕ್ಕು ಹಾಗೂ ಕಬ್ಬಿಣ ಉದ್ಯೋಗಗಳು ಖಾಸಗೀ ಜನರ ಸ್ವಾಧೀನದಲ್ಲಿದ್ದರೂ ಅತ್ಯಂತ ತೃಪ್ತಿಕರ ಮತ್ತು ಪ್ರಗತಿಪರವಾಗಿರುವವು. ಆದ್ದರಿಂದ ರಾಷ್ಟ್ರೀಕರಣ ಆಕಾಂಕ್ಷೆಯಿದ್ದಲ್ಲಿ ವೈಯಕ್ತಿಕ ಉದ್ಯೋಗಿಕ ಸಾಹಸಗಳಿಗೆ ಸರಕಾರ ಪ್ರೋತ್ಸಾಹ ಕೊಡಬೇಕು.

ವ್ಯಾಪಾರಿ ಲಾಭದ ಕರಕ್ಕಿಂತ ವಾರಸಾ ಕರ ಹೆಚ್ಚು ಸಮಂಜಸವಾಗಿರುವದು. ನಮ್ಮ ದೇಶ ಸಾಮ್ಯವಾದೀ ಪ್ರಜಾಸತ್ತೆಯತ್ತ ಸಾಗಿದೆ. ಈ ಸಂಧಿ ಕಾಲದಲ್ಲಿ ಆರ್ಥಿಕ ರಚನೆ ಭದ್ರವಾಗಿರುವದು ಅಗತ್ಯ.

ಡಾ. ವಿ. ಸುಬ್ರಹ್ಮಣ್ಯರು ಬಲವಾದ ವಿಮಾನ ಮತ್ತು ನೌಕಾ ದಲ ರಚಿಸಬೇಕು ಮತ್ತು ಸಂರಕ್ಷಣೆಗೆ ಸಾಕಷ್ಟು ಹಣ ತೆಗೆದಿಡಬೇಕೆಂದು ಸೂಚಿಸಿದರು.

ಶ್ರೀ ರಾಮಲಿಂಗಂ ಚೆಟ್ಟಿಯವರು ರಾಜಧಾನಿಯನ್ನು ದಿಲ್ಲಿಯಿಂದ ಸ್ಥಳಾಂತರಿಸಿ ಅಖಿಲ ಭಾರತಕ್ಕೂ ಮಧ್ಯವರ್ತಿಯಾಗಿರುವಂತಹ ಮಧ್ಯಪ್ರಾಂತದ ಯಾವದೇ ಒಂದು ನಗರವನ್ನು ಆರಿಸಬೇಕೆಂದು ಸೂಚಿಸಿದರು.

ಅರ್ಥಸಚಿವ ಶ್ರೀ ಷಣ್ಮುಖಂ ಚೆಟ್ಟಿಯಾವರು ಎಲ್ಲರಿಗೂ ಸಮರ್ಪಕ ಉತ್ತರ ಕೊಡುತ್ತ ಹೇಳಿದ್ದರ ಸಾರ ಹೀಗೆ—

ಆರ್ಥಿಕ ಪುನರ್ರಚನೆ

ಆರ್ಥಿಕ ಸಮಸ್ಯೆಗಳು ಅದಷ್ಟು ಬೇಗ ಬಗೆಹರಿವ ಲಕ್ಷಣಗಳಿವೆ. ಹಿಂದುಸ್ತಾನ ಪಾಕಿಸ್ತಾನಗಳ ಕೊಡಕೊಳ್ಳುವ ವಿಷಯವನ್ನು ನಿರ್ಧರಿಸಲು ನೇಮಕ ಹೊಂದಿದ ಮಧ್ಯಸ್ಥಿಕೆಯ ಮಂಡಲದ ಅಧ್ಯಕ್ಷ ಸರ್ ಪ್ಯಾಟ್ರಿಕ್ ಸ್ಪೆನ್ಸರರನ್ನು ಬದಿಗೊತ್ತಿ ತಾವೇ ಇದನ್ನು ಪರಸ್ಪರ ವಿಚಾರದಿಂದ ಬಗೆಹರಿಸುವ ಒಳಸಂಚನ್ನು ಸರದಾರ ವಲ್ಲಭಭಾಯಿಯವರು ಯೋಚಿಸಿದಂತೆ ಕಾಣುತ್ತದೆ (ನಗು). ಎರಡೂ ಸರಕಾರಗಳು ಹೀಗೆ ನಿರ್ಣಯಕ್ಕೆ ಬಂದರೆ ಬಂಗಾರವೇ.

ಆರ್ಥಿಕ ಪುನರ್ರಚನೆ ಮತ್ತು ಉದ್ಯೋಗಿಕ ಅಭಿವೃದ್ಧಿಯ ಅನೇಕ ಯೋಜನೆಗಳು ಸಿದ್ಧವಾಗಿವೆ. ದೇಶದಲ್ಲಿ ಜಾತೀಯ ಗಲಭೆಗಳಾಗಿರದಿದ್ದರೆ ಇಷ್ಟು ಹೊತ್ತಿಗೆ ನಿರ್ಣಾಯಕ ಹೆಜ್ಜೆ ಹಾಕುತ್ತಿದ್ದೆವು. ಶಾಂತತೆ ನೆಲಸುತ್ತಲೆ ಈ ವಿಷಯದಲ್ಲಿ ನಿಶ್ಚಿತ ಧೋರಣ ಕೈಕೊಳ್ಳುವೆವು.

ಸ್ವಾತಂತ್ರ್ಯದ ಸಾಲ

ಸರ್ ಆರ್ಚಿಬಾಲ್ಡ ರೋಲ್ಯಾಂಡ್ಸರು ಸುಲಭ ಬಡ್ಡಿ ದರದಿಂದ ವಿಪುಲ ಹಣ ದೊರಕಿಸುವಲ್ಲಿ ಯಶಸ್ವಿಯಾದರು. ಆದರೆ ಇಂಗ್ಲಂಡದ ಅರ್ಥ ಸಚಿವರಿಗೆ ಈ ವಿಷಯದಲ್ಲಿ ಯಶ ದೊರೆಯಲಿಲ್ಲ. ನಮಗೂ ಇಂದು ಇದೇ ಪರಿಸ್ಥಿತಿ ಬರುವದೆಂದು ತೋರುತ್ತದೆ. ಹಿಂದುಸ್ತಾನದ ಕುಬೇರರು ಸರಕಾರದ ಉದ್ಯೋಗಿಕ ಯೋಜನೆಗಳಿಗೆ ಉದಾರ ಹಸ್ತದಿಂದ ಸಹಾಯ ನೀಡಬೇಕಾಗಿ ಬೇಡುತ್ತೇನೆ. ಈ ಸಲ ಸ್ವಾತಂತ್ರ್ಯದ ಹೆಸರಿನಲ್ಲಿ ಸಾಲ ಎತ್ತಬೇಕೆನ್ನುತ್ತೇನೆ. ಹೆಸರಿನ ಪ್ರೋತ್ಸಾಹಕ್ಕೆ ಕುಬೇರರ ಭಾಂಡಾರದ ಬಾಗಿಲು ತೆಗೆದೀತೋ ಇಲ್ಲವೋ ಹೇಳಲಾರೆ. ಕುಬೇರರಾಗಿರುವ ದಲಾಲರ ಹೃದಯ ಕರಗಿಸುವದಕ್ಕಿಂತ ಅವರ ಕೋಶ ಇನ್ನಷ್ಟು ಕೊಬ್ಬುವಂತೆ ಮಾಡಿ ಅವರಿಂದ ಹಣ ಕಳಚುವ ನನ್ನ ಕೆಲಸ ಸುಲಭವಾಗುವದೆಂದು ತೋರುತ್ತದೆ (ನಗು).

ಉದ್ಯೋಗಿಕ ರಾಷ್ಟ್ರೀಕರಣ

ಉದ್ಯೋಗಿಕ ರಾಷ್ಟ್ರೀಕರಣವನ್ನು ಕೈಕೊಂಡರೂ ವೈಯಕ್ತಿಕ ಉದ್ಯೋಗಿಕ ಸಾಹಸಗಳಿಗೆ ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳಿದ್ದೆ. ರಾಷ್ಟ್ರದ ಸಂಪತ್ತನ್ನು ಸರಿಯಾಗಿ, ಸಮನಾಗಿಯಲ್ಲ, ಹಂಚುವದೇ ಸಾಮ್ಯವಾದವೆಂದು ನನ್ನ ಅರ್ಥ. ಎಂದೇ ರಾಷ್ಟ್ರೀಕರಣವೂ ವೈಯಕ್ತಿಕ ಸಾಹಸಗಳೂ ಸಮಂಜಸ ಅರ್ಥ ವಿತರಣೆಯ ಸಾಧನಗಳೆಂದು ನಾನು ಗ್ರಹಿಸಿದ್ದೇನೆ. ಕೆಲವರಿಗೆ ಮಾತ್ರ ಲಾಭವಾಗಬೇಕೆಂಬ ಬಂಡವಲಗಾರರ ಪ್ರವೃತ್ತಿಯನ್ನು ನಾನು [illegible] ವಿರೋಧಿಸುತ್ತೇನೆ...... [illegible] ಹಣ ಕೂಡಿ ಬೀಳದಂತೆ ಹಾಗೂ ಅದರ [illegible] ಗಗನಕ್ಕೆ ಏರದಂತೆ ಕರಭಾರ ಹೇರಬೇಕು.

ಉತ್ಪಾದನೆಯೂ ಕೆಲಸಗಾರರೂ

ಅಮೇಲೆ ಅರ್ಥಸಚಿವರು ಮುಂದುವರಿಸುತ್ತ ಆರ್ಥಿಕ ಕ್ಷೇತ್ರದಲ್ಲಿ [illegible] ಸಹಕಾರದ [illegible] ಕೆಲಸಗಾರರಿಗೂ ಲಾಭದಲ್ಲಿ [illegible] ಬೇಕೆಂದೂ ಕೆಲಸಗಾರರು ವೈಯುಕ್ತಿಕ ಬದಿಗಿಟ್ಟು ತಮಗೂ ರಾಷ್ಟ್ರಕ್ಕೂ ಲಾಭವಾಗುವಂತೆ, [illegible] ಕೊಳ್ಳುವದು ಅತ್ಯಗತ್ಯವೆಂದೂ ಪ್ರತಿಪಾದಿಸಿದರು.

ವಿನಿಯಂತ್ರಣ ಮತ್ತು ಸಂರಕ್ಷಣ ವೆಚ್ಚ

ಪೂರೈಕೆ ಮತ್ತು [illegible] ಇಲ್ಲದಾಗ ನಿಯಂತ್ರಣ ಅನಿವಾರ್ಯ [illegible] ಸ್ಪಷ್ಟವಾಗಿದೆ. ಆದರೆ ನಿಯಂತ್ರಣ [illegible] ಆದರೆ ಅವು ಬಗೆಹರಿಸಲಾಗದು [illegible] ರಡು ಅವಶ್ಯಕ ಪದಾರ್ಥಗಳನ್ನು ಮಾತ್ರ ನಿಯಂತ್ರಿಸಿದರೆ ಉಳಿದವುಗಳು ತಾಳಗೆಟ್ಟು ಕುಣಿದಾಡುವದು ಸಹಜವೇ. ಸರಕಾರವು ನಿಯಂತ್ರಣವನ್ನು ಕ್ರಮಶಃ ಕೀಳಬೇಕೆಂದು ತೀರ್ಮಾನಿಸಿದೆ. ವಿನಿಯಂತ್ರಣಕ್ಕೆ ಸಹಕಾರಿಯಾಗಲೆಂದೆ ಈ ನಿಯಂತ್ರಣ ಉಳಿಸಿಕೊಳ್ಳಲಾಗಿದೆ. ವಿನಿಯಂತ್ರಣದಿಂದ ಪರಿಸ್ಥಿತಿಯು ಹದಗೆಟ್ಟರೆ ಪುನಃ ನಿಯಂತ್ರಣವನ್ನು ಕಾರ್ಯಕ್ಕಿಳಿಸಲು ಈ ನಿಯಂತ್ರಣ ಅಡಳಿತದ ಕಡಿವಾಣವನ್ನು ಸರಕಾರ ಕೈಯಲ್ಲಿ ಇಟ್ಟುಕೊಂಡಿದೆ.

ಸಂರಕ್ಷಣ ವೆಚ್ಚವನ್ನು ಹೆಚ್ಚಿಸುವ ಬಗೆ ನಾನೇ ಹಿಂದೆ ಮುಂದೆ ನೋಡಬೇಕಾಗಿದೆ. ಆದರೂ ಇಷ್ಟೊಂದು ಹೇಳಬಲ್ಲೆ. ನಮ್ಮ ಆರ್ಥಿಕ ಪರಿಸ್ಥಿತಿ ಹೇಗೇ ಇದ್ದರೂ ನಮ್ಮ ರಾಷ್ಟ್ರ ರಕ್ಷಣೆಗೆ ಅಗತ್ಯವಿದ್ದ ಸೈನ್ಯವಿಡುವಷ್ಟು ಹಣವನ್ನು ನಾವು ಸಹಜವಾಗಿ ದೊರಕಿಸಬಲ್ಲೆವೆಂಬ ಧೈರ್ಯವಿದೆ.

ಇಂದಿನ ಹುಣಕಾಸಿನ ಚರ್ಚೆಯಲ್ಲಿ ಶ್ರೀ ರಂಗರಾವ ದಿವಾಕರರು ಭಾಗವಹಿಸಿ ಅನೇಕ ಪ್ರಶ್ನೆ ಕೇಳಿದರು. (ಈ ವಿವರ ಹಿಂದಿನ ಸಂಚಿಕೆಯಲ್ಲಿ ಬಂದಿದೆ.)

ಹರಿಜನರ ಉದ್ಧಾರದ ಬಗೆಗೆ ಗೊತ್ತುವಳಿಯು ಹೀಗಾಯ್ತು—

ಹರಿಜನರಿಗೆ ವಸತಿ ಸೌಕರ್ಯ ಕುಡಿವ ನೀರು ಒದಗಿಸಿ ಪ್ರಾಂತಿಕ ಸರಕಾರಗಳು ಮಂಜೂರ ಮಾಡಿದ ಹಣಕ್ಕೆ ಹೆಚ್ಚಿನ ಧನಸಹಾಯ ಸಲ್ಲಿಸಿ ಆವತ ಏಳಿಗೆಗೆ ಹಿಂದುಸ್ತಾನ ಸರಕಾರ ಸಮರ್ಪಕ ಉಪಾಯ ಕೈಕೊಳ್ಳತಕ್ಕದ್ದು.

ಪಾಕಿಸ್ತಾನದಲ್ಲಿ ಹರಿಜನರ ಗೋಳು

ಈ ಬಗೆಗೆ ನಡೆದ ಚರ್ಚೆಯಲ್ಲಿ ಜ್ಞಾನಿ ಗುರುಮುಖಸಿಂಗರು ಪಾಕಿಸ್ತಾನದಲ್ಲಿಯ ಹರಿಜನರ ಗೋಳನ್ನೂ ಒತ್ತಾಯದ ಮತಾಂತರವನ್ನೂ [illegible] ರಿಸಿ ಪಾಕಿಸ್ತಾನದಿಂದ ಹರಿಜನರನ್ನು [illegible] ಮಾಡಬೇಕೆಂದು ಕೇಳಿಕೊಂಡರು.

ಹರಿಜನರ ಉದ್ಧಾರಕ್ಕಾಗಿ ಸರಕಾರ [illegible] ಪ್ರಕಾಶರು ಕೇಳಿಕೊಂಡರು [illegible]

[illegible]

ಕೊಡುತ್ತ [illegible] ಕುಮಾರಿ ಅಮ್ಮು ಸ್ವಾಮಿನಾಥನರು, [illegible] ಹರಿಜನ [illegible]

[illegible] ನಿವೃತ್ತಿ ವೇತನ ಕೊಡಲಾಗಿದೆ [illegible] ವಿವರಿಸಿದರು. ಶ್ರೀ ಮೋಹನಲಾಲ ಸಕ್ಸೇನಾ [illegible] ಪ್ರಶ್ನೆ ಕೇಳಿದ್ದರು

ಭಾರತದ ವಿದೇಶನೀತಿ

[illegible]

ಭಾರತವು ಅವರಿಂದ ದೂರವಿರಲು ಪ್ರಯತ್ನಿಸು [illegible]

[illegible]

ಡಾ. [illegible] ಬಗ್ಗೆ ಅದರಲ್ಲೂ [illegible]

ವಸ್ತ್ರ ವಿತರಣ

ತಾ. ೫ರಂದು ಶ್ರೀ. ಮೋಹನಲಾಲ ಸಕ್ಸೇನಾರು [illegible]

[illegible]

ವ್ಯಾಪಾರ ಪ್ರ[illegible]

[illegible]

[illegible]

ಮಧುರ ಸಂಕಟ

[illegible] ಪ್ರೀತಿಸುತ್ತೇನೆ ಎಂಬ 'ಇದೇನಯ್ಯಾ ಯಾರಾದರೂ ಸಂಕಟ [illegible] ಇದೇನು ಹುಚ್ಚು? ಯಾರಾದರೂ ಕೇಳಬಹುದು. ಅದಕ್ಕೆ [illegible] ಸಂತೋಷಕ್ಕಾಗಿ ಮನುಷ್ಯ [illegible] ಕೊಂಡವರೆಂದರೆ ಮದುವೆಯಾಗು [illegible] ನ್ನು ಮಾತ್ರ ಯಾವ ಸಂಸಾ [illegible] ಲಾರನು. ಮದುವೆಯಾಗು [illegible] ಗಂಡಾಗಲಿ, ಹೆಣ್ಣಾಗಲಿ- ಒಂದು [illegible] ಆಗಬೇಕೆನ್ನುವ ಹುಚ್ಚು ಅದ ಮೇಲೆ, [illegible] ಮಾಡಿಕೊಂಡ ಮದುವೆ ವಿವೇಕ [illegible] ವಾಗಿ ತೋರುತ್ತದೆ. ಅದುದರಿಂದ [illegible] ದಲ್ಲಿಯೂ ಒಂದು ವಿಧದ ಸುಖ! [illegible] ಎನ್ನುತ್ತಾರೆ ಗದ್ದದ ಋಷಿ

[illegible] ಸುಖದ ವಿಚಾರ ಬಹಳ [illegible]. ಒಂದೂರಲ್ಲಿ ಒಬ್ಬಾತ ಇದ್ದ. [illegible] ವರ್ಷಗಳ ವರೆಗೆ ಮದುವೆಯು [illegible] ಮಾಡಿ ಸೋತ. ಒಂದು ಸಲ ಒಬ್ಬ [illegible]. ಕಂಡಕೂಡಲೇ— ಲೇ ಹುಡುಗಿ, [illegible] ಮದುವೆಯಾಗುವೆಯಾ?— [illegible] ಇವನು ಕೇಳಿದ [illegible] ಆಕೆ ಸಂಶಯ ತಾಳ ಆಗುವದಿಲ್ಲ [illegible] ಇವನು ಆಗು ಎಂದು ಒತ್ತಾಯಿಸಿದ. [illegible]

[illegible]

[illegible] ಲೇವಿಯಲ್ಲಿ ಹೆಚ್ಚಾಗಿರುತ್ತದೆ. ಮದುವೆ [illegible] ಅಂತಹ ವ್ಯಕ್ತಿಯು ತನ್ನ ಸಂಗಾತಿ [illegible] ದುರ್ಬಲ ವ್ಯಕ್ತಿಯನ್ನೇ [illegible] ಬುದ್ಧ್ಯಾ ನಿರಾಶ ಮತ್ತು [illegible] ಅದರೂ ಪರವಾಯಿಲ್ಲವೆಂದು [illegible] ದೆ. ಒಬ್ಬ ಹೆಂಗಸು ಮದುವೆ [illegible] ದುಃಖ ಜೀವನ ನಡೆಸುತ್ತಿದ್ದಳು. [illegible] ಅವಳ ಹಣವನ್ನೆಲ್ಲ ಸುಲಿದು [illegible] ಕಳೆಯುತ್ತಿದ್ದನು. ಅಂತಹ [illegible] ಅರಿಸಿಕೊಳ್ಳಲು ಕಾರಣವೇನು? [illegible] ಅವಳ ತಾಯ್ತಂದೆಯರು ಅವಳ [illegible] ನ್ನು ಪುರಸ್ಕರಿಸುತ್ತಲೂ ಅವ [illegible] ಲೂ ಬಂದಿದ್ದರು. ಅವಳಲ್ಲಿ [illegible] ಪ್ರತೀಕಾರ ಭಾವನೆಯುಂಟಾಗಿ [illegible] ಪ್ರವೃತ್ತಿ ಹುಟ್ಟಿ ದುರ್ಬಲ [illegible] ಸುಪ್ತಪ್ರವೃತ್ತಿಗಾಗಳಾಗಿ, [illegible] ಅರಿಸಿಕೊಳ್ಳುವಂತಾಯಿತು. ಬುದ್ಧಿ [illegible] ಭಾವನೆ ಚಿರವೂ ಅದುದರಿಂದ [illegible] ದುಃಖಿಯಾದರೂ ಕಡೆಗೆ [illegible] ಪ್ರಿಯತಮ! ಆತ್ಮೋತ್ತಮಭಾ [illegible] ಯೊಡನೆ ಅವಳು ಒಂದು ಗಳಿ [illegible] ಸಾಗಿಸಿಕೊಂಡು ಹೋಗಲಾ [illegible]

[illegible] ಹೊಂದ್ದ ವರನ್ನು ಅರಿಸಿಕೊಳ್ಳುವು [illegible] ಸಬಲರನ್ನು ಅಯ್ದು [illegible] ಬುದ್ಧಿವಂತರು ದಡ್ಡರನ್ನು [illegible] ದರಿಂದಲೇ, ಸರ್ವಾಂಗ ಸುಖಕ [illegible] ದುಃಖಕರವಾದ ಸಂಸಾ [illegible] ತೋರುವಂತಾಗಿದೆ. ಮಕ್ಕಳ [illegible] ತ್ತವನ್ನು ವಿಧವೆಯರೂ [illegible] ತ್ತಾರೆ. ಅಂಥವರು [illegible] ಕೊಳ್ಳುತ್ತಾರೆ. ದಪ್ಪನಾದ [illegible] ಸಬಲ ಹೊಡೆಗೇಡಿಯನ್ನೂ [illegible] ಶಾಸ್ತ್ರದ ಈ ಗೂಢವಾದ [illegible] ಕಾರಣ. [illegible] ಗಳಲ್ಲಿ ಪಂಸ್ಕರರ ಆಳ [illegible] ಗಂಡಸಿಗೆ ಶಕ್ತಿ [illegible] ಇತ್ಯಾದಿ)

ವಿವಿಧ ಪ್ರಪಂಚ

ಅವರವರಲ್ಲಿಅದದಿದ್ದರೆ ಅವರ Market Value ಮಾರುವ ಬೆಲೆಯು ಉತ್ತಮ ಸಂಗಾತಿಗಳನ್ನಾರಿಸಿಕೊಳ್ಳುವ ಶಕ್ತಿಯು [Love-Mariage- ಪ್ರೇಮ ವಿವಾಹ ಅಥವಾ ಗಾಂಧರ್ವ ಪದ್ಧತಿಯಿರುವ ದೇಶಗಳಲ್ಲಿ ಊದಿತೋದಿತವೆನಿಸುತ್ತದೆ. ಇದು Patriarchical ಪೈತೃಲಕಕುಟುಂಬ ಜೀವಿಗಳ ವಿಚಾರ ಸರಣಿಗೆ ಅನುಸಾರವಾಗಿ ಬರತಕ್ಕ ಯೋಗ್ಯತಾ ನಿರ್ಣಯ ಬುದ್ಧಿ. ಶಕ್ತಿ ಸೌಂದರ್ಯಗಳು ಅದರಿಂದಲೇ ಸಾಮಾಜಿಕ ಐಶ್ವರ್ಯಗಳೆನಿಸಿವೆ ಅದರೆ ಇದಕ್ಕೆ ಅಪವಾದವಿಲ್ಲೆಂದು ಹೇಳಲಾಗದು. ಕೆಲವೊಮ್ಮೆ ಶಕ್ತರು ಅನಾಗರಿಕರಾಗಿಯೂ ಸುಂದರಿಯರು ಅಪ್ರಯೋಜಕರೂ ಪಾತಕಿಗಳೂ ಅಗಿಯೂ ಪರಿಣಮಿಸುವುದೇನೂ ಅಸಹಜವಲ್ಲ. ಅದುದರಿಂದ ಮದುವೆಯೊಂದು Sweet Trouble ಮಧುರಸಂಕಟ ಎನಿಸಿದೆ. ಅದರಿಂದಲೇ ಮಾನವ ಸಮಾಜವು ಕಂಡೂ ಕಾಣದ ಕಡಲ ಹಾದಿ ಹಿಡಿದು "ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ" ಎಂದು ಜೀವನದ ಗುಂಗಿನಲ್ಲಿ ತನ್ನನ್ನು ತಾನೇ ಮರೆತು ಸಾಗಿದೆ!

ಶಾಸನ ಸಭೆಯ ಸದಸ್ಯ ಶಿಖಾಮಣಿಗಳು!

ಹಿಂದುಸ್ತಾನದ ಮಧ್ಯದಲ್ಲಿ ಮಧ್ಯ ಪ್ರಾಂತವೆಂಬ ಪ್ರಾಂತವಿದೆ. ಅಲ್ಲಿಯ ಶಾಸನ ಸಭೆಯ ಮೇಲ್ಮನೆಗೆ ಒಬ್ಬ ವಕೀಲರ ಗುಮಾಸ್ತನು ಭಗೀರಥ ಯತ್ನದಿಂದ ಸದಸ್ಯನಾಗಿ ಚುನಾಯಿತನಾದನು. ಅವನು ಸಭೆಯನ್ನು ಪ್ರವೇಶಿಸುವ ಮುನ್ನ ಮತ್ತೊಬ್ಬ ಬರಹಗಾರನಿಂದ ಕನ್ನಡ ಭಾಷಣಗಳನ್ನು ಬರೆಸಿ ಜೇಬಿನಲ್ಲಿ ತುಂಬಿಕೊಂಡು ಹೋಗುತ್ತಿದ್ದನು. ಒಮ್ಮೆ ಒಂದು ಅಧಿಕಾರೀತರ ಠರಾವನ್ನು ಚರ್ಚೆಗೆ ತೆಗೆದುಕೊಂಡಾಗ ಗುಮಾಸ್ತ ಮಹಾಶಯನು ಮಾತಾಡಲೆದ್ದು ನಿಂತ. ಆಚೆ ಈಚೆ ಜೇಬಿನಲ್ಲಿ ಹುಡುಕಿ ತಡಕಿ ಹತ್ತಾರು ಹಸ್ತಪತ್ರಿಕೆಗಳಲ್ಲಿ ಒಂದನ್ನೆತ್ತಿಕೊಂಡು ಓದಲಾರಂಭಿಸಿದನು. ಪ್ರಸ್ತುತ ವಿಷಯಕ್ಕೂ ಅವನ ಓದಿಗೂ ಯಾವ ಸಂಬಂಧವೂ ಇಲ್ಲದ್ದನ್ನು ಕಂಡು ಅಧ್ಯಕ್ಷರೂ ಇತರರೂ ಅರ್ಧ ನಿದ್ರೆಯಲ್ಲಿ ವಿಶ್ರಾಂತರಾದರು. ಕಡೆಗೂ ಆ ವಾಗ್ಮಿಯು ಓದು ಮುಗಿಯದಿರಲು ಅವನ ತಪ್ಪನ್ನು ಅಧ್ಯಕ್ಷರು ತೋರಿಸಿಕೊಟ್ಟರು. ಅದರಿಂದ ಎಳ್ಳಷ್ಟೂ ಗಾಬರಿಗೊಳ್ಳದೆ, ನಾಚಿಕೆ ಪಡದೆ ಮತ್ತೆ ಜೇಬುಗಳನ್ನು ಸಂಶೋಧಿಸಿ ಯುಕ್ತ ಹಸ್ತಪತ್ರಿಕೆಯನ್ನು ತೆಗೆದು ಪುನಃ ಓದಿ ಕಡೆಯತನಕ ಮುಗಿಸಿದನು.! ಇದು ಕಟ್ಟು ಕತೆಯಲ್ಲ; ಶ್ರೀ ವಿ. ಎಸ್. ವೆಂಕಟರವಣನ್ನರು ಸ್ವತಃ ಕಂಡಿದ್ದಾರಂತೆ!

ಮಾಂಟ್ ಫರ್ಡ್ ಸುಧಾರಣೆಗಳು ಅಮಲಿನಲ್ಲಿ ಬಂದ ಕಾಲದಲ್ಲಿ ಕಾಂಗ್ರೆಸಿನ ಬಹಿಷ್ಕಾರದಿಂದಾಗಿ ಬೇಕುಬೇಕಾದವರು ಶಾಸನ ಸಭೆಯಲ್ಲಿ ತಮ್ಮ ಚರಣಾರವಿಂದವನ್ನು ಅರಳಿಸುವಂತಾಯಿತು. ಅದೇ ಮಧ್ಯ ಪ್ರಾಂತದ ಸರಕಾರಿ ಭವನದಲ್ಲಿ ಆಗಿನ ಗವರ್ನರರು ಎಲ್ಲ ಶಾಸನ ಸಭಾ ಸದಸ್ಯರ ಒಂದು ಚಹ ಸಮಾರಂಭಕ್ಕೆ ನಿಮಂತ್ರಿಸಿದ್ದರು. ಭಾರತೀಯರಿಗೆ ಮತ್ತು ಐರೋಪ್ಯರಿಗೆ ಬೇರೆ ಬೇರೆಯಾಗಿ ವ್ಯವಸ್ಥೆ ಮಾಡಲಾಗಿತ್ತು. ಭಾರತೀಯರ ಮೇಜುಗಳ ಮೇಲೆ ಲಾಡುಗಳನ್ನು ಹೇರಳವಾಗಿ ಬಡಿಸಲಾಗಿತ್ತು. ಆ ಒಂದೊಂದು ಲಾಡೂ ಟೆನ್ನಿಸ್ ಚಂಡುಗಳ ಗಾತ್ರದವಾಗಿದ್ದವು. ಗವರ್ನರರು ಎಲ್ಲರನ್ನೂ ವಿನೋದವಾಗಿ ಮಾತನಾಡಿಸುತ್ತಿದ್ದರು. ಹಾಗೆ ಮಾತನಾಡಿಸುತ್ತ ಅವರು ಒಬ್ಬ ಮೇಲ್ಮನೆಯ ಸದಸ್ಯನ ಸಮೀಪಕ್ಕೆ ಬಂದು —ಲಾಡುಗಳನ್ನು ತೆಗೆದುಕೊಂಡಿರಾ? —ಎಂದು ಕೇಳಿದರು. ಅಗ ಆ ಧೀಮಂತನು— ಮಹಾ ಪ್ರಭ, ಸಲಾಡುಗಳನ್ನು ಈ ಕಿಸೆಯಲ್ಲಿ ತುಂಬಿಕೊಂಡಿದ್ದೇನೆ; ಮತ್ತೆ ಮೂರನ್ನು ಈಚೆಯ ಕಿಸೆಯಲ್ಲಿಟ್ಟುಕೊಂಡಿದ್ದೇನೆ — ಎಂದು ಉಬ್ಬಿದ ತನ್ನ ಜೇಬುಗಳನ್ನು ಮುಟ್ಟಿ ಮುಟ್ಟಿ ತೋರಿಸುತ್ತ ಉತ್ಸಾಹದಿಂದ ನುಡಿದನು. ಗವರ್ನರರು ನಕ್ಕರು. ಅವನಂತಹ ಸತ್ಪ್ರೇಮುವನ್ನು ಪ್ರಕಟ ಮಾಡಹೋದ ಸಭ್ಯನಿರಬಹುದು !

ಮತ್ತೊಬ್ಬ ವಿದ್ಯಾದಿಗ್ಗಜನು ಅದೇ ಮೇಲ್ಮನೆಯಲ್ಲಿ ಸದಸ್ಯನಾಗಿದ್ದನಂತೆ. ಅವನ ಕ್ಷಮತೆಯ ಯಾರಾದರೂ ಸಭಾಪದ್ಧತಿಯ ಬಗ್ಗೆ ದಸ ಯತ್ತಿದರಿಂದ ಕೂಡಲೆ— ಲಂಡನ್ನಿನಲ್ಲಿ ಹೀಗೆ ಮಾಡುವ ಪಾಡಿಕೆಯಿದೆ, ಲಿಬರಲರಲ್ಲಿ ಈ ಪ್ರಕಾರ ನಡೆಸುಕೊಳ್ಳುತ್ತಾರೆ—ಎಂದು ಬ್ರಿಟಿಶ ಪಾರ್ಲಿಮೆಂಟಿನ ನಡತೆಯನ್ನು ಉದಾಹರಿಸು ವುದು. ಅಲ್ಲಿಯ ದೇಶಿಯ ಸದಸ್ಯರಾದರೂ ತಮ್ಮ ಪ್ರಾಂತದ ಗಡಿ ದಾಟಿ ಆಚೆಗೆ ಹೋದವರಲ್ಲ! ಅವರೆಲ್ಲರ ಮನಸ್ಸಿನಲ್ಲಿ ಇವನಾವನೋ "ಲಂಡನ್ ರಿಟರ್ನ್" ಮನುಷ್ಯನಿರಬೇಕೆಂದು ಕಲ್ಪನೆ. ಇವನ ಗುಟ್ಟನ್ನು ಇವನೇ ಬಲ್ಲ! ಒಮ್ಮೆ ಒಬ್ಬ ಸದಸ್ಯನು ಬಹಳ ಧೈರ್ಯ ಮಾಡಿ —ನೀವು ಲಂಡನ್ನನ್ನು ನೋಡಿದ್ದೀರಾ?- ಎಂದು ಕೇಳಿದ. ಅಗ ಅವನು ತಾನು ಕೇವಲ ಮುಂಬಾಯಿಯನ್ನು ಕಂಡವನಷ್ಟೆ ಎಂದು ಸ್ಪಷ್ಟವಾಗಿ ಒಪ್ಪಿಕೊಂಡನು. ಅವನು ಕೇಳುತ್ತಾನೆ. "ಲಂಡನ್ ರಿಟರ್ನ್ಡ್" ಜಂಟಲಮನ್ನನಂತೆ ಸೋಗು ಹಾಕಿದರೆ ಅಗುವ ಹಾನಿಯೇನು ? ಯುರೋಪಿಯನ್ನರ ಕಣ್ಣಿಗೆ ಧೂಳಿರಚಲು ಅದೊಂದೇ ಮಾರ್ಗ—ಎಂಬುದು ಅವನ ವಾದ. ಇದು ಹೇಗಿದೆ ?

ವಿವಾಹ ವಿಚ್ಛೇದದ ಭಯಂಕರ ಪರಿಣಾಮ

ಭಾರತದಲ್ಲಿ ಕೆಲವೆಡೆ ಪುರಾತನ ಧರ್ಮದ ದುರುಪಯೋಗ ನಡೆದು ತನ್ಮೂಲಕ ಕೆಲವರಿಗೆ ಭಾರತೀಯ ಸಮಾಜದ ರಚನೆಯ ಬಗ್ಗೆ ತಿರಸ್ಕಾರ ಉಂಟಾಗಿ ಪಾಶ್ಚಾತ್ಯ ಪದ್ಧತಿಗೆ ಶರಣು ಹೊಡೆವ ಪ್ರವೃತ್ತಿ ಬಲವಾಗುತ್ತ ಹೋಗಿದೆ. ಇದು ಕೆಲ ಮಟ್ಟಿಗೆ ನಿಜವಾದರೂ ಸರ್ವತ್ರ ಸರಿಯೆನ್ನಲಾಗದು. ಪಶುವಿಗಿಂತ ಶ್ರೇಷ್ಠನೆನಿಸಲು ಮನುಷ್ಯನಿಗೆ ವಿಚಾರ ಶಕ್ತಿ ಇರುವದೇ ಕಾರಣ. ಅಂತಹ ವಿಚಾರ ಶಕ್ತಿಯುಳ್ಳ ಮನುಷ್ಯನು ಕೇವಲ ಪಂಚೇಂದ್ರಿಯ ತೃಪ್ತಿಗಾಗಿ ಹೆಣ್ಣುಗಂಡಿನ ಸಂಬಂಧವನ್ನಿಟ್ಟುಕೊಳ್ಳುವುದು ಅವನ ಮಾನವತೆಯ ಮಟ್ಟಕ್ಕೆ ಭೂಷಣವಲ್ಲ. ಇದರಿಂದಾಗಿ ನಮ್ಮ ಪೂರ್ವಜರು ಸಂತಾನವೇ ವಿವಾಹದ ಗುರಿ ಎಂದರು. ಮಾತಾ ಪಿತೃಗಳೇ ದೇವರೆಂದರು. ಅಂತಹ ದೇವತ್ವವನ್ನು ಪಡೆವ ಬುದ್ಧಿಯಿಂದಲೇ ತರುಣ, ತರುಣಿಯರು ವಿವಾಹವಾಗತಕ್ಕದ್ದು ನಾಗರಿಕತೆಗೆ ಕಿರೀಟ ಪ್ರಾಯವಾದುದು.

ಮೊದಲು ಮದುವೆ,ಕಡೆಗೆ ಪ್ರೀತಿ ಎಂಬ ಪದ್ಧತಿಯು ಮನಃ ಶಾಸ್ತ್ರಕ್ಕೆ ಸಮಂಜಸವಾದುದು. ಇದರಲ್ಲಿ ಅಪವಾದ ಸಂದರ್ಭಗಳನ್ನು ದೂರವಿಡತಕ್ಕದ್ದು. ಮನುಷ್ಯನ ಮನಸ್ಸು ಪರಿವರ್ತನ ಹೊಂದುತ್ತಿರುವ ತಾರುಣ್ಯದಲ್ಲಿ ತರುಣ ತರುಣಿಯರು ಪರಸ್ಪರರನ್ನು ಅರಿತುಕೊಳ್ಳಲಾರದೆಂಬುದು ಅನುಭವ ಸಿದ್ಧವಾದುದೆಂಬುದಕ್ಕೆ ಅಮೇರಿಕ ಮೊದಲಾದ ಪಾಶ್ಚಾತ್ಯ ಪದ್ಧತಿಯು ಪರವಾವಧಿಗೆ ಮುಟ್ಟಿದ ದೇಶಗಳಲ್ಲಿ ಸ್ತ್ರೀ ಪುರುಷ ಸಮಾನತೆಯ ವಿಶಿಷ್ಟ ಮುಖವು ವಿಲಕ್ಷಣವಾಗಿ ಬೆಳೆದು ವಿವಾಹ ವಿಚ್ಛೇದವು ಅನಿವಾರ್ಯವಾದ ಒಂದು ಯೋಗವಾಗಿ ಪರಿಣಮಿಸಿದುದೇ ಸಾಕ್ಷಿ. ಇದಕ್ಕೆ ವಿವಾಹ ವಿಚ್ಛೇದವೆಂಬ ಅಪದ್ಧರ್ಮವನ್ನು ನಿತ್ಯ ಧರ್ಮವನ್ನಾಗಿ ಬಳಸಿದುದೇ ಕಾರಣ. ಅಣ್ಣ ತಂಗಿಯರು ಹೇಗೆ ತಮ್ಮ ಹುಟ್ಟಿನಿಂದ ಪರಸ್ಪರ ಪ್ರೀತಿ ಬಾಂಧವ್ಯಗಳನ್ನು ಬೆಳೆಸಿಕೊಳ್ಳುವರೋ ಅಷ್ಟೇ ಸಹಜವಾಗಿ ಪ್ರಾಯದ ಮೊದಲ ಹಂತದಲ್ಲಿ ಕುಲಶೀಲಾದಿ ಸಾಮ್ಯದಿಂದ ತರುಣ ತರುಣಿಯರು ತಮ್ಮಲ್ಲಿ ಸಖ್ಯವನ್ನು ಸ್ಥಿರವಾಗಿ ಬೆಳೆಸಿಕೊಳ್ಳಬಲ್ಲರು. ಹಾಗಲ್ಲದೆ ನಡು ಹರೆಯದ ಪರೀಕ್ಷಕ ಬುದ್ಧಿಯ ತರುಣ ತರುಣಿಯರು ದೋಷೈಕ ದೃಷ್ಟಿಯುಳ್ಳವರಾಗಿ ಕಡೆಗೂ ಒಮ್ಮತಕ್ಕೆ ಬರಲಾರದ ವಿವಾಹ ವಿಚ್ಛೇದಕ್ಕೆ ಶರಣಾಗುವದರಿಂದ ಅವರು ಕುಟುಂಬ ಜೀವನದ ಸೌಖ್ಯದಿಂದ ತಾವು ವಂಚಿತರಾಗುವದಲ್ಲದೆ ಹುಟ್ಟಿದ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ಹಿಮಾಲಯೋಪಮ ವಿಘ್ನವನ್ನು ತಂದೊಡ್ಡುವರು. ಇದೇ ಮಾತನ್ನು ಡಾಕ್ಟರ್ ಬ್ರೇನ್ ಬರ್ಡ್, ಮಿ.ಸ್ ಡಿ. ವಿಲೇಸ್ಟಿ ವಂತಾದ ಮನೋವಿಜ್ಞಾನಿಗಳು ಸಮರ್ಥಿಸಿ ವಿವಾಹ ವಿಚ್ಛೇದವನ್ನು ನಿತ್ಯ ಧರ್ಮವಾಗಿ ಮಾಡಿಕೊಳ್ಳುವದನ್ನು ತಿರಸ್ಕರಿಸಲಂಜಿ ಬೇರಾದ ಗಂಡ ಹೆಂಡಿರು ಮಕ್ಕಳೆದುರು ತಮ್ಮ ಮನಃಕಷ್ಟಯದನ್ನು ತೋರಿಕೊಳ್ಳದೆ ನಾಗರಿಕರಾಗಿ ನಡೆದುಕೊಳ್ಳಬೇಕು.- ಹಾಗೆ ಹೀಗೆಂದು ಸಾಮಾನ್ಯರಿಗೆ ಸಾಧ್ಯವಾಗದ ಮನಃಸಂಯಮವನ್ನು ಬೋಧಿಸಹೋಗಿದ್ದಾರೆ. ಇದರಿಂದ ಹಿಂದು ನಾಗರಿಕತೆ ಹೇಗೆ ಇಂದಿನ ಪಾಶ್ಚಾತ್ಯ ನಾಗರಿಕತೆ ಕಾಣದ ಉತ್ತಮಾದರ್ಶವನ್ನು ಎಂದೋ ಅಳವಡಿಸಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಇಷ್ಟು ಮಾತ್ರ ನಿಜ. ವಿವಾಹ ವಿಚ್ಛೇದವು ಅಪದ್ಧರ್ಮವಾಗಿ ಇಂತಕ್ಕದ್ದು ಅತ್ಯಗತ್ಯ. ಅದನ್ನು ಪಾಶ್ಚಾತ್ಯರಿಂದ ಹಾಗೆ ನಾವು ಸ್ವೀಕರಿಸಬಹುದು. ಅದರೆ ಅದರ ದುಷ್ಪರಿಣಾಮ [illegible]

ಕಾಶ್ಮೀರ ಮತ್ತು ಕಂನಾಡು

[ಮಾನ್ಯ ಸಂಪಾದಕರೆ,

ತಮ್ಮ ೮—೧೨—೪೭ರ "ಕರ್ಮವೀರ"ಪತ್ರಿಕೆಯಲ್ಲಿ 'ಕಾಶ್ಮೀರ ಮತ್ತು ಹಿಂದುಸ್ತಾನ' ಎಂಬ ಒಂದು ಟಿಪ್ಪಣಿ ೧೩ ನೆಯ ಪುಟದಲ್ಲಿ ಅಚ್ಚಾಗಿದೆ. ಅದು ಉದ್ಬೋಧಕವಾಗಿದ್ದು ನಿಮ್ಮ ಓದುಗರಿಗೆ ಹಲವು ಹೊಸ ಸಂಗತಿಗಳನ್ನು ತಿಳಿಸಿಕೊಡುವಂತಹದಾಗಿದೆ. ಅದರೊಡನೆ ಈ ಕೆಳಗಿನ ನಾಲ್ಕು ಮಾತುಗಳೂ ಸೇರಿದಲ್ಲಿ ಅದು ಇನ್ನೂ ಹೆಚ್ಚು ಮಹತ್ವದ್ದಾಗುವುದೆಂದು ಈ ಟೀಪಿಯನ್ನು ಅದಕ್ಕೆ ಜೋಡಿಸಲು ಬಿನ್ನವಿಸಿಕೊಳ್ಳುತ್ತಲಿದ್ದೇನೆ.]

ಕಾಶ್ಮೀರ ಮತ್ತು ಕಂನಾಡಿನ ಸಂಬಂಧವಾಗಿ ರಾಜತರಂಗಿಣಿಯಲ್ಲಿ ಇನ್ನೂ ಕೆಲವು ಉಲ್ಲೇಖಗಳುಂಟು. 'ರಟ್ಟಾ'ಖ್ಯಾ ಚಟುಲೇಕ್ಷಣಾ ಕರ್ಣಾಟೀ' ಯೊಬ್ಬಳ ವರ್ಣನೆ ಬಂದಿದೆ. ನಮ್ಮ ರಡ್ಡೀ ಹೆಣ್ಣುಮಗಳ ಚೆಲುವಿಕೆಯ ವರ್ಣನೆಯನ್ನು ಅಲ್ಲಿ ಕಾಣಬಹುದು. ಹಾಡಿಗ್ರಾಮವೆಂಬ ಊರ ಉಲ್ಲೇಖ ಅದರಲ್ಲಿದೆ.

ಶ್ರೀ ಶಂಕರಾಚಾರ್ಯರು ಶಾರದಾಂಬೆಯನ್ನ ಕಾಶ್ಮೀರದಿಂದಲೇ ಕಂನಾಡಿಗೆ ತಂದರೆಂದು ಒಂದು ಆಖ್ಯಾಯಿಕೆಯಿದೆ. 'ನಮಸ್ತೇ ಶಾರದಾ ದೇವೀ ಕಾಶ್ಮೀರ ಪುರವಾಸಿನೀ' ಎಂಬಸ್ತೋತ್ರವನ್ನು ಹೇಳುವ ವಾಡಿಕೆ ನಮ್ಮಲ್ಲಿ ಈಗಲೂ ಉಂಟು.

ವಿನಯವಿಕ್ರಮನ ಆಶ್ರಯವನ್ನು ಪಡೆದಬಿಲ್ಹಣನುಕಾಶ್ಮೀರಪಂಡಿತನು. ಕಂನಾಡಿನಲ್ಲಿಆಶ್ರಯವನ್ನು ಹೊಂದಿ ಅಭಿವೃದ್ಧಿಗೆ ಬಂದಿರುವ. ಕಲ್ಹಣ, ಬಿಲ್ಹಣಗಳೊಳಗಿನ ಅಣ (ಅಣ್ಣ) ಎಂಬ ಸನ್ಮಾನಾರ್ಥಕ ಪದವುಅಂದಿನ ಕಂನಾಡ ವರ್ಚಸ್ಸಿನ ದ್ಯೋತಕವಾಗಿದೆ.

ಸಾರಸ್ವತರು ಕಾಶ್ಮೀರದಿಂದ ಬಂದವರೆಂದು ನಂಬುಗೆಯಿದೆ. ಮುಸಲ್ಮಾನರಕಾಟದಿಂದ ಕಂನಾಡೇ ಅವರನ್ನು ಕಾಪಾಡಿತು.ಅದಕ್ಕಾಗಿತಾವುಕಂನಾಡಿನ ಬಗೆಗೆಎಷ್ಟುಕೃತಜ್ಞರಾಗಿದ್ದರೂಕಡಿಮೆಯೇ ಎಂದು ವಿಚಾರಿಗಳಾದ ಹಲವು ಸಾರಸ್ವತರುಹೇಳುವುದು ತೀರ ಸರಿಯಾಗಿದೆ. ಕಂನಾಡಿನ ಸಹಾವಾಸೀ ಬ್ರಾಹ್ಮಣರೂ ಕಾಶ್ಮೀರಿನಿಂದ ಇಲ್ಲಿ ಬಂದವರೆಂದು ಶಾಸನಗಳಿಂದ ಕಂಡು ಬಂದಿದೆ.

ಇಂತಿದು ಕಾಶ್ಮೀರ ಮತ್ತು ಕಂನಾಡಿನ ನಡುವಿನ ನಿಕಟ ಸಂಬಂಧ. ನೇಪಾಳದಲ್ಲಿ ಆಳಿದ ಒಂದು 'ಕರ್ನಾಟ ಕ್ಷತ್ರಿಯರ' ಮನೆತನವನ್ನು ನೆನೆದುಕೊಂಡರೆ ಹಿಮಾಲಯದ ಭಾಗದಲ್ಲಿ ಒಂದು ಕಾಲಕ್ಕೆ ಕಂನಾಡವರ ವರ್ಚಸ್ಸು ಎಷ್ಟು ಇದ್ದಿತೆಂಬುದು ಸ್ಪಷ್ಟವಾಗುತ್ತದೆ.

ಎಡೆಗಳು ಹೇಳುವ 'ಕಂನಾಡ ಕತೆ' ಯಲ್ಲಿ ಇನ್ನೂ ಕೆಲವು ಸಂಗತಿಗಳ ಮೂಲಕ ಕಾಶ್ಮೀರ ನೊಡನೆ ಈ ನಾಡವರ ನಿಕಟ ಸಂಬಂಧವಿದ್ದುದನ್ನು ವಿವರಿಸಿದ್ದೇನೆ. ಈಗ ಅಲ್ಲಿಯ ಯುದ್ಧದ ವರ್ಣನೆಗಳಲ್ಲಿ ಹಲವು ಊರುಗಳ ಹೆಸರುಗಳು ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುತ್ತಿರುತ್ತವೆ. 'ಪಾಡಿ' 'ಪಟ್ಟಣ' ಎಂಬುವು ಮಾತ್ರ ಅಲ್ಲಿ ಇದ್ದುದನ್ನು ನಾನು ಮೊದಲು ಅರಿತಿದ್ದೆ. ಅವು ಕಂನಾಡ ಹಟ್ಟೀಕಾರರ ಪ್ರಾಗೈತಿಹಾಸಿಕ ಕಾಲದ ಕುರುಹುಗಳೆಂದ 'ಕಂನಾಡ ಕತೆ'ಯಲ್ಲಿ ವಿವರಿಸಿದ್ದಾಗಿದೆ.

ಅದರೆ ಈಗ ಇನ್ನೂ ಕೆಲವು ಮಹತ್ವದ ನಿಸ್ಸಂದಿಗ್ಧವಾದ ಊರ ಹೆಸರುಗಳು ಪತ್ರಿಕೆಗಳಲ್ಲಿ ಬರುತ್ತಲಿವೆ. ಪಟ್ಟಣ, ಊರಿ. ಮಾಹೂರಾ, ರಾಜೋರಿ ಎಂಬ ಈ ಊರುಗಳು ಕಂನಾಡಿನ ಎಡೆಗಳಾದ ಹೆಸರುಗಳನ್ನು ಸ್ಪಷ್ಟವಾಗಿ ನೆನಪಿಗೆ ತಂದು ಕೊಡುತ್ತಿವೆ. ಊರಿ, ಊರಾ ಎಂಬುವು ಊರು ಎಂಬುದರ ರೂಪಗಳೆಂಬಲ್ಲಿ ಸಂದೇಹವಿಲ್ಲ. ಡಾ. ಸುನೀತಿ ಕುಮಾರ ಚಟರ್ಜಿಯವರೂ ಬಂಕೂರಾ ಹಮಾರಾಗಳು ಬಂಗಾಳದೊಳಗಿನ 'ದ್ರಾವಿಡರ (?) ಪ್ರಭಾವದ ಕುರುಹುಗಳೆಂದು ಸಿದ್ಧಪಡಿಸಿದ್ದಾರೆ. ಅದರೆ 'ದ್ರಾವಿಡ'ವೆಂಬುವದುಸಂದಿಗ್ಧಾರ್ಥದ ಅಪಾರ್ಥದಾಯಕ ಪದವೆಂದು ಬಲ್ಲವರೇ ಒಪ್ಪಿಕೊಂಡಿರುವರು. ಉತ್ತರದಲ್ಲಿರುವ 'ದ್ರಾವಿಡರ' ಪ್ರಭಾವವೆಂಬುದು ಕಂನಾಡ ಹಟ್ಟಿಕಾರ ಜನಗಳ ಕೈವಾಡವೆಂದು ಇಂದಿನ ಸಂಶೋಧನೆಯಿಂದ ಕಂಡು ಬರುತ್ತಲಿದೆ.

—ಶಂ ಬಾ. ಜೋಶಿ

ದೇಹ, ಆತ್ಮ, ಮನಸ್ಸು, ಬುದ್ಧಿ ಗಳ ಬೆಳವಣಿಗೆಗೆ ಉಂಟಾಗುವ ಅಪಾಯ ಎಂತಹ ಭಯಂಕರವಾದುದೆಂಬುದನ್ನು ಯಾರೂ ಮರೆಯಕೂಡದು. ತಂದೆ ತಾಯಿಗಳಬ್ಬರಲ್ಲೂ ನ್ಯಾಯವಾದ, ಸಹಜವಾದ ಗಾಢ ಪ್ರೇಮವುಳ್ಳ, ಮಗುವಿಗೆ ಒಮ್ಮಿಂದೊಮ್ಮೆ ತಾಯಿ ತಂದೆಯರು ಎಂದಿಗೂ ಕೂಡದಂತೆ ಬೇರೆಯಾಗಿ ನಿಲ್ಲುವುದು ತಿಳಿದು ಬಂದರೆ ಆಗುವ ಯಾತನೆಯನ್ನು ಅನುಭವಿಸಿಯಲ್ಲವೇ ತಿಳಿಯಲಶಕ್ಯ ಆದುದರಿಂದ ಪಾಶ್ಚಾತ್ಯ ನಾಗರಿಕತೆಯ ಗುಣಾಂಶಗಳನ್ನು ಸ್ವೀಕರಿಸುವಾಗಲೂ, ಚೆನ್ನಾಗಿ ಪರಾಮರ್ಶಿಸಿ ದೇಶ ಕಾಲ ಕಾರ್ಯಮ್ಯ

ಕರ್ನಾಟಕ

ಧಾರವಾಡ

ಗದಗಿನಲ್ಲಿ ಮಣ್ಣೆ ೧ ರೂಪಾಯಿ ಕೊಟ್ಟರೂ ಕಟ್ಟಿಗೆ ಸಿಕ್ಕದೆ ಗೋಳಾಡುವ ಪ್ರಸಂಗ ಬಂದದ್ದರಿಂದ ಕಲೆಕ್ಟರರು ಪೆಟ್ರೋಲ ಸೂಕ್ತ ಕಟ್ಟಿಗೆ ಬರುವಂತೆ ನೋಡಿಕೊಳ್ಳಬೇಕೆಂದು ಮುನಸಿಪಲ್ ಸದಸ್ಯರಾದ ಶ್ರೀ ಎಂ. ಎ. ಸೌದಾಗರರು ಬಿನ್ನವಿಸುತ್ತಾರೆ.

ಮುಮ್ಮಿಗಟ್ಟಿ ಕಾಂಗ್ರೆಸ ಕಾರ್ಯಕರ್ತರಾದ ಅಡಿವೆಪ್ಪನವರನ್ನು ಗುಂಡಿಕ್ಕಿ ಕೊಲೆ ಮಾಡಿದ ಆರೋಪದಿಂದ ಭೀಮಪ್ಪ ಮುಲವಾಡಿ, ಭೀಮಪ್ಪ ಗೋಡಿ, ಶ್ರೀಮಂತ ಬಾಳಾಸಾಹೇಬ ದೇಸಾಯಿ ಇವರ ಮೇಲೆ ಧಾರವಾಡ ಜಿಲ್ಹಾ ನ್ಯಾಯಾಧೀಶರ ಕೋರ್ಟಿನಲ್ಲಿ ಖಟ್ಲೆ ನಡೆದಿದ್ದು ಕೆಲವು ಸಾಕ್ಷಿಗಳಾದವು.

ಧಾರವಾಡ ಜಿಲ್ಹಾ ಶೇತಕಿ ಪ್ರದರ್ಶನ ಮತ್ತು ಸಹಕಾರೀ ಪರಿಷತ್ತು ಜಾನೇವರಿ ಮೂರನೇ ವಾರದಲ್ಲಿ ರ್‍ಹೋಣದಲ್ಲಿ ಜರಗುವದು ಗೊತ್ತಾಗಿದೆ. ಮಾನ್ಯ ಮಲ್ಲನಗೌಡ ಪಾಟೀಲರು ಪ್ರದರ್ಶನದ ಉದ್ಘಾಟನ ಮಾಡುವರು. ಹಿಂದಿನ ಮಂತ್ರಿಗಳಾದ ಶ್ರೀ ಎಸ್. ಟಿ. ಕಂಬಳಿಯವರು ಪರಿಷತ್ತಿನ ಅಧ್ಯಕ್ಷತೆ ವಹಿಸುವರು. ಚರ್ಚಿಸತಕ್ಕ ವಿಷಯಗಳನ್ನು ಇದೇ ೨೦ ನೇ ತಾರೀಖಿನೊಳಗಾಗಿ ಚಿಟಣೀಸರ ಕಡೆಗೆ ಕಳಿಸಬೇಕೆಂದು ಪ್ರಕಟಿಸಲಾಗಿದೆ.

ಕರ್ನಾಟಕ ಮಧ್ಯಮ ವರ್ಗದ ಹಿಂದೂ ಅಲ್ಪಸಂಖ್ಯಾಕರ ಸಭೆಯನ್ನು ಹುಬ್ಬಳ್ಳಿಯಲ್ಲಿ ಡಿಸೆಂಬರ ೩೦ಕ್ಕೆ ಕೂಡಿಸಬೇಕೆಂದು ನಿರ್ಧರಿಸಲ್ಪಟ್ಟಿದೆ.

ಎಂ. ಎಸ್. ಎಂ. ರೇಲ್ವೆಯ ಸಾಪ್ತಾಹಿಕ ಗಜೆಟನ್ನು ಕನ್ನಡ ಮರಾಠಿ ಎರಡೂ ಭಾಷೆಗಳಲ್ಲಿ ಬರೆಯಬೇಕೆಂದು ನಿರ್ಧರಿಸಲಾಗಿದೆ. ಜನತೆಯ ಬೇಡಿಕೆಯನ್ನು ಲಕ್ಷಿಸಿ ಹೀಗೆ ಮಾಡಿದ್ದಾರೆ.

ಹುಬ್ಬಳ್ಳಿಯಲ್ಲಿ ಬರುವ ಜೂನ ತಿಂಗಳಿಂದ ತಾಂತ್ರಿಕ ಶಾಲೆಯನ್ನು ಸ್ಥಾಪಿಸಲಾಗುವದು. ಸರಕಾರದವರ ಬರುವ ಬಜೆಟ್ಟಿನಲ್ಲಿ ಈ ವಿಷಯ ಇದೆ.

ಸಾಂಗಲಿಯಲ್ಲಿ ನಡೆದ ಅಂತರ್ ವಿದ್ಯಾಲಯ ಪಂದ್ಯಾಟಗಳಲ್ಲಿ ಧಾರವಾಡ ಕರ್ನಾಟಕ ಎಜ್ಯುಕೇಶನ ಬೋರ್ಡ ಕಾಲೇಜಿನ ಶ್ರೀ ಸಿಂದೆಯವರು ೧ ಮೈಲಿನ ಸ್ಪರ್ಧೆಯಲ್ಲಿ ಮೊದಲನೆ ನಂಬರ ಬಂದು ವಿಶ್ವವಿದ್ಯಾಲಯದ ವಿಕ್ರಮ ಮುರಿದರು.

ಬೆಳಗಾವಿ

ಕೊಲ್ಹಾಪೂರದ ಗಣಪತಿ ಮಾಂಡಲಿಕನೆಂಬವನು ತನ್ನ ಪ್ರೀತಿಯ ಹೆಂಗಸಿನ ಸಲುವಾಗಿ ತನ್ನ ತಂಗಿಯ ೧೦ ಸಾವಿರ ರೂಪಾಯಿ ಬೆಲೆ ಬಾಳುವ ಆಭರಣಗಳನ್ನು ಅಪಹರಿಸಿಕೊಂಡು ಅವಳೊಡನೆ ಬೆಳಗಾವಿಗೆ ಓಡಿ ಹೋಗಿದ್ದನು. ಕೊಲ್ಹಾಪುರ ಪೋಲೀಸರು ಬೆಳಗಾವಿಗೆ ಬಂದು ಇಬ್ಬರನ್ನೂ ಸೆರೆಹಿಡಿದುಕೊಂಡು ಹೋಗಿರುವರು. ೮ ಸಾವಿರ ರೂಪಾಯಿಗಳ ಆಭರಣಗಳು ದೊರೆತಿವೆ.

ಎಕ್ಸಂಬಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಸ್ಥಾಪಿತವಾದ ಸಮಾಜ ಸೇವಾ ಪಥಕದವರು ಸಮಾಜ ಜಾಗ್ರತಿಗಾಗಿ ೩೦ ನೇ ತಾರೀಕು ಕಳ್ಳಪೇಟೆ (ಬ್ಲ್ಯಾಕ್ ಮಾರ್ಕೆಟ) ನಾಟಕವನ್ನು ಅಭಿನಯಿಸಿ ತೋರಿಸಿದರು-ನೆರೆದ ಮಹನೀಯರು ಸಂತೋಷಪಟ್ಟು ೫೦ ರೂ. ಗಳಷ್ಟು ಬಹುಮಾನ ಕೊಟ್ಟರು. ಸಮಾಜ ಜಾಗ್ರತಿಯ ಕಾರ್ಯದಲ್ಲಿ ಸಹಾಯ ಮಾಡಿದ್ದಕ್ಕಾಗಿ ನಾಗರಿಕರನ್ನು ಅಭಿನಂದಿಸಲಾಯಿತು.

ಬೆಳಗಾವಿ ಜಿಲ್ಹಾ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಶೇಖ ಸಾಹೇಬರು ಜಮಖಂಡಿ ರಾಜೇಸಾಹೇಬರಿಗೆ ಪತ್ರಬರೆದು ಹಿಂದೀ ಒಕ್ಕೂಟ ಸರಕಾರದಲ್ಲಿ ಸಮಾವೇಶ ಹೊಂದುವ ನಿರ್ಣಯ ಕೈಕೊಂಡದ್ದಕ್ಕಾಗಿ ಅವರನ್ನು ಅಭಿನಂದಿಸಿದ್ದಾರೆ. ಉಳಿದ ರಾಜೇಸಾಹೇಬರೂ ಇವರ ಅನುಕರಣವನ್ನು ಮಾಡಬೇಕೆಂದು ಅವರ ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಅಣ್ಣಾ ಗುರೂಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿ ಜಿಲ್ಹಾ ಸೇವಾದಲ ಕಾರ್ಯಕರ್ತರ ಸಭೆ ಸೇರಿ ಸೇವಾದಲದ ಸಂಘಟನೆಯನ್ನು ಭರದಿಂದ ಸಾಗಿಸಬೇಕೆಂದು ನಿರ್ಣಯಿಸಲಾಯಿತು. ರಾಷ್ಟ್ರೀಯ ಸೇವಾದಲದ ಹೆಸರನ್ನು ಕಾಂಗ್ರೆಸ ಸೇವಾದಲ ಎಂದು ಇಡಬೇಕೆಂದು ಗೊತ್ತಾಯಿತು. ಈ ಸಂಬಂಧದಲ್ಲಿ ಹಲವು ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ಬೆಳಗಾವಿಯ ದಿ ಕರ್ನಾಟಕ ಇಂಡಸ್ಟ್ರೀಜ ಗ್ಲಾಸ ವರ್ಕ್ಸದ ಕಚೇರಿಯಲ್ಲಿ ಯಾರೋ ಬಾಗಿಲು ಮುರಿದು ೯೬೦ ರೂ. ಗಳನ್ನು ಎತ್ತಿಕೊಂಡು ಹೋಗಿರುವರು. ಕಚೇರಿಯಲ್ಲಿಯ ಶಿಪಾಯಿಯನ್ನು ಬಂಧಿಸಲಾಗಿ ಅವನ ಹತ್ತಿರ ರೂಪಾಯಿಯ ಪೆಟ್ಟಿಗೆಯಲ್ಲಿದ್ದ ೭೦೦ ರೂ. ಗಳು ಸಿಕ್ಕಿವೆ.

ವಿಜಾಪುರ

ಬಾಗಲಕೋಟೆಯಲ್ಲಿ ವಿರಾಶ್ರಿತರ ವಿಧಿ ಕೂಡಿಸುವ ಕೆಲಸ ಭರದಿಂದ ಸಾಗಿದೆ. ವಿದ್ಯಾರ್ಥಿಗಳು ಕಲಾದಗಿ ಮತ್ತು ಸುತ್ತುಮುತ್ತಲಿನ ಹಳ್ಳಿಗಳಿಗೆ ಹೋಗಿ ೧೫೫-೫-೬ ಹಣ ಕೂಡಿಸಿಕೊಂಡು ಬಂದರು. ಬಸವೇಶ್ವರ ಕಾಲೆಜು ಶಿಕ್ಷಕರೂ ವಿದ್ಯಾರ್ಥಿಗಳೂ ನಗರದಲ್ಲಿ ಅಡ್ಡಾಡಿ ೩೭೪-೧-೦ ಹಣ ಕೂಡಿಸಿದ್ದಲ್ಲದೆ ಬಟ್ಟೆ ಆಹಾರ ಧಾನ್ಯಗಳನ್ನು ಕೂಡಿಸಿರುವರು.

ಅನಗವಾಡಿ(ಪೇಶಾ ಬೇಳಗಿ) ಕಾಳಿನ ಡಿಪೋದಲ್ಲಿ ಕಾಳು ಮಾರುವದನ್ನು ನಿಲ್ಲಿಸಿದ್ದರಿಂದ ಬಡವರಿಗೆ ಬಹಳ ತೊಂದರೆಯಾಗಿದೆ. ಮುಂಗಾರಿ ಬೆಳೆಯ ರಾಶಿ ಇನ್ನೂ ಆಗಿಲ್ಲದ್ದರಿಂದ ಬಹಳ ರಾಶಿ ಆಗುವ ಸಂಭವವೂ ಇಲ್ಲದ್ದರಿಂದ ಕೂಡಿ ರೂಪದಲ್ಲಿ ಕಾಳು ಸಿಕ್ಕದಂತಾಗಿದೆ. ಲಿಫ್ಟ ಪಂಪ ನೀರಾವರಿ ಎಂಜಿನ್ನು ಜಂಗು ತಿನ್ನುತ್ತ ಬಿದ್ದಿದೆ. ಅದನ್ನಾದರೂ ತೀವ್ರ ಮತ್ತೆ ಶುರು ಮಾಡಿದರೆ ನೂರಾರು ಎಕರೆ ಭೂಮಿಯಲ್ಲಾದರೂ ಬೇಸಿಗೆ ಬೆಳೆ ತೆಗೆದುಕೊಳ್ಳಲು ಅನುವಾಗುವದು. ಸರಕಾರದವರು ಇತ್ತ ಗಮನಿಸುವರೆ ಎಂದು ಓರ್ವರು ಕೇಳುತ್ತಾರೆ.

ಶ್ರೀ ಯಲ್ಲಪ್ಪಾ ಸಿದ್ದರಾಮಪ್ಪಾ ನಾಗಠಾಣಕರ ವಿಜಾಪೂರ ಹರಿಜನ ಸಂಘದ ವಿಜಾಪುರ ಜಿಲ್ಹಾ ಪ್ರಚಾರಕರಾಗಿ ನೇಮಿಸಲ್ಪಟ್ಟಿದ್ದು ಅವರಿಗೆ ಎಲ್ಲರೂ ಸಹಾಯ ಮಾಡಬೇಕಾಗಿ ಪ್ರಾಂತೀಯ ಸಂಘದ ಅಧ್ಯಕ್ಷರು ಬಿನ್ನವಿಸಿದ್ದಾರೆ.

ಕನ್ನಡ ಸಂಸ್ಥಾನ

ಮೈಸೂರ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ದಾವಣಗೆರಿ ಮುನಸಿಪಾಲಿಟಿ ಚುನಾವಣೆ ಪ್ರಚಾರಕ್ಕಾಗಿ ಬಂದಾಗ ವ್ಯಾಪಾರಿ ಸಂಘದವರೂ ನಗರ ಸಭೆಯವರೂ ಅವರಿಗೆ ಮಾನಪತ್ರ ಸಮರ್ಪಿಸಿದರು. ಅವರ ಸಾರ್ವಜನಿಕ ಭಾಷಣವಾಯಿತು. ಸ್ಟೇಶನದಿಂದ ಅವರನ್ನು ಒಳ್ಳೆ ಸಂಭ್ರಮದಿಂದ ಕರೆಕೊಂಡು ಹೋಗಲಾಯಿತು.

ನೇಮತಿಯಲ್ಲಿ ಆಹಾರ ಕೊರತೆಯಿದ್ದುದರಿಂದ ತಾಲೂಕ ಕಾಂಗ್ರೆಸ ಸಮಿತಿಯ ಕಾರ್ಯಕರ್ತರು ಸೊಗಿಲ ಗ್ರಾಮದ ರೈತರಿಂದ ೧೪ ಪಲ್ಲ ಭತ್ತ ಶೇಖರಿಸಿಕೊಂಡು ಹಂಚಿದರು.

ಜಿಲ್ಹಾಧಿಕಾರಿಗಳು ತೀರ್ಥಹಳ್ಳಿಗೆ ಹೋಗಿ ದೇವಸ್ಥಾನದ ಸಂಬಂಧದಲ್ಲಿ ತಕ್ಕ ಸಲಹೆ ಕೊಟ್ಟು ಹೆರಿಗೆ ಆಸ್ಪತ್ರೆ ಕಟ್ಟಿಸಲು ೩೦೦೦ ರೂಪಾಯಿ ಕೂಡಿಸಿದ್ದಕ್ಕೆ ಸಂತೋಷ ಪ್ರದರ್ಶಿಸಿ ಚರ್ಚನ್ನು ಬೇರೆ ಕಡೆ ಕಟ್ಟಲು ಸಲಹೆ ಇತ್ತರು.

ತೀರ್ಥಹಳ್ಳಿ ಮಲೆನಾಡು ಗೇಣೀದಾರ ಸಂಘದವರು ಮುಖ್ಯ ಮಂತ್ರಿಗಳನ್ನೂ ಹಣಕಾಸಿನ ಮಂತ್ರಿಗಳನ್ನೂ ಕಂಡು ಗೇಣೀದಾರರ ಕಠಿಣ ಪರಿಸ್ಥಿತಿ ಮತ್ತು ಸರಕಾರದಿಂದ ಆಗಬೇಕಾದ ಅನುಕೂಲತೆಗಳನ್ನು ತಿಳಿಸಿದರು. ಅಳತೆ ತೂಕ ಕಾನೂನನ್ನು ಬೇಗ ತಿದ್ದುಪಡಿ ಮಾಡಲೂ ಕೇಳಿಕೊಂಡರು. ಪರಿಶೀಲಿಸುವದಾಗಿ ಮಂತ್ರಿಗಳು ಉತ್ತರಿಸಿದರು.

ಜಮಖಂಡಿ ಸಂಸ್ಥಾನದ ಪ್ರಜಾ ಪರಿಷತ್ತಿನ ೧೨ ನೇ ಅಧಿವೇಶನವನ್ನು ಬನಹಟ್ಟಿಯಲ್ಲಿ ಇದೇ ತಿಂಗಳ ೩ ನೇ ವಾರ ನೆರವೇರಿಸಲಾಗುವದು. ರಾಜೇಸಾಹೇಬರು ಅದರ ಪ್ರಾರಂಭೋತ್ಸವ ಜರಗಿಸುವರು. ಶ್ರೀ ಅಂದಾನೆಪ್ಪ ದೊಡ್ಡಮೇಟಿಯವರು ಅಧ್ಯಕ್ಷತೆ ವಹಿಸುವರು. ಮ. ಗಿ. ಕಲಕಂಬರು ಸ್ವಾಗತಾಧ್ಯಕ್ಷರು.

ಚೆನ್ನರಾಯಪಟ್ಟಣದ ಗರ್ಲ್ಸ ಮಿಡ್ಲ ಸ್ಕೂಲಿನ ಪ್ರಥಮ ವಾರ್ಷಿಕೋತ್ಸವ ೫ ನೇ ತಾ. ಅಮಲದಾರ ಮ್ಯಾಜಿಸ್ಟ್ರೇಟರ ಅಧ್ಯಕ್ಷತೆಯಲ್ಲಿ ಸೇರಿ ತಾ ೬ ನೇ ದಿನ ಮಹಿಳೆಯರಿಗಾಗಿ ವಿವಿಧ ವಿನೋದಾವಳಿಗಳು ಶ್ರೀ ಸುವರ್ಣಮ್ಮನವರ ಅಧ್ಯಕ್ಷತೆಯಲ್ಲಿ ನಡೆದವು. ಅವರ ಹಸ್ತದಿಂದ ಪಾರಿತೋಷಕ ಕೊಡಿಸಲಾಯಿತು.

ಜಮಖಂಡಿ ರಾಜೇಸಾಹೇಬರು ತಮ್ಮ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ಸಮಾವೇಶ ಮಾಡಿಬಿಡಲು ಸರದಾರ ವಲ್ಲಭಭಾಯಿಯವರೊಡನೆ ಈ ಮೊದಲು ಮಾತುಕತೆ ನಡೆಸಿದ್ದು ಅದನ್ನು ಕಾರ್ಯರೂಪಕ್ಕೆ ತರುವದಕ್ಕಾಗಿ ಪತ್ರವ್ಯವಹಾರ ನಡೆಸುವರಾಗಿ ತಿಳಿಯುತ್ತದೆ. ಇದೇ ೧೫ ರಿಂದ ೨೦ ರ ವರೆಗೆ ಅವರು ಕುಂದಗೋಳ ತಾಲೂಕಿನಲ್ಲಿ ಸಂಚರಿಸಲಿರುವರು.

೧೯೪೬ ರ ಆರೀಚಾರ ಚಳವಳಿಯಲ್ಲಿ ಸಿಕ್ಕಿಬಿದ್ದು ದಂಡವನ್ನು ಅವರವರಿಗೆ ಮರಳಿ ಕೊಡಬೇಕೆಂದು ಹಿರಿಯ ಸಂಸ್ಥಾನಿಕ ಸಂಘಟನ ಸರಕಾರದವರು ಅಕ್ಕಿ ಕೊರತೆಯಿದ್ದಾರೆ. ಸಂಬಂಧಪಟ್ಟವರು ಜಿಲ್ಹಾಧಿಕಾರಿಗಳ ಕಡೆಗೆ ಮತ್ತು ಜಿಲ್ಹಾ ನ್ಯಾಯಾಧೀಶರ ಕಡೆಗೆ ಅರ್ಜಿ ಮಾಡಿಕೊಳ್ಳಬೇಕು.

ಹಿರಿಸಿಗಿ ಸಂಸ್ಥಾನವು ಹಿಂದೂಸ್ಥಾನ ಒಕ್ಕೂಟ ಸರಕಾರದಲ್ಲಿ ಸಮಾವೇಶ ಹೊಂದಬೇಕೆಂದು ಸಂಸ್ಥಾನ ಪ್ರಜಾ ಪರಿಷತ್ತಿನವರು ನಿರ್ಣಯಿಸಿದ್ದಾರೆ. ಸರದಾರ ವಲ್ಲಭಭಾಯಿ ಪಟೇಲರನ್ನು ಕಾಣಲು ದಿಲ್ಲಿಗೆ ಹೋಗಲಿದ್ದ ರಾಜೇಸಾಹೇಬರು ಈ ಗೊತ್ತುವಳಿಯನ್ನು ತೆಗೆದುಕೊಂಡು ಹೋಗಲಿರುವರು. ಸಾಂಗಲಿ ಸಂಸ್ಥಾನ ಪ್ರಜಾ ಪರಿಷತ್ತಿನವರೂ ಇದೇ ಆಶಯದ ಗೊತ್ತುವಳಿಯನ್ನು ಸ್ವೀಕರಿಸಿರುವರು.

ಉತ್ತರ ಕನ್ನಡ

ಕಾರವಾರದಲ್ಲಿ ನವೆಂಬರ ೪ ನೇ ತಾರೀಕು ಮಹಾಂಜರಪಾಟಿನ ಒಂದು ಗಂಟೆಸ್ಟು ಲಾರಿಯಲ್ಲಿ ಪೋಲೀಸರು ಜಪ್ತ ಮಾಡಿದ್ದರು. ಹಿಲಗೆ ಮಾರ್ಕೆಟ್ ಎಂದು ಅದರ ವರ್ತಕರಾದ ಮುಖುಮುದಾರ ಹಾಗು ಕಸಬೇಕರ ಬಂಧುಗಳು ಮ್ಯಾಜಿಸ್ಟ್ರೇಟರಲ್ಲಿ ಖಟ್ಲೆ ಹೂಡಿದ್ದರು ಇದರಲ್ಲಿ ಮುಖುಮುದಾರ ಹಾಗು ಕಸಬೇಕರ ಬಂಧುಗಳು ಪೂರ್ಣ ನಿರ್ದೋಷಿಗಳೆಂದು ಪೋಲೀಸರ ಪುರಾವೆಗಳು ಪೂರ್ಣವಿಶ್ವಾಸ ಗತವೆಂದೂ ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟರು.

ಕುಮಠಾದಲ್ಲಿ ಒಂದು ಹೊಸ ಧಕ್ಕೆಯನ್ನು ಕಟ್ಟಿಸಲಾಗುವದೆಂದೂ ಕಾರವಾರದಲ್ಲಿಯ ಧಕ್ಕೆಯನ್ನು ಸುಧಾರಿಸುವದೆಂದೂ ಕಾರವಾರ ಧಾರವಾಡ ಜಿಲ್ಹೆಗಳ ಸುಂಕದ ಅಧಿಕಾರಿಗಳು ಶ್ರೀ ಎ. ಟಿ. ಎಸ್ ನೀಲರು ಒಂದು ಸಂದರ್ಶನದಲ್ಲಿ ಅಭಿಪ್ರಾಯಪಟ್ಟರು.

ಸಂಯುಕ್ತಪ್ರಾಂತ ಹಾಗು ಬಿಹಾರದಲ್ಲಿ ಸಿದ್ಧವಾದ ಸಕ್ಕರೆಯ ಸೋಕ ಗಿರಣಿ ಧಾರಣೆಯನ್ನು ೩೫ರೂ. ೬ಆ ಗೆ ನಿಶ್ಚಿತ ಮಾಡಿದ್ದು ಸಕ್ಕರೆ ಸಿಂಡಿಕೇಟಿನವರು ಈ ಪರಮಾವಧಿ ದರದಿಂದ ಮಾರಲು ಒಪ್ಪಿದ್ದಾರೆಂಬುದಾಗಿ ಸರಕಾರದ ನಿಯೋಗಿಕ ಖಾತೆಯ ಪ್ರಕಟನೆ ಹೊರಬಿದೆ. ಸಕ್ಕರೆಯ ಹಿಂದಿನ ಸಂಗ್ರಹವನ್ನೆಲ್ಲ ಸರಕಾರದವರು ವಶಪಡಿಸಿಕೊಂಡು ನಿರ್ದಿಷ್ಟ ದರಕ್ಕೆ ಎಲ್ಲ ಪ್ರಾಂತಗಳಿಗೂ ಹಂಚಲು ಸಿಂಡಿಕೇಟಿಕ್ಕೆ ಕೊಡುವರು.

ಬೆಂಗಳೂರು—ಮೈಸೂರು

ಸರಕಾರಿ ಆಯುರ್ವೇದ ಹಾಗು ಯುನಾನಿ ವೈದ್ಯಶಾಲೆಯ [illegible] ಮುಖ್ಯ ಮಂತ್ರಿ ಮತ್ತು ಆರೋಗ್ಯ ಮಂತ್ರಿಗಳನ್ನು [illegible] ಕಾಲೇಜಿನ ಅಧ್ಯಕ್ಷರು [illegible] ಸರಕಾರಿ [illegible] ಮೈಸೂರು [illegible] ಕಾಲೇಜಿನ ಸುಧಾರಣೆ [illegible] ಪ್ರಮುಖಗೊಳಿಸುವದಾಗಿ [illegible] ಮತ್ತು ಗಮನಕೊಡುವದಾಗಿಯೂ ಹೇಳಿದರು.

ಮೈಸೂರು ಧರಿಸಾ ಸಮಿತಿಯ [illegible] ಆಗುವದು. [illegible] ಈ ಅಮ್ಮನವರ [illegible] ನಡೆಸಲಾಗುವದು. [illegible] ಮತ್ತು [illegible] ಕಾದಿರಿಸಲಾಗುವದು.

ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯ ಅಧ್ಯಕ್ಷರಾದ ಶ್ರೀ [illegible] ಹಾಗು [illegible] ಅವರು ಮೈಸೂರಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಅವಶ್ಯಕತೆ ಕುರಿತು ೬ ಕ್ಕೆ ಮಹಾರಾಜಾ ಕಾಲೇಜಿನಲ್ಲಿ ಭಾಷಣ ಮಾಡಿದರು. ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವಾದರೆ ಕನ್ನಡಿಗರನ್ನು ಮೀರುವವರೆ ಇಲ್ಲದಂತಾಗುವದು ಎಂದೂ ಅವರು ಅಭಿಪ್ರಾಯಪಟ್ಟರು.

ಮೈಸೂರು ಸಂಸ್ಥಾನದಲ್ಲಿ [illegible] ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕಾಗಿ ಬಂಧಿಸಲ್ಪಟ್ಟು ಶಿಕ್ಷೆಗೊಳಗಾದವರ ಮೇಲೆ [illegible] ಹಿಂತೆಗೆದುಕೊಂಡು ಎಲ್ಲ ಮ್ಯಾಜಿಸ್ಟ್ರೇಟರಿಗೆ ತಿಳಿಸುವ ಸರಕಾರಿ ಪ್ರಕಟನೆ ಹೊರಬಿದೆ.

ದಕ್ಷಿಣ—ಕನ್ನಡ

ರೈತ ಹಿತವನ್ನೆ ಮುಖ್ಯವನ್ನಾಗಿಟ್ಟುಕೊಂಡು ಉಡುಪಿಯ ರೈತ ಸಂಘದ ಒತ್ತಿಯಿಂದ ರೈತವಾಣಿ ಎಂಬ ವಾರಪತ್ರಿಕೆಯು ೨೨-೧-೪೮ ರಿಂದ ಪ್ರಾರಂಭವಾಗುವದು.

ಅಖಿಲ ಕರ್ನಾಟಕ ಏಕೀಕರಣ ಪರಿಷತ್ತಿನ ೧೦ ನೆಯ ಅಧಿವೇಶನವು ಕಾಸರಗೋಡಿನಲ್ಲಿ ಇದೇ ತಿಂಗಳು ೨೯—೩೧—೪೭ ಕ್ಕೆ ಕೂಡಲಿದೆ. ಅಂದು ಬೆಳಿಗ್ಗೆ ೯ ಗಂಟೆಗೆ ಪರಿಷತ್ತಿನ ಉದ್ಘಾಟನೆ, ಮಧ್ಯಾಹ್ನ ೩ ರಿಂದ ೬ ರ ವರೆಗೆ ಪರಿಷತ್ತಿನ ಬಹಿರಂಗ ಅಧಿವೇಶನ, ರಾತ್ರಿ ೮ ಗಂಟೆಗೆ ಸಂಘದ ಸಾಧಾರಣ ಸಭೆ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಮೊದಲಾದವರ ಆಯ್ಕೆ ಮಾಡುವದು. ಪ್ರತಿನಿಧಿಗಳ ಫೀ ೫ ರೂ. ಉಪವಿಷಯಕಾರರಿಗಾಗಿ ದಿನಕ್ಕೆ ೨ ರೂ. ಪ್ರತ್ಯೇಕ ಕೊಡಬೇಕಾಗುವದು. ಶ್ರೀ [illegible] ಕಾರಂತರು ಸ್ವಾಗತಾಧ್ಯಕ್ಷರಾಗಿರುವರು.

ಕೊಡಗ

ಉತ್ತರ ಕೊಡಗು ಕಾಲೂಕ [illegible] ಗುಹೆಗಳ [illegible] ಡಿಸೆಂಬರ ೧೮ ರಿಂದ ೭ ದಿವಸ ಜಾನುವಾರಗಳ ಮಹಾಜಾತ್ರೆ ನಡೆಯುವದು. ಉತ್ತಮ ದನಗಳಿಗೆ ಬಹುಮಾನ ಹಂಚಲಾಗುವದು.



ಮುಂಬಯಿ

ಬರುವ ಜಾನೇವರಿ ತಿಂಗಳಿಂದ ಮುಂಬಯಿ ಸರಕಾರವು ಡಿನೇಚರ್ಡ ಸ್ಪಿರಿಟ್ಟನ್ನು ಇಟ್ಟುಯಿದ್ದವರು ಯಾರೂ ಇಟ್ಟುಕೊಳ್ಳತಕ್ಕದ್ದಲ್ಲವೆಂದು ನಿಷೇಧಿಸಲಿದೆ. ಕುಡಿತಕ್ಕೆ ಸ್ಪಿರಿಟಿನ ದುರುಪಯೋಗ ನಡೆದಿದ್ದು ಅದನ್ನು ತಡೆಯಲು ಈ ಆಜ್ಞೆ ಹೊರಡಲಿದೆ. ಮನೆಯ ಉಪಯೋಗಕ್ಕೆ ಬೇಕಾದವರು ಮಾಮಲೇದಾರ ಮತ್ತು ಮಹಾಲಕರಿಗಳಿಂದ ಅಪ್ಪಣೆದೊರಕಿಸಬೇಕಾಗುವದು.

ಇದೇ ತಾ ೮ ರಿಂದ ಬೆಲ್ಲ ಮತ್ತು ಸಕ್ಕರೆಗಳ ನಿಯಂತ್ರಣ ಹೋಗಿರುವದಾಗಿ ಪ್ರಕಟನೆ ಹೊರಟಿದೆ. ಮುಂಬಯಿ ಹಾಗು ಉಪನಗರಗಳಲ್ಲಿ ಸರಕಾರಿ ಉಗ್ರಾಣಗಳಲ್ಲಿದ್ದ ಸಂಗ್ರಹ ತೀರುವವರೆಗೆ ಸೀದಾ ಅಂಗಡಿಗಳ ಮುಖಾಂತರ ಸಕ್ಕರೆಯನ್ನು ಪೂರೈಸಲಾಗುವದೆಂದೂ ಆದರೂ ಸಾರ್ವಜನಿಕರು ಬೇರೆ ಕಡೆಯಿಂದ ಸಕ್ಕರೆ ಕೊಳ್ಳಲು ಅತಂಕವಿಲ್ಲವೆಂದೂ ಪ್ರಕಟನೆ ಹೇಳುತ್ತದೆ ಈ ನಿಯಮ ಬೆಲ್ಲಕ್ಕೂ ಅನ್ವಯಿಸಿದೆ.

ಮುಂಬಯಿ ಸರಕಾರದವರು ಅಡಳಿತೆಯ ವಿಚಾರಣಾ ಸಮಿತಿಯ ಅಧ್ಯಕ್ಷಪದಕ್ಕೆ ಡಾ. ಜೀವರಾಜ ಮೆಹತಾರವರ ರಾಜೀನಾಮೆ ಸ್ವೀಕರಿಸಿ ಅವರ ಸ್ಥಳಕ್ಕೆ ಪ್ರಿನ್ಸಿಪಾಲ ಡಿ. ಜಿ ಕರ್ವೆಯವರನ್ನು ನೇಮಿಸಿದ್ದಾರೆ.

ಮುಂಬಯಿ ಸರಕಾರವು ತಾ. ೬ ಕ್ಕೆ ಒಂದು ಪ್ರಕಟನೆ ಹೊರಡಿಸಿ ಹರಿಜನರ ಬಗ್ಗೆ ಹೀಗೆ ಎಚ್ಚರಿಕೆ ಕೊಟ್ಟಿದೆ. ಕೆಲವೊಂದು ಭೋಜನಾಲಯ ಉಪಹಾರಗೃಹಗಳಲ್ಲಿ ಹರಿಜನ ಮೊದಲಾದ ದಲಿತ ವರ್ಗದವರಿಗೆ ಪ್ರತ್ಯೇಕ ಪಾತ್ರೆಗಳನ್ನು ಕಪ್ಪು ಬಸಿಗಳನ್ನು ಕೊಡಲಾಗುತ್ತಿದೆ. ಭೇದಭಾವದ ಈ ಕೃತ್ಯವು ಮುಂಬಯಿ ಹರಿಜನ ಕಾಯಿದೆಯ ಪ್ರಕಾರ ಅಪರಾಧವಾಗುತ್ತದೆ. ಇದಕ್ಕಾಗಿ ದಂಡ ಶಿಕ್ಷೆಗಳಿಗೆ ಗುರಿಯಾಗಬೇಕಾಗುತ್ತದೆ. ಕಾರಣ ಸಂಬಂಧಪಟ್ಟವರು ಇದನ್ನು ಗಮನಕ್ಕಾಗಿ ಲಕ್ಷದಲ್ಲಿಟ್ಟುಕೊಳ್ಳಬೇಕು.

ಅ. ಭಾ. ಮುಸ್ಲಿಂಲೀಗಿನ ಧ್ಯೇಯವಾದ ಪಾಕಿಸ್ತಾನವು ಈಡೇರಿರುವದರಿಂದ ಹಿಂದುಸ್ತಾನದಲ್ಲಿ ಮುಸ್ಲಿಂ ಲೀಗಿನ ಅವಶ್ಯಕತೆ ಇಲ್ಲವೆಂದು ಅಹಮ್ಮದಾಬಾದ ಜಿಲ್ಲಾ ಮುಸ್ಲಿಂ ಲೀಗಿನ ಕಾರ್ಯಸಮಿತಿಯ ಸಭೆಯು ತಾ. ೫ ರಾತ್ರಿ ನಿರ್ಣಯ ಮಾಡಿತು.

ಮುಂದೋಗಾಮಿ ಪಕ್ಷವು ಕಾಂಗ್ರೆಸದಲ್ಲಿ ಉಳಿಯುವದೇ ಬಿಡುವದೇ ಎಂಬುದನ್ನು ನಿರ್ಧರಿಸಲು ಅ. ಭಾ. ಮುಂದೋಗಾಮಿ ಪಕ್ಷದ ಕಾರ್ಯಕಾರೀ ಸಭೆಯು ಇದೇ ತಾ. ೨೦ ಕ್ಕೆ ಬನಾರಸದಲ್ಲಿ ಕೂಡಲಿರುವದಾಗಿ ಕಾರ್ಯದರ್ಶಿಗಳಾದ [illegible] ಸರಕಾರರು ತಿಳಿಸುವರು

ಕಲಕತ್ತಾ ಎಂಬ ಚಿತ್ರಪಟವನ್ನು ಮುಂಬಯಿ ಸರಕಾರದವರು, ಇಡೀ ಪ್ರಾಂತದಲ್ಲಿ ಬಹಿಷ್ಕರಿಸಿದ್ದಾರೆ.

ದಕ್ಷಿಣಭಾಗದಲ್ಲಿ ಓಡಾಡುವ ಮೋಟಾರುಗಳು ಪೆಟ್ರೋಲಿನ ಕೊರತೆಯ ಮೂಲಕ ನೂರಕ್ಕೆ [illegible] ಹೆಚ್ಚು ಪ್ರಯಾಣಿಕರನ್ನು ಒಯ್ಯಬಹುದೆಂದು ಪ್ರಾದೇಶಿಕ ಸಾರಿಗೆಯ ಅಧಿಕಾರಿಗಳು ಆಜ್ಞೆ ಹೊರಡಿಸಿದ್ದಾರೆ.

ಆಳಂದಿಯಲ್ಲಿಯ ಇತಿಹಾಸ ಪ್ರಸಿದ್ಧವಾದ ಜ್ಞಾನೇಶ್ವರ ಮಂದಿರವನ್ನು ಹರಿಜನರ ಒಂದು ತಂಡವು ಅಬಕಾರಿ ಮಂತ್ರಿ ಪಾಟೀಲರ ನೇತೃತ್ವದಲ್ಲಿ ಪ್ರವೇಶಿಸಿತು. ಗೃಹಮಂತ್ರಿ ಮುರಾರಜಿಯವರ ನೇತೃತ್ವದಲ್ಲಿ ರತ್ನಾಗಿರಿ ಜಿಲ್ಲೆಯಲ್ಲಿ [illegible] ಪ್ರಸಿದ್ಧವಾದ ಗುಡಿಗೂ ಹರಿಜನರಿಗೆ ಮುಕ್ತದ್ವಾರವಾಯಿತು. ಈ ಗುಡಿಯಲ್ಲಿ ಬ್ರಾಹ್ಮಣರಿಗೆ [illegible] ಪ್ರವೇಶವಿರಲಿಲ್ಲ

ಪಶ್ಚಿಮ ಬಂಗಾಲ

[illegible] ಹಿಂದಿ ಸಂಘದ [illegible] ವಾರ್ಷಿಕ ಅಧಿವೇಶನವು [illegible] ಹಿಂದುಸ್ತಾನ ಸರಕಾರದ ಮಂತ್ರಿ [illegible] ಅಧ್ಯಕ್ಷತೆಯಲ್ಲಿ ನೆರವೇರಿತು. ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಡಾ. ಪಿ. ಸಿ. ಘೋಷರು ಉದ್ಘಾಟನೆ ಮಾಡಿದರು.

[illegible] ಪಶ್ಚಿಮ ಬಂಗಾಲದಲ್ಲಿ ಇನ್ನೂ ಒಂದು ವರ್ಷ [illegible] ಪಶ್ಚಿಮ ಬಂಗಾಲದ ಮುಖ್ಯ ಪ್ರಧಾನರಾದ ಡಾ. ಪಿ. ಸಿ. ಘೋಷರು [illegible]

[illegible] ಉತ್ತರಬಂಗಾಲ [illegible] ಒಂದು ಮೂಲ [illegible] ಕಲಕತ್ತಾ [illegible]

ಹೊಸದಿಲ್ಲಿ

ಹಿಂದುಸ್ತಾನ ಘಟನಾ ಸಮಿತಿಯ ಘಟನಾ ಸಲಹೆಗಾರರಾದ ಸರ್. ಬಿ. ಎನ್. ರಾವ ಅವರು ಅಮೇರಿಕಾ, ಇಂಗ್ಲಂಡ, ಆಯರ್ಲಂಡ ಮುಂತಾದ ದೇಶಗಳಲ್ಲಿ ಸಂಚರಿಸಿ ರಾಜ್ಯ ಘಟನೆಯ ಪದ್ಧತಿ ಮತ್ತು ಅವಕಾಶಗಳನ್ನು ಕುರಿತು ಮಹತ್ವದ ಸಲಹೆಗಳನ್ನು ಪಡೆದು ಬಂದಿದ್ದಾರೆ. ಡಿವೆಲರಾ ಮತ್ತಿತರರು ಕೊಟ್ಟ ಸಲಹೆಗಳು ಅಮೂಲ್ಯವಾಗಿವೆಯಂತೆ.

ಕೇಂದ್ರ ಶಾಸನಸಭೆಯ ಮುಂಗಡ ಪತ್ರಿಕೆಯ ಅಧಿವೇಶನವು ಮುಗಿಯುವ ವರೆಗೆ ಘಟನಾ ಸಮಿತಿಯನ್ನು ಕರೆಯಬಾರದೆಂದು ನಿರ್ಧಾರ ಮಾಡಲಾಗಿದೆ. ಆದರೆ ಘಟನಾ ಸಮಿತಿಯು ಎಪ್ರಿಲದಲ್ಲಿ ಸೇರುವದು.

ಡಾ. ರಾಜೇಂದ್ರ ಪ್ರಸಾದರ ರಾಜೀನಾಮೆಯಿಂದ ತೆರವಾದ ಹಿಂದುಸ್ತಾನ ಆಹಾರ ಮಂತ್ರಿಯ ಸ್ಥಳಕ್ಕೆ ಶ್ರೀ. ಕೆ. ಎಂ. ಮುನಸಿಯವರನ್ನು ಆರಿಸಬಹುದೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಕೇಂದ್ರ ಮಂತ್ರಿಗಳಿಗೆ ೩೦೦೦ ರೂ- ಸಂಬಳ ೫೦೦ ರೂ. ಹೆಚ್ಚಿನ ವೆಚ್ಚದ ಭತ್ತೆ ಕೊಡಬೇಕೆಂದು ಕಾಂಗ್ರೆಸ ಪಕ್ಷದ ಸಭೆಯಲ್ಲಿ ನಿರ್ಣಯವಾಗಿದೆಯೆಂದು ತಿಳಿದುಬಂದಿದೆ.

ಡಾ. ಬಿ. ಸಿ. ರಾಯರು ಗವರ್ನರ ಪದ ಸ್ವೀಕರಿಸಲು ನಿರಾಕರಿಸಿದ್ದರಿಂದ ಶ್ರೀಮತಿ ಸರೋಜಿನಿ ದೇವಿಯವರನ್ನೇ ಯುಕ್ತಪ್ರಾಂತದ ಕಾಯಂ ಗವರ್ನರರನ್ನಾಗಿ ನೇಮಿಸಲಾಗಿದೆಯೆಂದು ಪ್ರಕಟನೆ ಹೊರಟಿದೆ.

ಫೀಲ್ಡಮಾರ್ಶಲ್ ಅಚಿನಲೆಕ್ಕರು ಹಿಂದುಸ್ತಾನ ಮತ್ತು ಪಾಕಿಸ್ತಾನಗಳ ಸಶಸ್ತ್ರದಲಗಳ ವರಿಷ್ಠ ಅಧಿಕಾರಿ ಪದದಿಂದ ವಿಮುಕ್ತರಾಗಿ ಇಟಲಿಗೆ ತೆರಳಿದರು.

ಚೀನದಲ್ಲಿ ಈಗ ಹಿಂದುಸ್ತಾನದ ರಾಯಭಾರಿಗಳಾಗಿರುವ ಶ್ರೀ. ಕೆ. ಪಿ. ಎಸ್. ಮೆನನ್ನರು ಬೇಗನೆ ಹಿಂದುಸ್ತಾನಕ್ಕೆ ತಿರುಗತಕ್ಕವರೆಂದು ತಿಳಿಯುತ್ತದೆ. ಕಾಮನ್‌ವೆಲ್ತ ಖಾತೆಯ ಪರರಾಷ್ಟ್ರ ಕಚೇರಿಯ ಕಾರ್ಯದರ್ಶಿಗಳಾದ ಸರ್. ಗಿರಿಜಾಶಂಕರ ವಾಜಪೇಯಿಯವರು ನಿವೃತ್ತರಾಗಲಿದ್ದು ಅವರ ಸ್ಥಳದಲ್ಲಿ ಮೆನನ್ನರು ನೇಮಕ ಹೊಂದುವರೆಂದು ಸೆಕ್ರೆಟರಿಯೇಟ ವರದಿಗಳಿಂದ ಗೊತ್ತಾಗುವದು.

ಪಾಕಿಸ್ತಾನ ವಿರೋಧಿ ಪಕ್ಷದ ಅಧ್ಯಕ್ಷರಾದ ಅಬ್ದುಲ ಹಸನ ಬಕ್ಷಿ ಮತ್ತು ಮಸ್ತಾನ ಮಹಮ್ಮದರು ಒಂದು ಸಂಯುಕ್ತ ಪತ್ರಕ ಹೊರಡಿಸಿ ಪಾಕಿಸ್ತಾನ ಸರಕಾರಕ್ಕೆ ೫೦ ಕೋಟಿ ರೂ ಸಾಲಕೊಡಬೇಕೆಂಬ ಸೂಚನೆಯ ಬಗ್ಗೆ ಹೀಗೆ ಹೇಳಿದ್ದಾರೆ.:

“ ಪಾಕಿಸ್ತಾನಕ್ಕೆ ಯಾವದೇ ಸಾಲಕೊಡತಕ್ಕದ್ದಲ್ಲ,ಪಾಕಿಸ್ತಾನವನ್ನು ಸಬಲ ಸ್ವತಂತ್ರ ನಿರಂಕುಶರನ್ನಾಗಿ ಮಾಡುವ ಹೊಣೆಯನ್ನು ಹಿಂದುಸ್ತಾನ ಸರಕಾರವೇ ಹೊಂದಬೇಕಾಗಿ ೧೯೩೫ ರಲ್ಲಿ ಬ್ರಿಟಿಶ ಸರಕಾರವು ಹಿಟ್ಲರನಿಗೆ ಸಾಲಕೊಟ್ಟಿತು. ಬ್ರಿಟಿಶರ ಹಣದಿಂದಲೇ ಬ್ರಿಟನದ ವೈರಿ ಬೆಳೆದನು. ಇದರಿಂದ ಹಿಂದುಸ್ತಾನ ಸರಕಾರ ಪಾಠ ಕಲಿಯಬೇಕು.”

ಎಲ್ಲ ನಿಯಂತ್ರಣ ತೆಗೆಯಬೇಕೆಂಬ ಧೋರಣೆಯನ್ನನುಸರಿಸಿ ಸರಕಾರವು ಹಿಂದೀ ರೇಶ್ಮಿಯ ನಿರ್ಯಾತನಿರ್ಬಂಧವನ್ನು ೧೯೪೮ನೇ ಮಾರ್ಚದ ವರೆಗೆ ತಾತ್ಪೂರ್ತಿಕವಾಗಿ ತೆಗೆಯಲು ನಿರ್ಧರಿಸಿದೆ.

ಮದ್ರಾಸ

ಮದ್ರಾಸ ಪ್ರಾಂತದ ಆಹಾರ ಪರಿಸ್ಥಿತಿಯು ಇನ್ನೂ ಗಂಭೀರವಾಗಿದೆಯೆಂದು ಆಹಾರ ಮಂತ್ರಿ ಡಾ. ರಾಜನ್ನರು ಹೇಳಿದರು. ನಗರದಲ್ಲಿ ಸೀದಾ ಪದ್ಧತಿ ಉಳಿಯುವದೆಂದೂ ಪರಿಸ್ಥಿತಿ ಸುಧಾರಿಸಿದರೆ ಅದನ್ನು ಸಡಿಲಿಸಲಾಗುವದೆಂದೂ ತಿಳಿಸಿದರು.

ಹಿಂದುಸ್ತಾನದ ಘಟನೆಯ ಕರಡು ಸಿದ್ಧಪಡಿಸುವ ತಜ್ಞ ಸಮಿತಿಯ ಸಂಭಗಾಗಿ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿಯವರು ವಿಮಾನದಿಂದ ದಿಲ್ಲಿಗೆ [illegible]

ಪೂರ್ವ ಪಂಜಾಬ

ಹಿಂದೂ ಮಹಾಸಭೆಯ ಅಧ್ಯಕ್ಷರಾಗಿದ್ದ ಭಾಯಿ ಪರಮಾನಂದರು ಬಹುದಿನ ಕಾಯಿಲೆಯಿಂದ ಬಳಲುತ್ತಿದ್ದು ತಾ ೮ಕ್ಕೆ ಮುಂಜಾನೆ ನಿಧನಹೊಂದಿದರು.

ಪೂರ್ವ ಪಂಜಾಬ ವಿಶ್ವವಿದ್ಯಾಲಯದಲ್ಲಿ ಹಿಂದಿಯೇ ಬೋಧಭಾಷೆಯಾಗಬೇಕೆಂದು ಘಟನಾ ಸಮಿತಿಯು ಅದನ್ನೇ ಸರಕಾರಿ ಭಾಷೆಯಾಗಿ ಸ್ವೀಕರಿಸಬೇಕೆಂದು ಸಿಮುಲಾ ಹಿಂದಿ ಪ್ರಚಾರಿಣಿ ಸಭೆಯವರು ವಿನಂತಿ ಮಾಡಿಕೊಂಡಿದ್ದಾರೆ.

ಅಮೃತಸರದಲ್ಲಿ ೩೦ ಅಪಹೃತ ಮುಸಲ್ಮಾನ ಸ್ತ್ರೀಯರು ಪತ್ತೆ ಹಚ್ಚಲ್ಪಟ್ಟಿದ್ದು ಪಾಕಿಸ್ತಾನ ಅಧಿಕಾರಿಗಳಿಗೆ ಅವರನ್ನು ಒಪ್ಪಿಸಲಾಗಿದೆ

ಮಧ್ಯಪ್ರಾಂತ

ನಾಸಿಕದ ಸುಪ್ರಸಿದ್ಧವಾದ ಕಾಳಾರಾಮ ದೇವಾಲಯವು ತಾ ೮ಕ್ಕೆ ಏಕಾದಶಿಯ ದಿನ ಹರಿಜನರಿಗೆ ಮುಕ್ತದ್ವಾರವಾಯಿತು.

ಹೈದರಾಬಾದ

ಯಥಾಸ್ಥಿತಿ ಒಪ್ಪಂದದಿಂದ ದೊರೆತ ಒಂದು ವರ್ಷದ ಅವಕಾಶದಿಂದ ನಿಜಾಮರು ಮತ್ತು ಅವರ ಕುಹಕ ನಾಜೀ ರಕ್ಷಾವಾದ ಇತ್ತೆಹಾದುಲ್ ಮುಸಲ್ಮೀನ ಮಂಡಲೀಸದವರು ಸೈನ್ಯ ಸಂಘಟನೆಯಲ್ಲಿ ತೊಡಗಿರುವದಾಗಿ ವಿಶ್ವಸನೀಯ ಸುದ್ದಿ ಬಂದಿದೆ. ನಿಜಾಮರು ೭ ಕೋಟಿ ರೂ ಬೆಲೆಬಾಳುವ ಬಂಗಾರದ ಸ್ವಂತ ಆಸ್ತಿಯನ್ನು ಶಸ್ತ್ರಾಸ್ತ್ರಗಳಿಗಾಗಿ ತೆಗೆದಿಟ್ಟಿದ್ದಾರಂತೆ.

ಹೈದರಾಬಾದ ನಿಜಾಮರು ಗೋವೆಯನ್ನು ಸುಮಾರು ೩೫೦ ಲಕ್ಷ ಡಾಲರುಗಳಿಗೆ ಕೊಳ್ಳಲಿರುವರೆಂದು ನ್ಯೂಯಾರ್ಕದಿಂದ ವರದಿಯಾಗಿದೆ. ಪೋರ್ತುಗೀಜ ಸರಕಾರದವರು ಅದಕ್ಕೆ ೧೦ ಕೋಟಿ ಡಾಲರು ಬೇಡುತ್ತಿರುವರಂತೆ.

ನಿಜಾಮ ಸರಕಾರದವರು ಮುದ್ರಣದ ಬಗ್ಗೆ ಒಂದು ಕಟ್ಟಳೆ ಹೊರಡಿಸಿ ವೃತ್ತಪತ್ರಗಳ ಮುದ್ರಕರೂ ಪ್ರಕಾಶಕರೂ ಪೋಲಿಸ ಕಮಿಶನರ ಇಲ್ಲವೆ ಪ್ರಥಮ ತಾಲೂಕದಾರರ ಮುಂದೆ ಡಿಕ್ಲೇರೇಶನ್ ಮಾಡತಕ್ಕದ್ದಾಗಿ ವಿಧಿಸಿದ್ದಾರೆ. ಈ ಕಟ್ಟಳೆಯು ಇದೇ ತಾ. ೧೦ರಿಂದ ಜಾರಿಯಲ್ಲಿ ಬಂದಿರುವದು. ಹೈದರಾಬಾದದ ಪ್ರಜೆಯಲ್ಲದವರಿಗೆ ಡಿಕ್ಲೇರೇಶನ್ ಮಾಡಲು ಬರುವದಿಲ್ಲ ಇದರನ್ವಯ ೧೦೦೦ ರೂ ದಿಂದ ೫೦೦೦ ರೂ. ಗಳ ವರೆಗೆ ಠೇವಣಿ ಶರ್ತು ಇವೆ.

ಪಾಕಿಸ್ತಾನ

ಪಾಕಿಸ್ತಾನದಲ್ಲಿ ಜಮೀನದಾರರ ಮೇಲೆ ಹೆಚ್ಚಿನ ಕರ ಹೇರುವದು ಅನಿವಾರ್ಯವಾಗಿದೆಯೆಂದೂ ದಿಲ್ಲಿಯಿಂದ ೫೦ ಕೋಟಿ ರೂ ಗಳನ್ನು ಪಡೆದುಕೊಳ್ಳುವದು ಪಾಕಿಸ್ತಾನಕ್ಕೆ ಇಷ್ಟವಿಲ್ಲವೆಂದೂ ಸರ ಆರ್ಚಿಬಾಲ್ಡ ರೌಲ್ಯಾಂಡ್ಸರು ಲಂಡನ್ನಿಗೆ ತೆರಳುವ ಮೊದಲು ಹೇಳಿಕೆ ಕೊಟ್ಟರು.

ಮುಸ್ಲಿಮೇತರ ನೌಕರರಿಗೆ ಯಾವದೇ ಸಾರ್ವಜನಿಕ ಸಂಸ್ಥೆಯಿಂದ ಅಥವಾ ಪ್ರಾವಿಡೆಂಟ ಫಂಡಿನಿಂದ ಸಾಲವಾಗಲೀ ಮುಂಗಡವಾಗಲೀ ದೊರೆಯಬಾರದೆಂದು ಸಿಂಧ ಸರಕಾರದ ಆಜ್ಞೆ ಹೊರಟಿದೆ.

ಪೂರ್ವಪಾಕಿಸ್ತಾನದ (ಬಂಗಾಲ)ಮುಖ್ಯ ಪ್ರಧಾನರ ವಾಸಭವನದೆದುರು ಅನೇಕ ಮುಸಲ್ಮಾನ ವಿದ್ಯಾರ್ಥಿಗಳೂ ಪ್ರೊಫೆಸರರೂ ಬಂಗಾಲಿಯೇ ಪೂರ್ವಪಾಕಿಸ್ತಾನದ ಸರಕಾರಿ ಭಾಷೆಯಾಗಬೇಕೆಂದು ಮುತಪ್ರದರ್ಶನ ಮಾಡಿದರು. ಬಂಗಾಲ ಪ್ರಾಂತಿಕ ಮುಸ್ಲಿಂಲೀಗಿನ ಕಾರ್ಯಕಾರಿ ಸಮಿತಿಯು ಉರ್ದು ಪೂರ್ವಪಾಕಿಸ್ತಾನದ ಸರಕಾರಿ ಭಾಷೆಯಾಗಬಹುದೆಂದು ಸೂಚಿಸಲು ತನ್ನ ಅಧ್ಯಕ್ಷ ಮೌ. ಅಕ್ರಮಖಾನರಿಗೆ ಅಧಿಕಾರ ಕೊಟ್ಟಿತು.

ಕರಾಚಿಯಲ್ಲಿ ೧ ಲಕ್ಷ ಮುಸ್ಲಿಂ ನಿರಾಶ್ರಿತರಿಗೆ ಮನೆಗಳನ್ನು ಒದಗಿಸುವದು ಕಠಿಣವಾಗಿ ಅವರನ್ನು ಬೇರೆ ಕಡೆಗೆ ಕಳಿಸುವದು ಒಳಿತೆಂದು ಮಂತ್ರಿಗಳಾದ ಪೀರ ಇಲಾಹಿ ಬಕ್ಷರು ಅಭಿಪ್ರಾಯ ಪಡುತ್ತಾರೆ. ಇದು ನಿರಾಶ್ರಿತರಲ್ಲಿ [illegible]

ರಾಷ್ಟ್ರಭಾಷೆಯ ಮಾಯಾಜಾಲ

ಸಂಯುಕ್ತ ಪ್ರಾಂತದ ಶಾಸನ ಸಭೆಯು ತನ್ನ ಆಡಳಿತದಲ್ಲೆಲ್ಲ ದೇವನಾಗರಿಯಲ್ಲಿ ಬರೆದ ಹಿಂದಿಯನ್ನೇ ಬಳಸಬೇಕೆಂದು ನಿರ್ಣಯಿಸುತ್ತಲೇ ಪ್ರಾಂತದಲ್ಲೆಲ್ಲ ಹಿಂದಿ ಭಾಷೆಯ ಮಾಯಾ ಜಾಲ ಪಸರಿಸಿಬಿಟ್ಟಿದೆ. ಇದರಿಂದ ಅತ್ಯಲ್ಪ ಕಾಲದಲ್ಲಿಯೇ ಜನತೆಯ ಸಾರ್ವಜನಿಕ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದಲ್ಲಿಯೂ ವೈಯಕ್ತಿಕ ಆಂತರಿಕ ವಿಚಾರಲೋಕದಲ್ಲಿಯೂ ಅಮೂಲಾಗ್ರ ಮಾರ್ಪಾಟು ಆಗಿ ಹೋಗಿದೆ. ಸರಕಾರದ ನಿರ್ಣಯ ತಿಳಿದು ಬರುತ್ತಲೇ ಇಂಗ್ಲಿಷಿನ ಜಟಿಲ ಪರಿಭಾಷೆಯಲ್ಲಿ ಮಂಡಿಸಲ್ಪಡುತ್ತಿದ್ದ ಶಾಸನ ಸಭೆಯ ಕಾಗದ ಪತ್ರಗಳು ಗೊತ್ತುವಳಿಗಳು ಎಲ್ಲವೂ ಸುಲಭ ಹಿಂದಿ ಭಾಷೆಯಲ್ಲಿ ಬರತೊಡಗಿದವು. ಇಂಗ್ಲೀಷಿನಲ್ಲಿಯೇ ತಮ್ಮ ಮಾತುಗಾರಿಕೆಯನ್ನು ಪ್ರಕಟಿಸುತ್ತ ಬಂದ ಶಾಸನ ಸಭೆಯ ಸದಸ್ಯರು ಸುಂದರವೂ ಪರಿಶುದ್ಧವೂ ಆದ ಹಿಂದಿ ಭಾಷೆಯನ್ನ ಆಡುವದರಲ್ಲಿ ನಾಮೇಲು ನೀಮೇಲು ಎನ್ನುವ ಹುಮ್ಮಸ ತೋರಕೊಡಗಿದ್ದಾರೆ. ಹಿಂದುಸ್ತಾನಿ ಪ್ರಚಾರದ ಅತ್ಯುಗ್ರ ಪ್ರತಿರೋಧಿಯಾದ ಶಾಸನ ಸಭಾಧ್ಯಕ್ಷ ಶ್ರೀ ಪುರುಷೋತ್ತಮದಾಸ ಟಂಡನ್ನರು, ಇನ್ನು ಮುಂದೆ ಇಂಗ್ಲೀಷಿಗೆ ಅರ್ಧಚಂದ್ರವೇ ದೊರೆಯುವ ಶಾಸನ ಸಭೆಯೊಡನೆ ನಡೆಯಬೇಕಾದ ಪತ್ರವ್ಯವಹಾರಾದಿ ಕಾರ್ಯಕಲಾಪಗಳು ಹಿಂದಿಯಲ್ಲಿಯೇ ಎಂದೂ ಸ್ಪಷ್ಟಪಡಿಸಿದರು.

ಯುಕ್ತ ಪ್ರಾಂತದ ಗವ್ಹರ್ನರರಾದ ಶ್ರೀಮತಿ ಸರೋಜಿನದೇವಿಯವರು ವೈಯಕ್ತಿಕ ಕಾರಣಕ್ಕಾಗಿ ಯಾವಾಗಲೂ ಇಂಗ್ಲಿಷನ್ನೇ ಬಳಸತಕ್ಕವರು. ಇಂತಹರಿಗೂ ಶಾಸನ ಸಭೆಯ ಸದಸ್ಯರನ್ನು ಇಂಗ್ಲೀಷ ಮುಖಾಂತರ ಎದುರಿಸಲು ಎಡಚೆಡಚೆನಿಸುವಂತಾಗಿದೆ. ಇಂಗ್ಲೀಷು ಬಳಸಲು ಅವರಿಗೆ ಸಭೆಯಿಂದ ಒಂದು ಪ್ರಕಾರದ ನಿರ್ಜೀವ ಅರ್ಧ ಸಮ್ಮತಿ ದೊರೆತಿದ್ದರೂ ಆ ವಾತಾವರಣದಲ್ಲಿ ಹಾಸ್ಯಾಸ್ಪದವಾಗಿ ತೋರುವಂತಾಗಿದೆ.

ಶಾಸನ ಸಭೆಯ ಕೊಠಡಿಗಳನ್ನು ಸುಳಿದಾಡಿ ನೋಡುವವರಿಗೆ ಇಂಗ್ಲೀಷ ಅಕ್ಷರಗಳು ದುರ್ಬೀನು ಹಚ್ಚಿದರೂ ಸಿಗುವದಿಲ್ಲ, ಕಚೇರಿಯ ಪ್ರಕಟನಾ ಫಲಕಗಳಿಂದ ಹಿಡಿದು ಆಯಾ ಕಾರ್ಯಾಲಯಗಳ ನಾಮ ನಿರ್ದೇಶಕ ಹಲಗೆಗಳೆಲ್ಲ ದೇವನಾಗರಿಯಲ್ಲಿ. ದಿನದಿನವೂ ಹೊಸ ಹೊಸ ಶಬ್ದ ರಚನೆ ಅದ್ಭುತರಮ್ಯ ರೂಪದಲ್ಲಿ ತಲೆ ಎತ್ತತೊಡಗಿವೆ.

ಮುದುಕರೂ ನಡುವರೆಯದ ಅಧಿಕಾರಿಗಳೂ ಕೆಲಸಗಾರರೂ ಎಳೆವರೆಯದ ಬಾಲ ಬೋಧ ಪುಸ್ತಕಗಳನ್ನು ಮತ್ತೆ ಕಲಿಯುತ್ತಿರುವ ನಗೆಯ ನೋಟ ಕಂಡು ಬರುವದು. ದೇವನಾಗರಿಯ ಲಿಪಿಯರಿಯದ ಅಧಿಕಾರಿಗಳು ಹಿಂದೀ ವರ್ಗಗಳಿಗೆ ತಂಡ ತಂಡವಾಗಿ ನುಗ್ಗುತಿದ್ದಾರೆ. ಈ ವಯೋವೃದ್ಧ ವಿದ್ಯಾರ್ಥಿಗಳಿಗಾಗಿ ಕೆಲ ಮಾಧ್ಯಮಿಕ ಶಾಲೆಗಳು ವಿಶೇಷ ವರ್ಗಗಳನ್ನೆ ತೆರೆದಿವೆ. ಅಭಿಜಾತ ಹಿಂದಿಯಲ್ಲಿ ಮನಮೋಹಕವಾಗಿ ವಿಚಾರವ್ಯಕ್ತ ಮಾಡುವದೊಂದು ಇಂದು ಅವರಿಗೊಂದು ಸಾಮಾಜಿಕ ಸಂಕೇತವಾಗಿ ಹೋಗಿದೆ. ಸೆಕ್ರೆಟೇರಿಯೇಟದಲ್ಲಿ ಮಂತ್ರಿಗಳ ಹಾಗು ಇನ್ನುಳಿದ ಅಧಿಕಾರಿಗಳ ಹೆಸರ ಹಲಗೆಗಳು ಒಳ್ಳೆ ಅಂದವಾದ ಸ್ಫುಟವಾದ ಪರಿಶುದ್ಧವಾದ ಹಿಂದಿ ಅಕ್ಷರಗಳಿಂದ ವಿರಾಜಿಸುತ್ತಿವೆ. ಕಾಗದ ಪತ್ರಗಳ ಪುಡಿಕೆಗಳ ರಕ್ಷಾ ಪತ್ರಗಳ ಮೇಲೂ ಹಿಂದಿಯೇ. ಬೀದಿಯಲ್ಲಿ ಓಡಾಡುವ ವಾಹನಗಳು ಸಹ ತಮ್ಮ ಪಟ್ಟಿದ ಲಿಖಿತಗಳನ್ನು ದೇವನಾಗರಿಯಲ್ಲಿಯೇ ತೋರುತಿವೆ.

ಈ ಹೊಸ ಗಾಳಿಯಿಂದ ಹಿಂದೀ ಶಿಕ್ಷಕರ ಮತ್ತು ಹಿಂದೀ ಟೈಪಿಸ್ಟರ ಬೇಡಿಕೆ ಮಿತಿಮೀರಿ ಬೆಳೆದು ಅವರ ವೇತನ ದರವೂ ತುಂಬ ಏರಿಹೋಗಿದೆ. ಈ ಪಲ್ಲಟವನ್ನು ಓರ್ವ ಶಿಕ್ಷಣ ತಜ್ಞರು, “ ಹಿಂದಿನ ಕಾಲದ ಸುಶಿಕ್ಷಿತರು ಇಂದು ಅಶಿಕ್ಷಿತರಾಗಿಯೂ ಅಂದಿನ ಅಶಿಕ್ಷಿತರೇ ಇಂದು ಸುಶಿಕ್ಷಿತರಾಗಿಯೂ ಕಾಣುವ ಅಕಲ್ಪಿತ ಪರಿಸ್ಥಿತಿ ಬಂದೊದಗಿದೆ ” ಎಂಬುದಾಗಿ ನಿದಾನಿಸಿದ್ದಾರೆ.

ಹಿಂದೀ ಸಂಸ್ಥಾನ

ನಿರಾಶ್ರಿತರ ಸಹಾಯಕ್ಕಾಗಿ ಕಂಬಳಿ ಬೆಚ್ಚನ್ನ ಬಟ್ಟೆಗಳು ಮುಂತಾದವನ್ನು ಸಾರ್ವಜನಿಕರು ಉದಾರ ಹಸ್ತದಿಂದ ಕೊಡಬೇಕೆಂದು ಕೋಚೀನ ಸರಕಾರದವರು ಒಂದು ಮನವಿಯನ್ನು ಹೊರಡಿಸಿದ್ದಾರೆ.

ತಿರುವಾಂಕೂರು ಸರಕಾರದವರು ನಮ್ಮ ಸರಕಾರದ ರಚನೆಯ ಬಗೆಗೆ ಸಂಸ್ಥಾನ ಕಾಂಗ್ರೆಸ ಕಾರ್ಯಸಮಿತಿಯವರು ಕರಡ [illegible] ಕರು ವಿಚಾರ ನಡೆಸಿರುವರೆಂದು ತಿಳಿಯುತ್ತದೆ.

ಜುನಾಗಡದಲ್ಲಿ ಪೋಲೀಸರಿಗೆ [illegible]

ಜೀವನದಲ್ಲಿ ವಿಷಕ್ಕೂ ಅದೇ ಕಾರಣ, ಅಮೃತಕ್ಕೂ ಅದೇ ಕಾರಣ.—ಅಡ ಹೆಂಡತಿಯು ಬೇನೆ ಬಿದ್ದ ಮೇಲೆ ನಂದನನ ಬಾಳು ವೈಪರೀತ್ಯಕ್ಕಿಟ್ಟುಕೊಂಡಿತು. ಅವನ ಮಾನಸಿಕ ವ್ಯಾಪಾರವು ಹೀಗೆ ದ್ವೈತಭಾವನೆಯನ್ನು ತಾಳಲಿಕ್ಕೆ ಅವನ ದೌರ್ಬಲ್ಯವೇ ಕಾರಣವೆನ್ನಬೇಕು. ಆದರೂ ಅವನ ವಿವೇಕಪರಿವೇಷ್ಟಿತ ಮನಸ್ಸು ಒಮ್ಮೊಮ್ಮೆ —ನಂದನ ನೀನು ಮಾಡುವದು ಸಜ್ಜನಸಮ್ಮತವೆ? ಕೃತಜ್ಞತೆಯನ್ನು ಹೀಗೆ ಹಾಳುಮಾಡಿಕೊಂಡು ಅಶಿಕ್ಷಿತನಂತೆ ನಡೆಯಬಹುದೇ? ಕಾರಣವಾದರೂ ಏನಿದೆ? ಜೀವನದ ಜಂಜಾಟದಲ್ಲಿ ಕರ್ತವ್ಯಚ್ಯುತನಾಗಿ ಬಾಳುವದು ಮಾನವನ ಧರ್ಮವೇ? ಹೋಗಲಿ ನಿನ್ನನ್ನು ಇಂಥ ಉನ್ನತ ಸ್ಥಿತಿಗೆ ತಂದ ಗೆಳೆಯನ ಮುಖಾವಲೋಕನ ಮಾಡಬಾರದೆಂದು ನಿರ್ಣಯಿಸುವದು ಸ್ತುತ್ಯವೇ? ... ಎಂದು ಕೂಗಿ ಅಬ್ಬರಿಸುವದು.

ನಂದನನ ಪ್ರಜ್ಞೆ ಗಾಬರಿಯಾಗುವದು. ಕ್ರಿಯಾಶೂನ್ಯತೆಯಿಂದ ಮಿದುಳು ಆವರಿಸಿ ಕತ್ತಲೆಯು ಕವಿದಂತಾಗುವದು. ದೇಹದ ಹನ್ನೊಂದು ಇಂದ್ರಿಯಗಳು ಏನು ಮಾಡಬೇಕೆಂದು ಬಾಯಿ ಬಿಡುವವು. ಆದರೆ ಅಜ್ಞಾನಾವೃತ ಮನಸ್ಸು ನಂದನನ ನಾಡಿನಾಡಿಗಳಲ್ಲಿ ಹರಿದು, ಚಾಲನೆಯನ್ನಿತ್ತು ದೇಹಯಷ್ಟಿಯನ್ನು ಎತ್ತೆತ್ತಲೋ ನಡೆಸಿಕೊಂಡು ಹೋಗುವದು. ಎಲ್ಲೆಲ್ಲೋ ಓಡಾಡಿಸಿಬಿಡುವದು. ಆದರೆ ಈ ನಡೆದಾಟ ಓಡಾಟದಲ್ಲಿಯೂ ಆ ವಿವೇಕವು ಮುಂದುವರಿದು —ನಂದನ, ಪಾವನನು ನಿನ್ನ ಜೀವದ ಗೆಳೆಯನಲ್ಲವೇ? ಈಗ ಎರಡು ದಿನ ಬೆಳಗಾವಿಯಲ್ಲಿ ನಿಂತು ಭಾಷಣಮಾಡುತ್ತಿರುವನು. ವಿದ್ವತ್ಪೂರ್ಣವಾದ ಅವನ ವ್ಯಾಖ್ಯಾನಕ್ಕೆ ನಾಗರಿಕರೆಲ್ಲರೂ ಮಂತ್ರಮುಗ್ಧರಂತೆ ಸಭಾಸ್ಥಾನದಲ್ಲಿ ಕಿಕ್ಕಿರಿದು ಅವಲೋಕಿಸುತ್ತಿರುವರು. ಅವನ ನಿಸ್ವಾರ್ಥ ಸೇವೆ, ಹಿಂದುಧರ್ಮದ ಬಗ್ಗೆ ಇದ್ದ ಅವನ ಆಳವಾದ ಉಜ್ವಲವಾದ ಪಾಂಡಿತ್ಯ, ಸರ್ವಧರ್ಮ ಸಮನ್ವಯಬುದ್ಧಿ ಊರತುಂಬ ಹುಚ್ಚುಹೊಳೆಯಾಗಿ ಹರಿದು, ಪ್ರತಿಯೊಬ್ಬರ ಬಾಯಲ್ಲಿ ಪಾವನನು ಪಾವನಸ್ವರೂಪಿಯಾಗಿ ಕಾಣುತ್ತಿರುವನು. ಹೀಗಿದ್ದು ನೀನು ಅವನನ್ನು ಕಾಣದೆ ಕಣ್ಣು ತಪ್ಪಿಸಿ ಕಳ್ಳನಂತೆ ಸಂದಿಗೊಂದಿಯಲ್ಲಿ ನುಸುಳುವದು ಸರಿಯೇ? ಹೋಗು. ಹೋಗಿ ಭೆಟ್ಟಿಯಾಗು. ಪೂರ್ವಸ್ನೇಹವನ್ನು ನಿರಾಕರಿಸುವಂತಹ ಕ್ಷುದ್ರನಲ್ಲ. ಹೋಗು. . .... . ಎಂದು ಎಚ್ಚರಿಸುವದು.

ಅಜ್ಞಾನಾವೃತ ಮನಸ್ಸು ಮಾತ್ರ ವಿಪರೀತ ಬುದ್ಧಿಯಿಂದ— ನಂದನ, ಆಗದು. ಅವನೆಲ್ಲಿ! ನೀನೆಲ್ಲಿ!! ಅವನೊಬ್ಬ ಕೀರ್ತಿಶಾಲಿಯಾದ ಮಹಾಪುರುಷ. ನೀನು ದರಿದ್ರಜೀವನದ ಚಕ್ರತೀರ್ಥದಲ್ಲಿ ಹೊರಳಾಡುವ ಹುಳು! ಅವನು ಪೂರ್ಣತೃಪ್ತನು. ನೀನು ಅತೃಪ್ತಿಯ ಮಳಲುಗಾಡು! ನೀನು ದಕ್ಷಿಣ. ಅವನು ಉತ್ತರ. ಪೂರ್ವದ ಒಂದು ಕ್ಷಣಕಾಲದ ಸ್ನೇಹವು ಎರಡು ಧ್ರುವಗಳನ್ನು ಕೂಡಿಸಬಹುದೇ! ವ್ಯವಹಾರಶೂನ್ಯ ಬುದ್ಧಿಯ ಮಾತಿಗೆ ಮರುಳಾಗಬೇಡ. ಓಡು. ದೂರ ಓಡು. ಮರೆಯಾಗು, ಎಂದು ಪ್ರಚೋದಿಸುವದು.

ಆದರೂ ಪ್ರಗತಿಶೀಲ ಪ್ರಜ್ಞೆಯು ಮುಂದುವರಿದು-ನಂದನ, ನಿನ್ನ ಶಿಕ್ಷಣದ ದಿನಮಾನಗಳನ್ನು ಮರೆಯಬೇಡ. ಮಧುಕರವೃತ್ತಿಯಿಂದ ಪ್ರಾಥಮಿಕ ಶಾಲೆಯ ಅಭ್ಯಾಸವನ್ನು ಮುಗಿಸಿಕೊಂಡು ಬಂದೆ. ಮಾಧ್ಯಮಿಕ ಶಾಲೆಯನ್ನು ಪಾವನನ ಸಹಾಯದಿಂದ ಪರಿಪೂರ್ಣಮಾಡಿದೆ. ಹಣದ, ಗುಣದ ನೂರು ತೊಂದರೆಗಳನ್ನು ಅವನು ನಿವಾರಿಸಿ ತನ್ನ ತಂದೆಯವರ ನೆರವಿನಿಂದ ಒಂದು ಶಿಕ್ಷಕನ ಸ್ಥಳವನ್ನು ಕೊಡಿಸಿದನು. ಅಲ್ಲದೆ ತಮ್ಮ ಪರಿಚಯಸ್ಥಳದಲ್ಲಿಯ ಒಂದು ಕನ್ಯೆಯನ್ನು ಗೊತ್ತುಮಾಡಿ ಲಗ್ನಮಾಡಿದನು. ಇಷ್ಟೆಲ್ಲ ಬಗೆಯಿಂದ ನೆರವಾದವರನ್ನು ಹರಿದುಕೊಂಡು ನಿಲ್ಲಬಹುದೇ? .... . ನಂದನ, ಮಾನವತೆಯನ್ನೇ ಹರಿದುಕೊಂಡು ಎಲ್ಲಿ ಓಡಬಲ್ಲೆ? ಹೌದು, ನೀನು ದರಿದ್ರನು; ಇರಬಹುದು. ಒಂದು ತುತ್ತು ಅನ್ನಕ್ಕೂ ಅಭಾವ ಇರಬಹುದು. ನಿನ್ನ ಹೆಂಡತಿಯನ್ನು ಬದುಕಿಸಲೂ ದುರ್ಬಲ ಇರಬಹುದು. ಆದರೆ ಇವೆಲ್ಲ ಯಾರ ಅಧೀನವು? ಹೋಗು, ಸ್ನೇಹದ ಎರಡು ಶುಷ್ಕ ಮಾತುಗಳನ್ನೂ ಆಡಲಾರದಷ್ಟು ದರಿದ್ರನು ನೀನಾಗಿಲ್ಲ; ದುರ್ಬಲನಾಗಿಲ್ಲ. ಅದನ್ನು ಸಹ ಕಳೆದುಕೊಂಡರೆ ನಿನ್ನದೆಂಬುದು ಏನುಳಿಯಿತು? ಆದುದರಿಂದ ಹೋಗು, ಭೆಟ್ಟಿಯಾಗು— ಎಂದು ನಯವಿನಯ ಭಯದಿಂದ ನುಡಿಯುವದು.

ಹೀಗೆ ಒಂದಲ್ಲ ಹತ್ತುಬಗೆಯಾಗಿ ಹೇಳಿದರೂ ನಂದನನು ಕಣ್ಣು ತಪ್ಪಿಸಿ ಓಡಾಡುವದನ್ನು ನಿಲ್ಲಿಸಲಿಲ್ಲ. ಪಾವನನನ್ನು ಮರೆಯಬೇಕೆಂದು ಪ್ರಯತ್ನಿಸುವ ಸರ್ವಶಕ್ತಿಗಳೂ ಸ್ಮರಣೆಯ ಅತ್ಯಧಿಕ ಪೋಷಣನನ್ನು ತಾಳಿ ಧ್ಯಾನ ಯೋಗಿಗಳನ್ನು ಮೀರು

ಚಿಕ್ಕ ಕತೆ

★ ಗೆಳೆತನ ★

(ಶ್ರೀಕೃಷ್ಣ ಪಾಟೀಲ)

ವಂತಾಯಿತು. ನಂದನನು ಹೆಂಡತಿಯ ಬೇನೆ, ದಾರಿದ್ರ್ಯ ಇವುಗಳಿಂದ ಗೆಳೆತನಕ್ಕೆ ಅಗತ್ಯವಾದ ಧೈರ್ಯವನ್ನು ಕಳೆದುಕೊಂಡಿದ್ದನೆಂದು ಹೇಳಲು ಸಾಕಷ್ಟು ಆಧಾರಗಳಿರಲಿಲ್ಲ. ಅವನು ಉಪವಾಸ-ವನವಾಸಗಳಿಗೆ ಕಲ್ಲು. ನಿಂದೆ-ನಿಂದನೆಗಳಿಗೆ ಕಿವುಡ. ಸುಖ-ದುಃಖಗಳಿಗೆ ನಿಶ್ಚಲ. ಪ್ರಾಪಂಚಿಕ ಚಕ್ರದಲ್ಲಿ ಸಿಕ್ಕ ದಿನದಿಂದ ಒಂದಿಷ್ಟು ವ್ಯತ್ಯಯವಾಗದಂತೆ ಎರಡನ್ನೂ ಉಂಡು-ತಿಂದು-ತೇಗಿ ಹೆಂಡತಿಯ ಸಂಗಡ ನಡೆದು ಬಂದಿದ್ದನು. ಈಗ ಅದೇ ಅಕ್ಷಯಾ ಮೃತ್ಯುವಿನ ದವಡೆಯಲ್ಲಿ ಸಿಕ್ಕು ಒದ್ದಾಡುತ್ತಿರುವದರಿಂದ ತನ್ನ ಕರ್ತವ್ಯಕ್ಕೆ ಅನುಗುಣವಾಗಿ ಬದುಕಿಸಿಕೊಳ್ಳಲು ಹೆಣಗುತ್ತಿದ್ದನು. ಈ ಕಿತ್ತಾಟದ ಸಮಯದಲ್ಲಿ ತನಗೆಲ್ಲಿ ವಿಪತ್ತಾಗುವದೋ ಎಂದು ಹೆದರಿರಲಿಲ್ಲ. ತನ್ನೊಂದು ಕರ್ತವ್ಯ ಕರ್ಮ ನೆರವೇರಿದರೆ ಸಾಕು. ಫಲವು ಹೀಗಾಗಲೆಂದೂ ಆಶಿಸಿದವನಲ್ಲ. ಆದರೆ ಅವನಲ್ಲಿಯ ಅವ್ಯಕ್ತ ದುರ್ಭಾವನೆಯು ಆಗಾಗ ನುಡಿಯಿಂದ– ನಂದನ, ಅಕ್ಷಯಾ ಸತ್ತಳು ಎಂದು ಕೂಗಿಟ್ಟು ಬೆದರಿಸುವದು. ನಂದನನು ಥಕ್ಕನೆ ತನ್ನ ಸರ್ವಾವಸ್ಥೆಗಳನ್ನು ಕೇಂದ್ರೀಕರಿಸಿ ಅಕ್ಷಯಾಳ ನಾಡಿಯನ್ನು ಹಿಡಿದು ಸಜೀವತೆಯನ್ನು ದೃಢಪಡಿಸಿಕೊಳ್ಳುವನು. ಈ ಮಾನಸಿಕ ಹೊಯ್ದಾಟದಿಂದ ಒಮ್ಮೊಮ್ಮೆ ತಾನೇ ನಕ್ಕು ಬಿಡುವನು. ಆದರೆ ಒಂದು ಮಾತನ್ನು ಗಟ್ಟಿ ಮಾಡಿಕೊಂಡಿದ್ದನು.— ಅಕ್ಷಯಾ ಸತ್ತರೆ! ಮುಂದಿನ ಕೆಲಸವನ್ನು ಹೀಗೆ ಮಾಡಬೇಕು ಎಂದು ನನ್ನ ಪೂರ್ವಜರು ಹೇಳಿಕೊಟ್ಟಿರುವರು. ಅಷ್ಟನ್ನು ಮಾಡುವದು ನನ್ನ ಕೆಲಸ. ಅಂದ ಮೇಲೆ ಹೆದರಿದ್ದನೆಂದು ಯಾರು ಹೇಳಬೇಕು?

ಇಂದು ಅಕ್ಷಯಾಳ ಹಾಸಿಗೆಯನ್ನು ಬದಲಿಸಿ ಮೆಲ್ಲಗೆ ಮಲಗಿಸಿದನು. ಇದೊಂದೇ ಕ್ಷಣದಲ್ಲಿ ನಂದನನಿಗೆ ಹೂ ಹಿಡಿದ ಕೈಯಿಂದ ಎಲುವು ಹಿಡಿದಂತೆನಿಸಿ ದಾಂಪತ್ಯದ ಸಹಸ್ರಾರು ಸಂಗತಿಗಳು ಚಿತ್ರಪಟವಾಡಿದವು. ಕಹಳೆಯ ಕಂಠದಿಂದ ಉಕ್ಕಿ ಬಂದ ದುಃಖವನ್ನು ಹೇಗೋ ನುಂಗಿ, ಅಕ್ಷಯಾ! ಎಂದು ನುಡಿದನು.

ಅಕ್ಷಯಾ ಮೆಲ್ಲನೆ ಕಣ್ಣುಗಳನ್ನು ತೆರೆದು ಗಂಡನನ್ನು ನೋಡಿ ಹಗೆಯಲ್ಲಿ ಕುಳಿತು ಮಾತಾಡುವಂತೆ ಕ್ಷೀಣ ಸ್ವರದಿಂದ ಏನು? ಎಂದಳು.

—ಇಂದು ನಿನಗೆ ಒಳ್ಳೆಯದೆ? ಎಂದು ಕೇಳಿದನು.

—ಅಹುದು. ನನಗೆ ಯಾವ ವೇದನೆಯೂ ಸ್ಪಷ್ಟವಾಗಿ ತಿಳಿಯಲೊಲ್ಲದು. ಕಷ್ಟದಿಂದ ಮಾತಾಡಿದಳು.

— ಅಂದರೇನು?

—ನನಗೆ ಇದಕ್ಕೂ ಹೆಚ್ಚಾಗಿ ಹೇಳಬೇಕೆಂದು ತಿಳಿಯದು. ಜ್ವರದ ತಾಪ, ಅಶಕ್ತತೆಯ ಮಬ್ಬು ಲತೆಯು ಪ್ರಜ್ಞೆಯಲ್ಲಿ ಅಡಗಿದಂತೆನಿಸಹತ್ತಿದೆ.

ನಂದನನು ನಿಜವಾಗಿ ಗಾಬರಿಯಾದನು. ಆದರೆ ಅದನ್ನು ತೋರ್ಪಡಿಸುವಂತಿರಲಿಲ್ಲ.

—ಅಕ್ಷಯಾ, ಔಷಧವನ್ನು ಕುಡಿಯುವೆಯಾ? ಈ ಪ್ರಶ್ನೆಯನ್ನು ಯಾವ ಉದ್ದೇಶಕ್ಕಾಗಿ ನುಡಿದನೋ ತಿಳಿಯದು.

—ಹೂ; ಕುಡಿಯುವೆ. ಕೊಂಚ ಹರಿದು ಎತ್ತಿದ ಪ್ರಶ್ನೆಗೆ ಅಕ್ಷಯಾ ಬೇರೊಂದು ಅರ್ಥ ಕಲ್ಪಿಸಹತ್ತಿದಳು.

ನಂದನನು ಔಷಧವನ್ನು ಸುರಿದು ಕುಡಿಸಿದನು. ಅಕ್ಷಯಾ ಅವನ ಮುಖವನ್ನು ತುಂಬುಗಣ್ಣು ತೆರೆದು ನೋಡಹತ್ತಿದಳು. ತಾನು ಎಲುವು-ತೊಗಲಿನ ಗೂಡಾಗಿ ಹಾಸಿಗೆಗೆ ಹೊಂದಿ ಮಲಗಿ ಉಸಿರಿಡುತ್ತಿದ್ದರೂ ಮಾಂಸಹೀನ, ಕಳಾಹೀನ, [illegible]ಹೀನ ಗಂಡನ ಮುಖವನ್ನು ನೋಡಿ ದುಃಖದಿಂದ– ಇನ್ನಷ್ಟು ಹತ್ತಿರ ಬನ್ನಿರಿ. ಎಂದಳು.

—ಏಕೆ? ಎಂದು ನುಡಿದು ಆಕೆಯ ಹತ್ತಿರ ಕುಳಿತು ಒಣಗೂದಲಿನಲ್ಲಿ ಬೆರಳು ಆಡಿಸಹತ್ತಿದನು.

ಅಕ್ಷಯಾ ಕೈಯನ್ನು ಹಿಡಿದುಕೊಂಡು– ನನ್ನ ಕಣ್ಣು ಕೆಟ್ಟವೆಯೋ, ವಸ್ತುಸ್ಥಿತಿಯು ಹೀಗಿದೆಯೋ ತಿಳಿಯದು. ನೀವು ಎಷ್ಟು ಸೊರಗಿರುವಿರಿ?

—ಅಷ್ಟೇನಿಲ್ಲ. ಎಂದು ನುಡಿದು ಹುಸಿ ನಗೆ ನಕ್ಕನು.

—ಇದರಿಂದ ನನಗೆ ಸಮಾಧಾನವೆನಿಸದು. ಮದುವೆಯಾದ ಮೇಲೆ ನಿಮ್ಮ ತುಂಬಿದ ದೇಹವನ್ನು ಕಣ್ಣಿನಿಯ ನೋಡಬೇಕೆಂದರೆ ಆ ಕಾಡುಗಾಡು ನಾಚಿಕೆಯು ನನ್ನನ್ನು ತರೆಹಿಡಿದು ನಂಬಿಸಿತು. ಇಂದು ನೋಡಬೇಕೆಂದರೆ ದುಃಖವು

[illegible] ದೇಹಕ್ಕೆ [illegible] ಕಾಲುದೆ [illegible] ಹತ್ತಿದೆ. [illegible] ಎಂಬ ದೂರದ [illegible] ಕಣ್ಣೀರು [illegible]. ನಂದನನು ಅಕ್ಷಯಾಳಿಗೆ [illegible] ಸುಖದ ಸಮಾಧಾನದ ಮಾತುಗಳನ್ನು [illegible] ನಿರ್ಧರಿಸಿಕೊಂಡಿದ್ದನು. ಆದರೆ [illegible] ಮಾತುಗಳೆಲ್ಲ ದುಃಖದಲ್ಲಿಯೇ [illegible] ಬಿಡುವನು. ಕಡೆಗೆ ಅಕ್ಷಯಾ, ನಾನು ಸೊರಗಿದಂತೆ [illegible]. ಆದರೆ ನೀನು ಎಷ್ಟು [illegible] ದಿನ ನನ್ನ ಮುಖದ [illegible] ನಾಡಿಗಳ [illegible] ವೈಕಲ್ಯವ [illegible] ಆ ಕ್ಷಣದಲ್ಲಿ [illegible] ಕಾಣುವೆ. [illegible] ಎಂದು ತಿಳಿ.

ದೇವರ ಇಚ್ಛೆ ಹಾಗಿದ್ದರೆ ಅವನೇ ಅದನ್ನು ಪೂರ್ತಿಮಾಡಿಕೊಳ್ಳಬೇಕು.

ನಂದನನು ಜೀವನದಲ್ಲಿ ಇದಕ್ಕೂ [illegible]ಯಾದ ಉತ್ತರವನ್ನು ಅಕ್ಷಯಾಳಿಂದ ಕೇಳಿರಲಿಲ್ಲ.

ಈ ಪ್ರಸಂಗದಲ್ಲಿ ದೇವರು ನಿನ್ನನ್ನು [illegible] ಅಕ್ಷಯಾ, ಎಂದು ಗುರಿಯಿಲ್ಲದೆ ಉತ್ತರಿಸಿದನು.

ಇನ್ನೊಂದು ಮಾತನ್ನು ಕೇಳಬೇಕೆಂದು [illegible] ವಿಚಾರಿಸುತ್ತಿರುವೆ. ನೀವು [illegible] ಈ ವರೆಗೆ ನಮ್ಮನ್ನಿದ್ದುದಕ್ಕೆ ನಾನೂ [illegible] ರುವೆ. ನಿಮ್ಮ ಮನಸ್ಸಿನೊಳಗೇನಿದೆಯೋ ನಾನು ಹೇಗೆ ಅರಿಯಲಿ? ಆ ಬಗೆಯು ಮೇಲೆ ಆ ಮಾತು ಪತ್ತಾರು ಸಾರಿ ಬಂದು ಹೋಗಿರಬೇಕು.- . . . ಮುಂದೆ ಮಾತು [illegible] ನಂದನನ ಮುಖನೋಡಹತ್ತಿದಳು.

ಅದೇನು? ಎಂದು ಕೇಳಿದನು.

ನಿಮ್ಮ ಚಿತ್ತದಲ್ಲಿದೆ ನುಡಿಯುತ್ತಿರುವೆನೆಂದು ಅರಿಯಬಲ್ಲೆ. ಅದರೂ ಹೇಗೆ ನಮ್ಮ [illegible]

ನಂದನನು ಇಕ್ಕಳದಲ್ಲಿ ಸಿಕ್ಕಂತೆ ಚಡಪಡಿಕೆ ಹತ್ತಿದನು, ತಾನು ಯಾವುದನ್ನು ಮಾಡಬಾರದೆಂದಿದ್ದನೋ ಅದೇ ಇದ್ದರೆ ನಿ[illegible] ಎಂತು? ಎಂದು ಬೆದರಿದನು. ಪ್ರಶ್ನೆ ಹೇಗೋ ಒಮ್ಮೆ ಉದ್ಭವಿಸಿದರೆ ಅದನ್ನು ಅರ್ಧಕ್ಕೆ [illegible]ಲ್ಲಿಲ್ಲ. ಕೊನೆಮಾಡಿಸುವದೂ ಕಠಿಣ. ಅಲ್ಲದೆ ಹೆಂಡತಿಯನ್ನು ಆಕಸ್ಮಾತ್ [illegible] ಬೆದರಿಸುವದೂ ಕಷ್ಟ. ಮರಣಾವಸ್ಥೆಯಲ್ಲಿ ಸಿಕ್ಕ ಅವಳನ್ನು ಸಮಾಧಾನ ಪಡಿಸಬೇಕೆಂದು ಸಂಕಲ್ಪಿಸಿದ್ದನು. ಅದರೂ ಏನಿದೆಯೋ ಎಂಬ ಸಂಶಯದಿಂದ ಹೇಳು. ಅಕ್ಷಯಾ ಅಂಥದೇನು? ಎಂದು ನುಡಿದನು.

ಪಾವನನು ಇಲ್ಲಿ ಬಂದಿರುವನೆಂದು ಕೇಳುವೆ. ನೀವು ಒಮ್ಮೆ ಅವನನ್ನು ಕರೆದು ತನ್ನಿರಿ. ಇದರಿಂದ ಸುಖವೋ ದುಃಖವೋ ಅರಿಯೆ. ಅವನನ್ನು ಕಾಣಬೇಕೆಂದಿರುವೆ. ಇಷ್ಟೇ . . ಮೆಲ್ಲಗೆ ನುಡಿದಳು.

ಆಯಿತು. ನಂದನನ ವಿವೇಕಹೀನ ಮನಸ್ಸಿಗೆ ಕೊಳ್ಳಿಯಿಟ್ಟಂತಾಯಿತು. ಅವನ್ನ ಮರಣಾವಸ್ಥೆಯ ಅಕ್ಷಯಾಳ ಪ್ರಶ್ನೆಗೆ ಮೋರೆ ಮುಚ್ಚಿ ಮರೆಯಾಯಿತು. ನಂದನನ ವಿಪರೀತ ಭಾವನೆಯು ಮೈತುಂಬಿಕೊಂಡಿದ್ದರೂ ವ್ಯವಹಾರಜ್ಞನಂತೆ– ಬಂದಿರುವ, ಎರಡು ದಿನಗಳಿಂದ ವ್ಯಾಖ್ಯಾನ ಕೊಡುತ್ತಿರುವ. ಅವನನ್ನು ಕೊಂಡಾಡದ ಕಣ್ಣು ನಾಲಿಗೆಗಳಿಲ್ಲ. ಆದರೆ ಈ ಅವಸ್ಥೆಯಲ್ಲಿ ಹೇಗೆ ಕಾಣಲಿ? ನೀನು ನಿಮ್ಮದಿಯಾಗಿದ್ದರೆ ಬೇರೊಂದು ಕಡೆಗೆ ಇಳಿಯಗೊಡಬಹುದಿತ್ತಲ್ಲ? ನನ್ನ ಬಾಲ್ಯದ ಅವನನ್ನು ಎಂದಿಗೂ ಮರೆಯಲಾರೆನು. ಆ ಪವಿತ್ರವಾದ ಸ್ನೇಹಮೂರ್ತಿಯನ್ನು ನಿನ್ನ ಪರಿಸ್ಥಿತಿಯಿಂದ ಎರಡು ದಿನ ಹೆಚ್ಚಾಗಿ [illegible] ತ್ತಿದ್ದೆ. ಆದರೆ ಈಗ ಅವನು ನಮ್ಮ ಮನೆಗೆ ಬಂದರೆ ಕೂಡ ಹೇಳಲು ಒಂದು ಗೇಣು ಒಳ್ಳೆಯ ನೆಲವಿಲ್ಲ. ಹಾಸಲು ನೂಲ ಸ್ವಚ್ಛ ಅರಿವೆಯಿಲ್ಲ. ತಿನ್ನಲು ಕೊಡಲು ಒಂದು ಕಲ್ಲು ಸಕ್ಕರೆಯು ಸಹ ಇಲ್ಲ. ನನ್ನ ದುರ್ದೈವದ ಚಿತ್ರವನ್ನು ಆ ಪ್ರೇಮಮಯನ ಮುಂದೆ ಹೇಗೆ ಪ್ರದರ್ಶಿಸಲಿ? ಅಕ್ಷಯಾ, ಈ ವಿಚಾರವನ್ನು ನೀನು ಎರಡು ದಿನಗಳಿಂದ ಚರ್ಚಿಸುತ್ತಿರಬೇಕು. ನಾನು ಅವನು ಬರಲಿರುವನೆಂಬ ದಿನದಿಂದ ಹೃದಯದಲ್ಲಿ ಕಲ್ಲು ನುಣ್ಣು ಮುಚ್ಚು ಹಾಕಿಕೊಂಡು [illegible]

[illegible]

(ಇನ್ನೂ ಇದೆ)



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಡಿಸೆಂಬರ ೧೫ ರಿಂದ ೨೧ ರ ವರೆಗೆ

ಮೇಷ

ಸ್ವತಃದ ಮತ್ತು ಹೆಂಡತಿಯ ಆರೋಗ್ಯ ಉತ್ತಮ. ಆದರೆ ಮಕ್ಕಳು ಮರಿಗಳಿಗೆ ಕಾಹಿಲೆ. ಉಳಿದ ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಚೆನ್ನಾಗಿ ಹಬ್ಬುತ್ತ ಹೋಗುವದು. ಆದರೆ ಲಾಭ ಮತ್ತು ಪ್ರಗತಿ ಅಷ್ಟಕ್ಕಷ್ಟೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಉತ್ತಮ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೫, ೧೬, ೧೭, ಅನುಕೂಲ.

ವೃಷಭ

ಸ್ವತಃದ ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಮತ್ತು ಮಕ್ಕಳದು ಉತ್ತಮ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮನಸ್ಸಿನಂತೆ. ಸ್ಥಾವರದಲ್ಲಿ ಹೆಚ್ಚಳ. ಬಂಧುವರ್ಗದವರಲ್ಲಿ ಉತ್ಕರ್ಷ ಉದ್ಯೋಗದಲ್ಲಿ ಡೆಚ್ಚಿನ ಪ್ರಗತಿ ಒಳ್ಳೆ ಪ್ರತಿಷ್ಠೆ ತುಂಬ ದ್ರವ್ಯಲಾಭ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ ಅಲ್ಲದೆ ಬಗೆಬಗೆಯ ಅಡಚಣೆಗಳಿಂದ ಶತ್ರು ಬೇಸರಗೊಳ್ಳುವನು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಉತ್ತಮ. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೬, ೧೭, ೨೦, ೨೧ ಅನುಕೂಲ.

ಮಿಥುನ

ಸ್ವತಃಕ್ಕೆ ಮತ್ತು ಹೆಂಡತಿಗೆ ಸಂಪರ್ಕದೋಷದಿಂದ ಪೀಡೆ. ಆದರೆ ಮಕ್ಕಳಿಗೆ ಕ್ಷೇಮ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ ಉದ್ಯೋಗದಲ್ಲಿ ಲಾಭ ಬಹಳ ಉತ್ತಮ. ಆದರೆ ಅ ಮಾನದಿಂದ ಪ್ರಗತಿ ಮತ್ತು ಪ್ರತಿಷ್ಠೆ ಕುಂದುತ್ತ ಹೋಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷದ ತಲೆಯ ಮೇಲೆ ಕೈ. ಮಿತ್ರಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಉತ್ತಮ. ಆರಿದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೮, ೧೯, ೨೦, ೨೧ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಮತ್ತು ಮಕ್ಕಳ ಆರೋಗ್ಯ ಚೆನ್ನಾಗಿ ಉಳಿದು ಅನೇಕ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಜೋರಿನಲ್ಲಿ. ಆದರೆ ಲಾಭದಲ್ಲಿ ಅಯತ್ತ ಹೊತ್ತಿಗೆ ಗೊಂದಲ ಏಳುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರು ಜೋರಿನಲ್ಲಿಯೆ. ಆದರೆ ಯಶಸ್ಸಿನ ಒಲವು ನಿಮ್ಮ ಕಡೆಗೆ. ಮಿತ್ರತ್ವದಲ್ಲಿ ವಿರೋಧ ಮತ್ತು ಸ್ಥಾವರದಲ್ಲಿ ಗೊಂದಲ. ಪ್ರವಾಸಾದಿ ಕೆಲಸ ಮನಸ್ಸಿನಂತೆ, ಪುಷ್ಯದ ಕೊನೆಯ ೨ ಮತ್ತು ಆಶ್ಲೇಷಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೧೬, ೧೭, ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳಿಗೆ ಬಹಳ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕಸುಖ ಅನುಕೂಲ. ಪ್ರಿಯಆಪ್ತೇಷ್ಟರಲ್ಲಿ ಮಂಗಳ ಕೃತ್ಯಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮವೆ. ಆದರೆ ವೆಚ್ಚ ಅಂದಾಜಿಗಿಂತ ಹೆಚ್ಚು. ಮಿತ್ರತ್ವದಲ್ಲಿ ಕಿಂಚಿತ್ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ಉತ್ತಮ ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು- ಪುಭಾಡ ಕೊನೆಯ ೩ ಮತ್ತು ಪೂರ್ವಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೮, ೧೯ ಅನುಕೂಲ.

ಕನ್ಯಾ

ಪ್ರಕೃತಿ ಉತ್ತಮ ಹೆಂಡತಿ ಮತ್ತು ಮಕ್ಕಳಿಂದ ಸಮಾಧಾನ ಹೆಚ್ಚಿಸುವಂಥ ಮಾತುಗಳು. ಒಂದಾದರೂ ಪ್ರಾಪಂಚಿಕ ಸ್ಥಿರ ಉನ್ನತಿಯ ಸಂಗತಿ ಸಂಭವಿಸುವ ಸುಯೋಗ. ಪ್ರಿಯಜನರ ಸಹವಾಸ. ಆದರೆ ಅವರಲ್ಲಿ ಒಬ್ಬಿಬ್ಬರು ತೊಂದರೆ ಕೊಡುವಂಥ ಉಪಾಧಿಯ ಕೃತ್ಯಗಳನ್ನು ಮಾಡುವ ಸಂಭವ. ಉದ್ಯೋಗದಲ್ಲಿ ಸಾಮಾನ್ಯವಾಗಿ ಅನುಕೂಲ ಸ್ಥಿತಿ. ವಾದದಲ್ಲಿ ವೆಚ್ಚ ಮತ್ತು ತೊಂದರೆ ಬಹಳ. ಆದರೆ ತನುಕೂಲತೆ ತುಂಬ. ಪ್ರವಾಸ ಮತ್ತು ಪತ್ರವ್ಯವಹಾರ ಉತ್ತಮ. ಉತ್ತರಾದ ಕೊನೆಯ ೩ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೧೬, ೧೭, ೨೦, ೨೧ ಅನುಕೂಲ.

ತುಲಾ

ಎಲ್ಲರ ಪ್ರಕೃತಿ ಉತ್ತಮ. ಆದರೆ ಪತಿ ಪತ್ನಿಯರಲ್ಲಿ ಮೇಲಿಂದ ಮೇಲೆ ವಿರೋಧ ಬರುತ್ತ ಹೋಗುವದರಿಂದ ಪ್ರಾಪಂಚಿಕ ಸುಖದಲ್ಲಿ ವಿರಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಮಂದ ಸ್ಥಿತಿಯಲ್ಲಿಯೆ. ಆದರೆ ದ್ರವ್ಯಲಾಭ ತುಂಬ ಮಿತ್ರಸುಖ ಉತ್ತಮ. ಆಪ್ತರಲ್ಲಿ ಮಾನ-ಮಾನ್ಯತೆ ಸ್ಥಾವರದಲ್ಲಿ ಅನುಕೂಲ ಸಂಗತಿಗಳು. ವಾದ ವಿವಾದಗಳಲ್ಲಿ ಪೂರ್ಣ ಇಲ್ಲವೆ ಅಂಥ ಅನುಕೂಲತೆಯನ್ನು ತೋರಿಸುವ ಲಕ್ಷಣಗಳು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಉತ್ತಮ. ಆದರೆ ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೫, ೧೮, ೧೯ ಅನುಕೂಲ.

ವೃಶ್ಚಿಕ

ಪ್ರಕೃತಿ ಬಹಳ ಉತ್ತಮ. ಮಕ್ಕಳಲ್ಲಿ ಹೆಚ್ಚಿನ ಉತ್ಕರ್ಷ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಅತಿಥಿಯೆಂದು ಬಂದ ಹೆಣ್ಣುಮಗಳ ಅಭಿಲಾಷೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಒಳ್ಳೆ ಕೆಲಸದಲ್ಲಿ ಆದರೂ ಹೆಚ್ಚು ವೆಚ್ಚ. ಮಿತ್ರಸುಖ ಉತ್ತಮ- ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ- ಆ ಪ್ರಮಾಣದಿಂದ ಪದರಿನಲ್ಲಿ ಪ್ರತ್ಯಕ್ಷ ಲಾಭ ಕಡಮೆಯೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಅನುರಾಧೆಯ ಕೊನೆಯ ೩ ಮತ್ತು ಜೇಷ್ಠಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೧೫, ೧೬, ೨೦, ೨೧, ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಸಾಧಾರಣ ಕೆಡುವದು. ಆದರೆ ಮಕ್ಕಳದು ಉತ್ತಮ. ಪ್ರಾಪಂಚಿಕ ಸುಖ ಅಸಮಾಧಾನಕರ. ಸ್ಥಾವರದಲ್ಲಿ ಮನಸ್ಸಿಗೆ ಹತ್ತುವಂಥ ವಿರುದ್ಧ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಢಳಮಳಿಸುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಆವೇಶ ಪ್ರವಾಸ ಅನುಕೂಲ- ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೬, ೧೭, ೧೮ ಅನುಕೂಲ.

ಮಕರ

ಮನೆಯಲ್ಲಿ ಬಹುತರ ಎಲ್ಲರ ಪ್ರಕೃತಿಗೆ ಚಿಲ್ಲರೆ ಕಾಹಿಲೆ ಇದ್ದುದೆ. ಆದರೆ ಉಳಿದ ಪ್ರಾಪಂಚಿಕ ಸಂಗತಿಗಳು ಮನಸ್ಸಿನಂತೆ. ಸ್ಥಾವರದಲ್ಲಿ ಸ್ವಲ್ಪ ಅನುಕೂಲ ಸಂಗತಿಗಳು. ಉದ್ಯೋಗದಲ್ಲಿ ಪ್ರತಿಷ್ಠೆ ಕಡಿಮೆಯೆ. ಆದರೆ ಪ್ರಗತಿ ಮತ್ತು ಲಾಭ ಉತ್ತಮ. ಪರಸ್ತ್ರೀಬಗ್ಗೆ ಚಂಚಲತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರಾಷಾಢಾದ ಕೊನೆಯ ೩ ಮತ್ತು ಶ್ರವಣಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೮, ೧೯, ೨೦, ೨೧ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣಟ್ರಸ್ಟ' ದ ಪರವಾಗಿ ಜಿ. ಬಾ. ಜೋಶಿಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

ಗೆಳೆತನ

[೧೫ನೇ ಪುಟದಿಂದ]

ಪಾವನನು ನಂದನನ ಎದುರು ನಿಂತು— ನನ್ನ ಕೂಗು ಕೇಳಲಿಲ್ಲವೇ? ಎಂದು ತೇಕುತ್ತ ಪ್ರಶ್ನಿಸಿದನು.

ನಂದನನ ಕಣ್ಣಿಂದ ನೀರು ಉದುರಹತ್ತಿದವು.

—ನಂದನ, ನನ್ನ ಕೂಗು ಕೇಳಲಿಲ್ಲವೇ? ಅವನ ಎರಡೂ ಕೈಗಳನ್ನು ಬಲವಾಗಿ ಹಿಡಿದನು.

—ಕೇಳಿತು ಪಾವನ. ನೀನು ಐದು ಸಾರೆ ಕೂಗಿದರೂ ನಾನು ಹತ್ತು ಸಾರೆ ಕೇಳಿದೆ.

—ನಿಲ್ಲಲಿಲ್ಲವೇಕೆ?

—ಬೇಕೆಂತಲೇ. ಅದಕ್ಕೇ ನನ್ನನ್ನು ಬಿಡು. ನಾನು ಹೋಗಬೇಕು. ಬಿಟ್ಟುಬಿಡು. ಕೈಕೊಸರಹತ್ತಿದನು.

—ನಿನ್ನ ಅವಸ್ಥೆ ಹೀಗೇಕೆ ನಂದನ? ಗೆಳೆಯ ನನ್ನು ಮರೆತೆಯಾ? ನಾನು ನಿನ್ನ ಜೀವದ ಗೆಳೆಯನಲ್ಲವೇ?

—ಹೇಗೆ ಮರೆಯಲಿ ಪಾವನ? ನಿನ್ನ ಗೆಳೆತನ, ನೆರವು ಪರೋಪಕಾರವನ್ನು ಮರೆತು ಈ ಶರೀರದ ಮಾಂಸ, ಎಲುವುಗಳನ್ನು ಯಾವ ನಾಯಿಗೆ ತಿನ್ನ ಹಚ್ಚಲಿ?

—ನಾನು ಬಂದುದನ್ನು ನೀನು ಅರಿಯೆಯಾ?

—ಅರಿತಿರುವೆ.

—ಅಕ್ಷಯಾ, ಸುಖವಾಗಿರುವಳೇ.

—ಹ..... ಪಾವನ!

—ತಂಗಿಯನ್ನು ಕಾಣದೆ ಬಹಳ ದಿನಗಳಾದುವು. ಆಕೆಯ ಕೈಯೂಟ ಉಣ್ಣಬೇಕೆಂದಿರುವೆ.

—ಪಾವನ ... . . !

—ಪೂರ್ವದ ನವಕರಿಯನ್ನು ಬಿಟ್ಟು ಇಲ್ಲಿಗೆ ಬಂದುದು ನನಗೆ ತಡವಾಗಿ ತಿಳಿಯಿತು.

—ನೀನು ಬಂದಿರುವಿಯೆಂದು ತಿಳಿದರೂ ನಾನು ಬೇಕೆಂತಲೇ ಬರಲಿಲ್ಲ ಪಾವನ.

—ಏಕೆ?

—ಪಾವನ, ನಿನ್ನ ಉಪಕಾರವು ನನಗೆ ಈಗಾಗಲೇ ಹೊರೆಯಾಗಿದೆ. ಭೆಟ್ಟಿಯಾಗಿ ಇನ್ನಷ್ಟು ಭಾರಮಾಡಿಕೊಳ್ಳಬಾರದೆಂದು ಕಾಣಲು ಬರಲಿಲ್ಲ.

—ಅಂದರೇನು ನಂದನ?

—ಪಾವನ, ನಿನ್ನ ಯಾವ ಮಾತಿಗೂ ಉತ್ತರ ಹೇಳುವಂತಹ ಸ್ಥಿತಿಯಲ್ಲಿಲ್ಲ. ಈಗ ನನ್ನನ್ನು ಬಿಡು, ನನ್ನನ್ನು ಬಿಟ್ಟುಬಿಡು. ನಿನ್ನ ರಾಷ್ಟ್ರಸೇವೆಯ ಕಾರ್ಯವು ನಿರ್ವಿಘ್ನವಾಗಿ ಸಾಗಲಿ. ನನ್ನಲ್ಲಿ 'ಪುಣ್ಯವು ಇದ್ದುದು ನಿಜವಿದ್ದರೆ ಅದು ನಿನಗೆ ನೆರವಾಗಲಿ. ನನ್ನನ್ನು ಬಿಟ್ಟುಬಿಡು. ನಾನು ಈಗ ಇಷ್ಟನ್ನೇ ಬಯಸಬೇಕು.

ನಂದನನ ಈ ಉತ್ತರದಿಂದ ಪಾವನನಿಗೆ ಏನೂ ತಿಳಿಯಲಿಲ್ಲ. ಹೆಚ್ಚು ಗೊಂದಲದಲ್ಲಿ ಬಿದ್ದನು. ಈ ಗೊಂದಲದ ಪರಿಸ್ಥಿತಿಯೇ ನಂದನನನ್ನು ಬಿಟ್ಟು ಹೋಗದಿರಲು ಪಾವನನನ್ನು ಪ್ರಚೋದಿಸಹತ್ತಿತು.

—ನಂದನ, ನಿನ್ನನ್ನು ಬಿಡಲಾರೆ. ನಿನ್ನ ಮಾತುಗಳಿಂದ ನನ್ನ ಸಹಾಯವು ನಿನಗೆ ಅವಶ್ಯವೆನಿಸಹತ್ತಿದೆ; ಬಿಡಲಾರೆ.

—ಪಾವನ, ಬಿಟ್ಟುಬಿಡು. ನಿನ್ನ ಕಾರ್ಯವು ನಿರಾತಂಕವಾಗಿ ಸಾಗಲಿ. ಬಿಟ್ಟುಬಿಡು. ಎಂದು ನುಡಿಯುತ್ತ ಕೈಬಿಡಿಸಿಕೊಳ್ಳಹತ್ತಿದನು.

—ನಂದನ, ನಾನು ಬಿಡಲಾರೆ. ಗಟ್ಟಿಯಾಗಿ ಹಿಡಿದನು.

—ಪಾವನ ನಾನು ನಿಲ್ಲಲಾರೆ. ಬಿಡು.

—-ಬಿಡಲಾರೆ- ಎಂದಿಗೂ ಬಿಡಲಾರೆ.

—ಪಾವನ . ... . . ಬಿಡು . ... . .

—ನಂದನ . . . ಇಲ್ಲ . . .

ಇವರ ಗೊಂದಲವು ಹೀಗೆ ನಡೆಯುತ್ತಲಿದ್ದ ಸಮಯದಲ್ಲಿ ನಂದನನ ನೆರೆಮನೆಯ ಒಬ್ಬನು ಓಡುತ್ತ ಬಂದು— ನಂದನ ಗುರುಗಳೇ, ಅಕ್ಷಯಾ ತಾಯಿಯವರು ನಿಮ್ಮನ್ನು ಸ್ಮರಿಸುತ್ತಿರುವರು. ಬೇಗ ಬರಬೇಕು ನಡೆಯಿರಿ.

—ಪಾವನ, ಇನ್ನಾದರು ಬಿಡು. ನಾನು ಓಡಬೇಕು.

—ಬಿಡಲಾರೆ. ತಮ್ಮ, ನಿನ್ನ ಅವಸರದ ಕರೆಗೆ ಕಾರಣವೇನು? ನಾನು ನಂದನನ ಗೆಳೆಯ.

—ಹಾಗಾದರೆ ನೀವೂ ನಡೆಯಿರಿ. ಅಲ್ಲಿಯೇ ತಿಳಿಯಬಹುದು.

ಪಾವನನು ಸಮೀಪದ ಟಾಂಗಾವಾಲನನ್ನು ಕರೆದನು. ಇಬ್ಬರೂ ಹತ್ತಿದರು.

ಹತ್ತಿಪ್ಪತ್ತು ನಿಮಿಷದಲ್ಲಿ ನಂದನನ ಮುರುಕು ಮನೆಯ ಮುಂದೆ ಇಬ್ಬರೂ ಇಳಿದರು.

ಮನೆಯಲ್ಲಿ ಎಲ್ಲವೂ ಶಾಂತ. ನೆರೆಹೊರೆಯ ನಾಲ್ಕಾರು ವೃದ್ಧೆಯರು ಒಳಗೂ ಹೊರಗೂ ನಿಂತು ಕಣ್ಣೊರಸಿಕೊಳ್ಳುತ್ತಿದ್ದರು. ನಂದನನು ಮುಂದೆ ಸಾಗಿದನು. ಪಾವನನು ಕೈಬಿಟ್ಟರಲಿಲ್ಲ. ನಡುಮನೆಗೆ ಹೋಗಿ ಮಲಗಿದ ಹೆಂಡತಿಯನ್ನು ತೋರಿಸಿ— ಪಾವನ, ಈಕೆಯೇ ಅಕ್ಷಯಾ, ನಿನ್ನ ತಂಗಿ. ಎಂದು ನಡುಗುತ್ತ ಹೇಳಿದನು.

ಪಾವನನಿಗೆ ಎಲ್ಲವೂ ತಿಳಿಯಿತು. ಅವಳಹತ್ತರ ಕುಳಿತು ಮೋರೆಯ ಮೇಲಿನ ಮುಸುಕು ತೆರೆದು ಅಕ್ಷಯಾ, ನಿನ್ನಣ್ಣ ಪಾವನನು ಬಂದಿರುವನು, ಎಂದು ಚೀರಿದನು.

ನಿಂತವರಲ್ಲಿ ಒಬ್ಬಳು- ಇದೇ ಐದು ನಿಮಿಷವಾಯಿತು ತೀರಿಕೊಂಡು- ಸಾಯುವಮುಂದೆ ಪಾವನನನ್ನು ಕರೆದು ತನ್ನಿರಿ ಎಂದು ನಾಲ್ಕಾರು ಸಾರೆ ನುಡಿದಳು ಒಂದು ಹೇಳಿದಳು.

—ನಂದನ ಮೂರು ದಿನಗಳಿಂದಲೂ ಇದನ್ನು ಮುಚ್ಚಿಟ್ಟದ್ದೆಯಾ? ಎಂದು ಕಣ್ಣೊರಸುತ್ತ ಬಿರುಸಾಗಿ ನುಡಿದನು.

—ಪ್ರಾಪಂಚಿಕ ತೊಂದರೆಯು ನಿನಗೆ ತಟ್ಟದಿರಲಿ, ನನ್ನ ದಾರಿದ್ರ್ಯದ ಅಸಹಾಯಸ್ಥಿತಿಯು ನಿನ್ನ ಕರ್ತವ್ಯಕರ್ಮಕ್ಕೆ ತಡೆಗಟ್ಟದಿರಲಿ, ನಿನ್ನ ಸೇವೆ ನಿರಾತಂಕವಾಗಿ ಸಾಗಲಿ ಎಂದು ಎಷ್ಟು ಬಗೆಯಿಂದ ಪ್ರಯತ್ನಿಸಿದರೂ ನಿನ್ನನ್ನು ಇಲ್ಲಿಗೆ ನನ್ನ ದುರ್ದೈವವೇ ಎಳೆದು ತಂದಿತು. ನನ್ನ ಎಣಿಕೆಯ ವಿರುದ್ಧವೇ ಇದೆಲ್ಲ ನಡೆಯಿತು.

—ನಂದನ, ನಾನು ಮಾನವನು. ನಿನ್ನ ಗೆಳೆಯನು. ಅಕ್ಷಯಾಳ ಅಣ್ಣನು. ಸಾಮಾನ್ಯ ಮಾನವರಲ್ಲಿದ್ದ ರಕ್ತ-ಮಾಂಸ ಮತ್ತು ದಯೆ- ಸ್ನೇಹ ನನ್ನಲ್ಲಿಯೂ ಇವೆ. ನಾನು ಅವುಗಳನ್ನು ತೊರೆದುಕೊಂಡು ನಿಂತಿಲ್ಲ. ಎಂದು ಬಿಸಿಯಾಗಿ ಮಾತಾಡಿದನು.

—ಪಾವನ, ಇದಕ್ಕೆ ನಾನು ಏನೆಂದು ಉತ್ತರ ಹೇಳಲಿ? ಅಪರಾಧವಾಗಿದ್ದರೆ ಕ್ಷಮಿಸು ಎಂದು ಕಾಲು ಹಿಡಿಯ ಹೋದನು.

—ನಂದನ, ಅಕ್ಷಯಾ ಹೋದರೂ ನನ್ನ ನಂದನನು ನನಗೆ ಇನ್ನೂ ಇರುವನು! ಎಂದು ಎತ್ತಿ ಅಪ್ಪಿಕೊಂಡನು.

ಕುಂಭ

ಪ್ರಕೃತಿ ಸಾಧಾರಣವೆ. ಹೆಂಡತಿಯ ಗೂಡ ಮೇಲಿಂದ ಮೇಲೆ ವಿರೋಧ. ಉಳಿದ ವಿಷಯಗಳಲ್ಲಿಪ್ರಾಪಂಚಿಕ ಸುಖ ಮನಸ್ಸಿನಂತೆ ಉದ್ಯೋಗದಲ್ಲಿ ಎಲ್ಲ ಬಗೆಯ ಉತ್ಕರ್ಷ ಮತ್ತು ವರ್ಧಿಷ್ಣುತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ. ಮಿತ್ರರಿಂದ ವಚನಭಂಗ. ಪ್ರವಾಸಾದಿ ಕೆಲಸ ಸುಖಕರ. ಶತತಾರಿಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೮, ೧೯, ೨೦, ೨೧ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಪ್ರಾಪಂಚಿಕ ಕಿರಕಳ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರಸುಖ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಸ್ವಪ್ನ ಶುಭಸೂಚಕ ಆದರೆ ನಿದ್ರಾಭಂಗ ವಿಪರೀತ. ಪ್ರವಾಸಾದಿ ಕೆಲಸ ಸುಖಕರ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೫, ೧೬, ೧೭, ೨೧ ಅನುಕೂಲ.

ಚಂದಾದಾರರಲ್ಲಿ ವಿನಂತಿ

—*—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚಸಹಿತ (ಚಂದಾಹಣ ಮುಂಗಡ)

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧-೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.